ಅಕ್ಟೋಬರ್ 12, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2006
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಬೆಂ.ದಕ್ಷಿಣ ಜಿಲ್ಲಾಧಿಕಾರಿಯಿಂದ ನೋಟೀಸ್...



# ಬಿಗ್ ಬಾಸ್ ಕ್ಲೋಸ್?!




## ಜಡ್ಜ್ ಖುದ್ದಾಗಿ ಜೈಲಿಗೆ ಭೇಟಿ ನೀಡಲಿ!

## ಐ ಲವ್ ಮೊಹಮ್ಮದ್ v/s ಐ ಲವ್ ಮಹಾದೇವ್!

## ಸೊಸೆಯೊಂದಿಗೆ ಮಜಾ ಮಾಡ್ತಿದ್ದ ಮಾವ ಖಲಾಸ್!





## ದಂಧೆಕೋರರಿಗೆ ಋತುಮತಿ ಬಾಲಕಿಯರೇ ಟಾರ್ಗೆಟ್!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಇಂಗ್ಲೀಷ್ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

1) ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
2) ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
3) ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
4) ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
5) ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
6) ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
7) ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
8) ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'**

# ಕೆಂಪಯ್ಯ ಬೇಗ ಗುಣ ಮುಖರಾಗಿ ಬರಲಿ....





**ಕೆಂ**ಪಯ್ಯ ಐಪಿಎಸ್... ಈ ಹೆಸರು ಕೇಳಿದೊಡನೆ ಮೈಯ್ಯಲ್ಲಿ ಕರೆಂಟ್ ಪಾಸ್ ಆಗುತ್ತೆ ಅಲ್ವಾ. ಅವರು ದಕ್ಷ ಪೊಲೀಸ್ ಅಧಿಕಾರಿಯಷ್ಟೇ ಅಲ್ಲ, ಮಾನವತಾವಾದಿ ಕೂಡ. ನಮ್ಮ ಸಂಪಾದಕರಿಗೂ ಅವರಿಗೂ ಇದ್ದ ಗೆಳೆತನ-ಒಡನಾಟ ಅನನ್ಯವಾದದ್ದು, ಪ್ರತಿ ವಾರದ ಪೊಲೀಸ್ ನ್ಯೂಸ್ ಪತ್ರಿಕೆಯಲ್ಲಿ ಕೆಂಪಯ್ಯನವರ ಒಂದಿಲ್ಲೊಂದು ಸುದ್ದಿ ಇರಲೇಬೇಕಿತ್ತು. ಅವರೂ ಅಷ್ಟೇ, ಬಿಡುವು ಸಿಕ್ಕಾಗ ಕಚೇರಿಗೆ ಬರುತ್ತಿದ್ದರು. ಫೋನ್ ಕರೆ ಮಾಡಿ ನಮ್ಮೊಡನೆ ಮಾತಾಡುತ್ತಿದ್ದರು. ಇವೆಲ್ಲಾ ನಾವೇ ತೆಗಿದಿದ್ದ ಫೋಟೋಸ್. ಅವರೀಗ ಖಾಯಿಲೆಗೆ ತುತ್ತಾಗಿ ಕೃಷ್ಣರಾಗಿದ್ದಾರೆ. ನೋಡಲು ಬಹಳ ಕಷ್ಟವಾಗುತ್ತದೆ.

ಸಿದ್ದರಾಮಯ್ಯ ಸರ್ಕಾರ ಬಂದರೂ ಕೆಂಪಯ್ಯ ಯಾಕೆ ಕಾಣಿಸುತ್ತಿಲ್ಲ? ಎಂದು ಆಶ್ಚರ್ಯ ಪಡುವ ಮಂದಿಗೆ ಈಗ ಉತ್ತರ ಸಿಕ್ಕಿರಬೇಕು. ಖಾಯಿಲೆ ಪೀಡಿತ ಕೆಂಪಯ್ಯನವರನ್ನು ಚಿಕಿತ್ಸೆಗಾಗಿ ಲಂಡನ್‌ಗೆ ಕಳುಹಿಸಿಕೊಟ್ಟವರು ಶಿವರಾಜ್ ಕುಮಾರ್. ಅವರು ಕ್ಯಾನ್ಸರ್ ಚಿಕಿತ್ಸೆ ಪಡೆದುಕೊಂಡು ಬಂದ ಆಸ್ಪತ್ರೆಗೆ ಶಿಫಾರಸ್ಸು ಮಾಡಿದ್ದಾರೆ. ಕೆಂಪಯ್ಯ ಅಲ್ಲಿಯಾದರೂ ಗುಣಮುಖರಾಗಲಿ ಎಂಬಾಸೆ ನಮ್ಮದು. ಈ ಸಂದರ್ಭದಲ್ಲಿ ನಿಮಗೊಂದು ಘಟನೆ ತಿಳಿಸಬೇಕು ಅನ್ನಿಸುತ್ತದೆ.

24 ವರ್ಷಗಳ ಹಿಂದೆ ಡಾ. ರಾಜ್‌ಕುಮಾರ್ ಅವರನ್ನು ಕಾಡುಗಳ್ಳ ವಿರಪ್ಪನ್ ಅಪಹರಿಸಿದ್ದ ಸಂದರ್ಭ. ಅದಾಗಲೇ ಟಾಡಾ ಕಾಯ್ದೆ ಅಡಿ ಬಂಧಿತರಾಗಿ ಏಳೆಂಟು ವರ್ಷಗಳಿಂದ ವಿಚಾರಣೆಯಿಲ್ಲದೆ ಮೈಸೂರು ಜೈಲಿನಲ್ಲಿ ಕೊಳೆಯುತ್ತ ಬಿದ್ದಿದ್ದ ಗೋಪಿನಾಥಂ ಗ್ರಾಮದ 12 ಮಹಿಳೆಯರನ್ನು ಬಿಟ್ಟರೆ ಮಾತ್ರ ನಾನು ರಾಜ್ ಕುಮಾರ್‌ರನ್ನು ಬಿಡುತ್ತೇನೆ ಎಂದು ಷರತ್ತು ವಿಧಿಸಿದ್ದ! ಅದಕ್ಕೆ ಸರ್ಕಾರ ಒಪ್ಪಿತ್ತು. ಆದರೆ ಆ ಮಹಿಳೆಯರೇ ಜೈಲಿನಿಂದ ಹೊರ ಬರಲು ಒಪ್ಪಿರಲಿಲ್ಲ. ಹೊರಬಂದರೂ ತಮ್ಮನ್ನು ಗ್ರಾಮದ ಜನ ಸ್ವಿಕರಿಸುವುದಿಲ್ಲ ಎಂಬ ಭಯ ಅವರಿಗಿತ್ತು.



ಆಗ ಆ ಮಹಿಳೆಯರ ನೆರವಿಗೆ ಧಾವಿಸಿದವರು ಶ್ರೀಮತಿ ಪಾರ್ವತಮ್ಮ! ತಮ್ಮ ಪತಿಯನ್ನು ಅಪಹರಿಸಿರೋ ಕಾಡುಗಳ್ಳನ ಬೆಂಬಲಿಗರಿವರು ಎಂಬುದು ಗೊತ್ತಿದ್ದರೂ ಅವರನ್ನು ಪಾರ್ವತಮ್ಮ ಕ್ಷಮಿಸಿ, ನೊಂದ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸಲೆಂದೇ ತಾವು ಮೈಸೂರಿನಲ್ಲಿ ಸ್ಥಾಪಿಸಿದ್ದ 'ಶಕ್ತಿಧಾಮ'ದಲ್ಲಿ ಅವರಿಗೆಲ್ಲ ಆಶ್ರಯ ಕಲ್ಪಿಸಿದ್ದರು.ಐಪಿಎಸ್ ಅಧಿಕಾರಿ ಕೆಂಪಯ್ಯ 1997ರಲ್ಲಿ ಮೈಸೂರಿನಲ್ಲಿ ಪೊಲೀಸ್ ಕಮಿಷನರ್ ಆಗಿ ಸೇವೆ ಸಲ್ಲಿಸುತ್ತಿದ್ದ ದಿನಗಳಲ್ಲಿ, ಕೆಲವು ಲಾಡ್ಜ್‌ಗಳ ಮೇಲೆ ದಾಳಿ ನಡೆಸಿ, ಅಲ್ಲಿಂದ ರಕ್ಷಿಸಿದ ವೇಶ್ಯೆಯರಿಗೆ ಪುನರ್ವಸತಿ ಕಲ್ಪಿಸಲು ಯೋಚಿಸಿದಾಗ ಹುಟ್ಟಿದ ಸಂಸ್ಥೆಯೇ ಶಕ್ತಿಧಾಮ... ಕೆಂಪಯ್ಯ ಐಪಿಎಸ್, ಶ್ರೀಮತಿ ಪಾರ್ವತಮ್ಮ ರಾಜ್ ಕುಮಾರ್, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು, ಹಿರಿಯ ಪತ್ರಕರ್ತ ರಾಜಶೇಖರ ಕೋಟಿ ಅವರು ಈ ಸಂಸ್ಥೆಯ ರೂವಾರಿಗಳು.

☞10



ಸಂಪಾದಕ
**ಎಂ. ರಾಹುಲ್**

**ನನ್ನ ಟೀಂ**

ಹೆಚ್.ಕೆ. ಮಹದೇವ್
ಸಿದ್ದು ಮನ್ನಾಪೂರ
ಮೋಹನ್ ಬೋಳಂಗಡಿ
ಕೋ.ನಾ. ಪ್ರಭಾಕರ್
ವೀರಶೆಟ್ಟಿ ಕುಂಬಾರ
ಬಿ.ಎಂ. ಲವಕುಮಾರ್
ಶಾಂತರಾಜು ಬಿ. ಕಲ್ಲಹಳ್ಳಿ
ಬಿ.ವಿ. ಕುಲಕರ್ಣಿ
ಡಿ. ಸಿದ್ದರಾಜು
ರಾಜೀವ್ ಕೆ. ಬೈರಿ
ಸಂತೋಷ್‌ಕುಮಾರ್ (ಜ್ಯೋತಿಷಿ)
ವೀರನಗೌಡ
ಮಂಜುನಾಥ ಕರೋಳಿ

ಅಕ್ಷರ ಜೋಡಣೆ :
**ಈ. ರಾಜೇಶ್**
ಪ್ರಸರಣಾಧಿಕಾರಿ :
**ಜಿ. ವೀರನಗೌಡ**

# ಮುಖ್ಯ ನ್ಯಾಯಮೂರ್ತಿಗಳತ್ತ ಶೂ ಎಸೆಯೋದು ಅಂದ್ರೆ ಅದು ಸಂವಿಧಾನಕ್ಕೆ ಬಗೆವ ದ್ರೋಹವಲ್ಲದೆ ಮತ್ತೇನು?!

ಸುಪ್ರೀಂ ಕೋರ್ಟ್‌ನ ಅರ್ಥಾತ್ ಭಾರತ ದೇಶದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಪೀಠದ ಕಡೆ ಶೂ ಎಸೆತ ಪ್ರಕರಣ ದೇಶಾದ್ಯಂತ ತೀವ್ರ ಸಂಚಲನ ಮೂಡಿಸಿದ್ದು, ಸಂವಿಧಾನ ಪಾಲಕರ ಆಕ್ರೋಶಕ್ಕೆ ಕಾರಣವಾಗಿದೆ. ಇದು ಕೇವಲ ಅವರ ಮೇಲಿನ ದಾಳಿಯಷ್ಟೇ ಅಲ್ಲ, ಸಂವಿಧಾನದ ಮೇಲಿನ ದಾಳಿಯಾಗಿದೆ ಎಂದು ಪ್ರಜ್ಞಾವಂತ ಪ್ರಜೆಗಳು ತೀವ್ರ ವಾಗಿ ಖಂಡಿಸಿದ್ದಾರೆ.

ಸ್ವತಃ ಪ್ರಧಾನಿ ಮೋದಿ ಅವರೇ ಈ ದುರ್ಘಟನೆಯನ್ನು ಅತ್ಯಂತ ಕೆಟ್ಟ ಕೃತ್ಯವೆಂದು ಖಂಡಿಸಿ, ಅಂತಹ ಸಮಯದಲ್ಲೂ ಸಂಯಮ ಕಾಯ್ದುಕೊಂಡು ಸಂವಿಧಾನದ ಘನತೆಯನ್ನು ಎತ್ತಿ ಹಿಡಿದ ಚೀಫ್ ಜಸ್ಟಿಸ್ ಗವಾಯಿ ಅವರನ್ನ ಹಾಡಿ ಹೊಗಳಿದ್ದಾರೆ. ಇನ್ನೂ ವಿಪಕ್ಷ ನಾಯಕಿ ಸೋನಿಯಾ ಗಾಂಧಿ ಅವರಂತೂ ಕೆಂಡ ಕಾರಿದ್ದಾರೆ.

ಭಾರತದ ಗೌರವಾನ್ವಿತ ಮುಖ್ಯ ನ್ಯಾಯಾಧೀಶರ ಮೇಲಿನ ದಾಳಿಯನ್ನು ಸುಪ್ರೀಂ ಕೋರ್ಟ್‌ನಲ್ಲಿಯೇ ಖಂಡಿಸಲು ಯಾವುದೇ ಪದಗಳು ಸಾಕಾಗುವುದಿಲ್ಲ, ಇದು ಅವರ ಮೇಲಿನ ಹಲ್ಲೆ ಮಾತ್ರ ವಲ್ಲ, ನಮ್ಮ ಸಂವಿಧಾನದ ಮೇಲಿನ ಹಲ್ಲೆಯಾಗಿದೆ ಎಂದು ಅವರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.


ವಕೀಲ ರಾಕೇಶ್ ಕಿಶೋರ್

ಮುಖ್ಯ ನ್ಯಾಯಮೂರ್ತಿ ಗವಾಯಿ ಅವರು ತುಂಬಾ ಕರುಣಾಮಯಿಯಾಗಿದ್ದಾರೆ. ಆದರೆ ರಾಷ್ಟ್ರವು ತೀವ್ರ ದುಃಖ ಮತ್ತು ಆಕ್ರೋಶದ ಭಾವನೆಯೊಂದಿಗೆ ಅವರೊಂದಿಗೆ ಒಗ್ಗಟ್ಟಿನಿಂದ ನಿಲ್ಲಬೇಕು ಎಂದು ಪಕ್ಷ ಭೇದ ಮರೆತು ಎಲ್ಲಾ ಮುಖಂಡರು ಕರೆ ನೀಡಿದ್ದಾರೆ.

ನಡೆದಿದ್ದೇನೆಂದರೆ, ಮೊನ್ನೆ ಸೋಮವಾರ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಕೋರ್ಟ್ ರೂಂ ನಂ.1ರಲ್ಲಿ ಕಲಾಪದಲ್ಲಿ ತೊಡಗಿದ್ದಾಗ, ವಾದ ಮಾಡುತ್ತಿದ್ದ ವಕೀಲ ರಾಕೇಶ್ ಕಿಶೋರ್ ದಿಢೀರ್ ಗಲಾಟೆ ಶುರುಮಾಡಿದ್ದು, ತಮ್ಮ ಶೂ ಎತ್ತಿಕೊಂಡು ಮುಖ್ಯ ನ್ಯಾಯಮೂರ್ತಿಯವರತ್ತ ಎಸೆಯಲು ಪ್ರಯತ್ನಿಸಿದ್ದಾನೆ. ತಕ್ಷಣ ನ್ಯಾಯಾಲಯದಲ್ಲಿ ಹಾಜರಿದ್ದ ಭದ್ರತಾ ಸಿಬ್ಬಂದಿ ಅವನನ್ನು ಬಂಧಿಸುತ್ತಿದ್ದಂತೆ, ವಕೀಲ ರಾಕೇಶ್, ಸನಾತನ್ ಕಾ ಅಪಮಾನ್ ನಹಿ ಸಹೇಂಗೆ (ಸನಾತನ ಧರ್ಮದ ಮೇಲಣ ಅವಮಾನವನ್ನು ನಾನು ಸಹಿಸುವುದಿಲ್ಲ) ಎಂದು ಕೂಗಿದ್ದಾನೆ. ಆಗ ಅಲ್ಲಿದ್ದ ಭದ್ರತಾ ಸಿಬ್ಬಂದಿಗಳು ತಕ್ಷಣ ಅವನನ್ನು ಸೆರೆ ಹಿಡಿದು ನ್ಯಾಯಾಲಯದ ಕೊಠಡಿಯಿಂದ ಹೊರಕ್ಕೆ ಕರೆದೊಯ್ದು ಸುಪ್ರೀಂ ಕೋರ್ಟ್‌ನ ಭದ್ರತಾ ಘಟಕಕ್ಕೆ ಹಸ್ತಾಂತರಿಸಿದ್ದಾರೆ.

ಇನ್ನು ಈ ಆಘಾತಕಾರಿ ಬೆಳವಣಿಗೆಯ ಹೊರತಾಗಿಯೂ ಸಿಜೆಐ ಗವಾಯಿ ಅವರು ತಾಳ್ಮೆ ಕಳೆದುಕೊಳ್ಳದೆ 'ಇದರಿಂದ ಯಾರೂ ವಿಚಲಿತರಾಗಬೇಡಿ. ನಾವು ವಿಚಲಿತರಾಗಿಲ್ಲ.... ಇಂತಹ ವಿಷಯಗಳು ನನ್ನ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಹೇಳಿ ಕೋರ್ಟ್ ಹಾಲ್‌ನಲ್ಲಿದ್ದ ವಕೀಲರಿಗೆ ತಮ್ಮಗಳ ವಾದವನ್ನು ಮುಂದುವರೆಸಲು ಸೂಚಿಸಿದ್ದಾರೆ!

ದೆಹಲಿ ಪೊಲೀಸ್ ಅಧಿಕಾರಿಯೊಬ್ಬರ ಪ್ರಕಾರ, ಅವಿವೇಕಿ ಹಾಗೂ ಆರೋಪಿ ದೆಹಲಿಯ ಮಯೂರ್ ವಿಹಾರ್ ಪ್ರದೇಶದ ನಿವಾಸಿ ಮತ್ತು ಸುಪ್ರೀಂ ಕೋರ್ಟ್‌ನ ಬಾರ್ ಅಸೋಸಿಯೇಷನ್ (SCBA) ನ ನೋಂದಾಯಿತ ಸದಸ್ಯರಾಗಿದ್ದಾರೆ ಎಂದು ತಿಳಿಸಿದ್ದಾರೆ. ಈ ಘರ್ಷಣೆಯ ಹಿನ್ನಲೆಯಲ್ಲಿ ತಿಳಿದು ಬಂದದ್ದೇನೆಂದರೆ, ಮಧ್ಯಪ್ರದೇಶದ ಯುನೆಸ್ಕೋ ವಿಶ್ವ ಪರಂಪರೆಗೆ ಸೇರ್ಪಡೆಯಾಗಿರುವ ಖಜುರಾಹೊ ದೇವಾಲಯ ಸಂಕೀರ್ಣದ ಭಾಗವಾಗಿರುವ ಜವಾರಿ ದೇವಾಲಯದಲ್ಲಿ ಏಳು ಅಡಿ ಎತ್ತರದ ವಿಷ್ಣುವಿನ ವಿಗ್ರಹವನ್ನು ಪುನರ್ನಿರ್ಮಿಸಲು ಮತ್ತು ಮರುಸ್ಥಾಪಿಸಲು ನಿರ್ದೇಶನಗಳನ್ನು ಕೋರಿ ಸಲ್ಲಿಸಲಾದ ಅರ್ಜಿಯನ್ನು ಸಿಜೆಐ ಗವಾಯಿ ನೇತೃತ್ವದ ಪೀಠ ವಜಾಗೊಳಿಸಿತ್ತು.


ಜಸ್ಟಿಸ್ ಬಿ.ಆರ್. ಗವಾಯಿ

ಮೊಘಲ್ ಆಕ್ರಮಣದ ಸಮಯದಲ್ಲಿ ವಿಗ್ರಹವು ವಿರೂಪಗೊಂಡಿದ್ದು, ಅದನ್ನು ಪುನಃಸ್ಥಾಪಿಸಲು ಸರ್ಕಾರಕ್ಕೆ ಪದೇ ಪದೇ ಮನವಿ ಮಾಡಿದರೂ ಅದು ಅದೇ ಸ್ಥಿತಿಯಲ್ಲಿದೆ ಎಂದು ರಾಕೇಶ್ ದಲಾಲ್ ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ಈ ಪ್ರಕರಣ ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಮೀಕ್ಷೆಯ (ASI) ವ್ಯಾಪ್ತಿಗೆ ಬರುತ್ತದೆಯೇ ಹೊರತು ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ, ಏನೇ ಮಾಡುವುದರಿದ್ದರೂ ಎಎಸ್‌ಐ ಅನುಮತಿ ನೀಡಬೇಕಾಗಿದೆ ಎಂದು ತಿಳಿಸಿದ್ದರು. ಜೊತೆಗೆ, ನೀವು (ಅರ್ಜಿದಾರರು) ಸಂಪೂರ್ಣವಾಗಿ ಪ್ರಚಾರ ಹಿತಾಸಕ್ತಿಗಾಗಿ ಈ ಅರ್ಜಿಯನ್ನು ಸಲ್ಲಿಕೆ ಮಾಡಿದ್ದೀರಿ....ಹೋಗಿ, ದೇವರಲ್ಲೇ ಏನಾದರೂ ಮಾಡುವಂತೆ ಬೇಡಿಕೊಳ್ಳಿ, ನೀವು ವಿಷ್ಣುವಿನ ಕಟ್ಟಾ ಭಕ್ತ ಎಂದು ಹೇಳುತ್ತೀರಿ. ಆದ್ದರಿಂದ ಈಗಲೇ ಹೋಗಿ ಪ್ರಾರ್ಥಿಸಿ ಮತ್ತು ಸ್ವಲ್ಪ ಧ್ಯಾನ ಮಾಡಿ ಎಂದು ಸಿಜೆಐ ಗವಾಯಿ ಹೇಳಿದ್ದರು! ಇದರಿಂದ ಅಸಮಾಧಾನಗೊಂಡಿದ್ದ ವಕೀಲ ರಾಕೇಶ್ ಕಿಶೋರ್(71) ನ್ಯಾಯಮೂರ್ತಿ ಪೀಠದತ್ತ ಶೂ ಎಸೆದು ಇಡೀ ರಾಷ್ಟ್ರವೇ ತಲೆ ತಗ್ಗಿಸುವಂತೆ ಮಾಡಿ ಪೊಲೀಸ್ ಕಸ್ಟಡಿಯಲ್ಲಿದ್ದಾನೆ.





ಛೇ, ಎಂಥ ದುರ್ಘಟನೆ ನಡೆದು ಹೋಯಿತಲ್ಲವೇ... ಆ ವಕೀಲನಿಗೆ ನಾಳೆ ಶಿಕ್ಷೆ ಆಗಬಹುದು. ಇನ್ನೂ ಜೀವಮಾನದಲ್ಲೇ ವಕೀಲಿಕೆ ಮಾಡದಂತೆ ಆದೇಶವಾಗಬಹುದು. (ದೆಹಲಿ ಬಾರ್‌ಕೌನ್ಸಿಲ್ ಅಂತೂ ಈಗಾಗಲೇ ಅವನ ಸದಸ್ಯತ್ವ ರದ್ದು ಮಾಡಿದೆ.) ಏನೇ ಆದರೂ ನ್ಯಾಯಾಂಗ ವ್ಯವಸ್ಥೆಯಲ್ಲೇ ಬಿದ್ದ ಇದೊಂದು 'ಕಪ್ಪುಚುಕ್ಕೆ' ಜನ ಮಾನಸ ದಿಂದ ಅಳಿಸಿ ಹೋಗದು...

**-ಸಂ.**

# ಜಡ್ಜ್ ಖುದ್ದಾಗಿ ಜೈಲಿಗೆ ಭೇಟಿ ನೀಡಿ ಪರಿಶೀಲಿಸಲು ದರ್ಶನ್ ಮನವಿ!

ನಟ ದರ್ಶನ್ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ತನಗೆ ಮೂಲಸೌಕರ್ಯವನ್ನೇ ನೀಡುತ್ತಿಲ್ಲ ಎಂದು ನಿನ್ನೆ ಸೋಮವಾರ ಮೂರನೇ ಬಾರಿಗೆ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಜೊತೆಗೆ ಈ ಬಗ್ಗೆ ಖುದ್ದು ನ್ಯಾಯಾಧೀಶರೇ ಜೈಲಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕೆಂದು 64ನೇ ಸಿಸಿಎಚ್ ಕೋರ್ಟ್‌ಗೆ ಸಿಆರ್‌ಪಿಸಿ ಸೆಕ್ಷನ್ 310ರ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಅಕ್ಟೋಬರ್ 9ನೇ ತಾರೀಖು ಈ ಅರ್ಜಿ ವಿಚಾರಣೆ ನಡೆಯಲಿದೆ. ಈ ಹಿಂದೆ ಸಲ್ಲಿಸಿದ್ದ ಅರ್ಜಿ ಕೂಡ ಅಂದೇ ವಿಚಾರಣೆಗೆ ಬರಲಿದೆ.

ಜೈಲಿನ ಅಧಿಕಾರಿಗಳು ಕಾನೂನಿನ ಪ್ರಕಾರ ತನಗೆ ಎಲ್ಲಾ ಸೌಲಭ್ಯ ನೀಡಿದ್ದೇವೆ ಅನ್ನುತ್ತಾರಲ್ಲ, ಆ ಸೌಲಭ್ಯಗಳನ್ನು ಖುದ್ದು ಜಡ್ಜ್ ಅವರೇ ಜೈಲಿಗೆ ಭೇಟಿ ನೀಡಿ ಪರಿಶೀಲಿಸಬೇಕೆಂದು ನಟ ದರ್ಶನ್ ಮನವಿ ಮಾಡಿಕೊಂಡಿದ್ದಾರೆ. ಕೋರ್ಟ್ ಆದೇಶ ನೀಡಿದ್ದರೂ, ತನಗೆ ಜೈಲಿನಲ್ಲಿ ಮೂಲಭೂತ ಸೌಕರ್ಯವನ್ನು ನೀಡಿಲ್ಲ, ಹೀಗಾಗಿ ಜೈಲು ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಕೇಸ್ ದಾಖಲಿಸಲು ಕೋರ್ಟ್ ಆದೇಶ ನೀಡಬೇಕೆಂದು ಕೋರಿ ಈ ಹಿಂದೆ ನಟ ದರ್ಶನ್ ಸಲ್ಲಿಸಿದ್ದ ಅರ್ಜಿಯ ಆದೇಶವನ್ನು ಕೋರ್ಟ್ ಇದೇ ಅಕ್ಟೋಬರ್ 9ಕ್ಕೆ ಕಾಯ್ದಿರಿಸಿದೆ.

ಆ ಅರ್ಜಿಯ ಬಗ್ಗೆ ಆದೇಶ ನೀಡುವ ಮುನ್ನವೇ ಮಾನ್ಯ ನ್ಯಾಯಾಧೀಶರು ಜೈಲಿಗೆ ಭೇಟಿ ನೀಡಿ ಜೈಲಿನ ಮೂಲಸೌಕರ್ಯ ಪರಿಶೀಲಿಸುವಂತೆ ಮಾನ್ಯ ನ್ಯಾಯಾಧೀಶರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಅಲ್ಲದೆ, ಕ್ವಾರಂಟೈನ್ ಸೆಲ್ ನಲ್ಲಿಯೇ ದರ್ಶನ್‌ರನ್ನು ಇಡಲಾಗಿದೆಯೇ? ಅಥವಾ ಅಲ್ಲಿಂದ ಬೇರೆಡೆ ಸ್ಥಳಾಂತರ ಮಾಡಿದ್ದಾರೆಯೇ ಎಂಬುದನ್ನ ಖಾತರಿ ಪಡಿಸಿಕೊಳ್ಳಲು ದಯವಿಟ್ಟು ಜೈಲಿಗೆ ಬರಬೇಕು ಎಂದು ದಾಸ ಮನವಿ ಮಾಡಿಕೊಂಡಿದ್ದಾರೆ. ತಾವು ಜೈಲಿಗೆ ಭೇಟಿ ನೀಡಿದ ಬಳಿಕವೇ ನ್ಯಾಯಾಂಗ ನಿಂದನೆ ಕೇಸ್ ದಾಖಲಿಸಿಲು ಕೋರಿರುವ ಅರ್ಜಿಯ ಬಗ್ಗೆ ಆದೇಶ ನೀಡುವಂತೆ ದರ್ಶನ್ ಪರ ವಕೀಲರು



ಈಗ ಹೊಸ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ಈ ಹೊಸ ಅರ್ಜಿಯ ವಿಚಾರಣೆಯನ್ನು ಕೋರ್ಟ್ ಅಕ್ಟೋಬರ್ 9 ಕ್ಕೆ ನಡೆಸಲಿದೆ.

ಅಂದಹಾಗೆ, ದರ್ಶನ್‌ಗೆ ದಿಂಬು-ಬೆಡ್‌ಶೀಟ್ ನೀಡದ ಸೆಂಟ್ರಲ್ ಜೈಲ್ ಒಳಗಡೆ ರೌಡಿಶೀಟರ್ ಒಬ್ಬನ ಬರ್ತ್‌ಡೇ ಭರ್ಜರಿಯಾಗಿ ನಡೆದದ್ದು ಹೇಗೆ? ಅಂದು ಆ ರೌಡಿ 250 ಕೆಜಿ ಮಾಂಸ ತರಿಸಿ ಔತಣ ನೀಡಿದ್ದು ಹೇಗೆ?

# ದಂಧೆಕೋರರಿಗೆ ಋತುಮತಿಯಾದ ಬಾಲಕಿಯರೇ ಟಾರ್ಗೆಟ್!



**ಇಂತಹದೊಂದು ಪೈಶಾಚಿಕ ಕೃತ್ಯಗಳು ನಾಗರಿಕ ಸಮಾಜದಲ್ಲಿ ಇನ್ನೂ ನಡೆಯುತ್ತಿದೆಯಾ? ಎಂಬ ಪ್ರಶ್ನೆಗಳು ಮೂಡುತ್ತಿವೆ. ಇತ್ತೀಚೆಗೆ ಅಪ್ರಾಪ್ತ ಬಾಲಕಿಯರು ನಾಪತ್ತೆಯಾಗುತ್ತಿರುವ ಪ್ರಕರಣಕ್ಕೂ ಈಗ ಬೆಳಕಿಗೆ ಬಂದಿರುವ ಕೃತ್ಯಕ್ಕೂ ನಂಟಿದೆಯಾ? ಎಂಬ ಪ್ರಶ್ನೆಗಳು ಸಾರ್ವಜನಿಕ ವಲಯದಲ್ಲಿ ಹುಟ್ಟಿಕೊಳ್ಳುತ್ತಿದೆ. ಬೇಲಿಯೇ ಎದ್ದು ಹೊಲ ಮೇಯ್ದರೆ ಕಾಯುವವರು ಯಾರು? ಎಂಬಂತೆ ಈಗ ಹೆಂಗಸರೇ ದುಡ್ಡಿನಾಸೆಗೆ ಬಾಲಕಿಯರನ್ನು ಮಾರಾಟ ಮಾಡುವ ದಂಧೆಗೆ ಇಳಿದರೆ ಪರಿಸ್ಥಿತಿ ಏನಾಗಬಹುದು?**


**ಮೈಸೂರು**

✍ ಬಿ.ಎಂ. ಲವಕುಮಾರ್

ವೇಶ್ಯಾವಾಟಿಕೆ ಬಹಳಷ್ಟು ಜನರ ಹೈಟೆಕ್ ಬದುಕಿಗೆ ಮಾರ್ಗವಾಗಿದೆ. ರಸ್ತೆ ಬದಿಯಲ್ಲೋ ಇನ್ನೆಲ್ಲೋ ನಿಂತು ಗ್ರಾಹಕರನ್ನು ಸೆಳೆದು ಹೊಟ್ಟೆಪಾಡು ಕಳೆಯುವ ವೇಶ್ಯೆಯರಿಗಿಂತ ಹೈಟೆಕ್ ಆಗಿ ದಂಧೆ ನಡೆಸಿ ಹೈಫೈ ಜೀವನ ನಡೆಸುವವರ ಸಂಖ್ಯೆ ಹೆಚ್ಚಾಗಿದೆ. ಇವರೆಲ್ಲರ ಶ್ರೀಮಂತ ಜೀವನಕ್ಕೆ ಇನ್ಯಾರೋ ಅಮಾಯಕ ಅದರಲ್ಲೂ ಈಗಷ್ಟೇ ಋತುಮತಿಯಾಗುವ ಅಪ್ರಾಪ್ತ ಹೆಣ್ಣು ಮಕ್ಕಳು ಬಲಿಯಾಗುತ್ತಿದ್ದಾರೆ ಎಂದರೆ ನಾವೆಲ್ಲರೂ ಯೋಚನೆ ಮಾಡುವ ವಿಚಾರವೇ.

ಹಣವಿದ್ದವರಿಗೆ ಹೆಣ್ಣು ಭೋಗದ ವಸ್ತುವಾಗಿ ಕಾಣುತ್ತಿದ್ದಾಳೆ. ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುವ ಗಿರಾಕಿಗಳಿದ್ದಾರೆ. ಅದರಲ್ಲೂ ಹೆಣ್ಣುಬಾಕರಿಗೆ ಬೇರೆ, ಬೇರೆ ವಯಸ್ಸಿನ ಹೆಣ್ಣು ಮಕ್ಕಳ ಜೊತೆ ಸುಖಿಸುವ ಖಯಾಲಿ. ಇದಕ್ಕಾಗಿ ಅವರು ಎಷ್ಟು ಹಣ ಬೇಕಾದರೂ ಖರ್ಚು ಮಾಡಲು ತಯಾರಿರುತ್ತಾರೆ. ಹೀಗಾಗಿ ಇಂತಹ ಕಚ್ಚಡ ಹೆಣ್ಣು ಬಾಕರ ದೌರ್ಬಲ್ಯಗಳನ್ನು ಅರಿತಿರುವ ತಲೆ ಮಾಸಿದ ಹೆಂಗಸರು ಅಂತಹವರಿಗಾಗಿ ತಮ್ಮ ಹೆಣ್ತನ ಮರೆತು ಬೇರೆ ಹೆಣ್ಣು ಮಕ್ಕಳ ಬದುಕನ್ನೇ ನಾಶ ಮಾಡುತ್ತಿದ್ದಾರೆ.

ಅಮಾಯಕ ಬಾಲಕಿಯರಿಗೆ ಹಣದ ಆಮಿಷ ಒಡ್ಡಿಯೋ ಅಥವಾ ಹೆತ್ತವರಿಗೆ ಹಣ ನೀಡಿ ತಾವೇ ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿಯೋ ಇನ್ನೇನೇನೋ ರೀತಿಯಲ್ಲಿ ಪುಸಲಾಯಿಸಿ ಬಳಿಕ ಭಾರೀ ಬೆಲೆಗೆ ಹೆಣ್ಣು ಬಾಕರ ಮಗ್ಗುಲಿಗೆ ಹಾಕಿ ಬಿಡುತ್ತಾರೆ. ಇವರಿಗೆ ದುಡ್ಡು ಸಿಕ್ಕಿದರೆ ಸಾಕು. ಆ ಹೆಣ್ಣು ಮಗು ಬದುಕು ಬರ್ಬಾತಾದ್ರೆ ಅವರಿಗೇನು? ಇವತ್ತು ಹೆಚ್ಚಿನ ಪ್ರಕರಣಗಳಲ್ಲಿ ಆಳವಾಗಿ ತನಿಖೆಯಾಗದ ಕಾರಣದಿಂದಾಗಿ ಕೃತ್ಯಗಳ ಹಿಂದೆ ಇರುವ ಮಾಸ್ಟರ್ ಮೈಂಡ್‌ಗಳಾಗಲೀ ಕೃತ್ಯದ ಹಿಂದೆಯಿರುವ ಜಾಲವಾಗಲೀ ಗೊತ್ತೇ ಆಗುವುದಿಲ್ಲ.



ಇನ್ನು ದಂಧೆಗಳಲ್ಲಿ ಸಿಕ್ಕಿ ಬಿದ್ದರೂ ಜಾಮೀನು ಕೊಟ್ಟು ಬಿಡಿಸಿಕೊಂಡು ಹೋಗಲು ಅವರದ್ದೇ ಆದ ವ್ಯವಸ್ಥೆ ಇರುವುದರಿಂದ ಬಹಳಷ್ಟು ಪ್ರಕರಣಗಳು ಪತ್ರಿಕೆಯಲ್ಲಿಯೋ, ಟಿವಿಯಲ್ಲಿಯೋ ಒಂದು ದಿನ ಕಾಣಿಸಿಕೊಂಡು ಅಲ್ಲಿಗೆ ಸತ್ತು ಹೋಗುತ್ತದೆ. ಅದರಾಚೆಗೆ ಏನಾಗಿದೆ ಎಂಬುದೇ ಗೊತ್ತಾಗುವುದಿಲ್ಲ. ಹೀಗಾಗಿ ಇಂತಹ ಕೃತ್ಯಗಳು ನಿಲ್ಲದೆ ಮುನ್ನಡೆಯುತ್ತಲೇ ಇರುತ್ತವೆ. ಕೇವಲ ವೇಶ್ಯಾವಾಟಿಕೆಯ ವಿಚಾರ ವಾದರೆ ಅದು ಇದ್ದದ್ದೇ ಎಂದು ತೆಪ್ಪಗಾಗಿ ಬಿಡಬಹುದು. ಆದರೆ ಈ ವೇಶ್ಯಾವಾಟಿಕೆಗೆ ಅಪ್ರಾಪ್ತ ಋತುಮತಿಯಾದ ಹೆಣ್ಣುಮಕ್ಕಳ ಬಳಕೆ ಮಾಡಿಕೊಳ್ಳುತ್ತಿದೆ ಎಂಬ ವಿಚಾರವನ್ನು ಅಷ್ಟು ಸುಲಭವಾಗಿ ತಳ್ಳಿ ಹಾಕಲು ಸಾಧ್ಯನಾ?



ಈ ಪ್ರಕರಣದ ಬೆನ್ನು ಬಿದ್ದು ತನಿಖೆ ನಡೆಸಿ ಅದರ ಹಿಂದಿನ ಕಬಂಧ ಬಾಹುವನ್ನು ಕಟ್ ಮಾಡಲೇ ಬೇಕಾಗುತ್ತದೆ. ಇಲ್ಲದೆ ಹೋದರೆ ದುರುಳರು ಇದನ್ನು ಮುಂದುವರೆಸಿ ಹೆಣ್ಮಕ್ಕಳ ಬದುಕಿಗೆ ಕಂಟಕವಾಗಿ ಬಿಡುತ್ತಾರೆ. ಇಷ್ಟಕ್ಕೂ ಅಪ್ರಾಪ್ತ ಋತುಮತಿಯಾದ ಬಾಲಕಿಯರೇ ಇವರ ಟಾರ್ಗೆಟ್ ಏಕೆ? ಎಂಬುದರ ಹಿಂದಿನ ರಹಸ್ಯ ತಿಳಿಯುತ್ತಾ ಹೋದರೆ ಬೆಚ್ಚಿ ಬೀಳುವುದು ಗ್ಯಾರಂಟಿ. ಇತ್ತೀಚೆಗಿನ ವರ್ಷಗಳಲ್ಲಿ ಅಪ್ರಾಪ್ತ ಬಾಲಕಿಯರ ನಾಪತ್ತೆ ಪ್ರಕರಣಗಳು ಹೆಚ್ಚುತ್ತಿವೆ. ಇದೊಂದು ಆತಂಕಾರಿ ವಿಚಾರವಾಗಿದೆ. ಈ ಬಗ್ಗೆ ಆಗಾಗ್ಗೆ ಸುದ್ದಿಯಾಗುತ್ತಲೇ ಇರುತ್ತದೆ. ಈ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿ ಮತ್ತು ಮಕ್ಕಳ ರಕ್ಷಣಾ ಘಟಕಗಳು ಹಲವು ರೀತಿಯ ಕ್ರಮಗಳನ್ನು ಕೈಗೊಂಡರೂ ಪ್ರಯೋಜನ ವಾಗುತ್ತಿಲ್ಲ.

ಬಹಳಷ್ಟು ಪ್ರಕರಣಗಳಲ್ಲಿ ನಾಪತ್ತೆಯಾದ ಹೆಣ್ಣು ಮಕ್ಕಳ ಸುಳಿವೇ ಸಿಗದಂತೆ ಅವರು ಭೂಗತರಾಗಿ ಬಿಡುತ್ತಾರೆ. ಆದರೆ ಹೀಗೆ ನಾಪತ್ತೆಯಾಗುವ ಹೆಣ್ಮಕ್ಕಳನ್ನು ಮಾರಾಟ ಮಾಡಲಾಗುತ್ತದೆ ಎಂಬ ವಿಚಾರಗಳು ಜನ ವಲಯದಲ್ಲಿ ಹರಿದಾಡುತ್ತಲೇ ಇರುತ್ತದೆ. ಹೆಣ್ಮಕ್ಕಳ ನಾಪತ್ತೆ ಹಿಂದೆ ಬಲು ದೊಡ್ಡ ಜಾಲವಿದ್ದು ಅವು ವ್ಯವಸ್ಥಿತವಾಗಿ ಕೆಲಸ ಮಾಡುವುದರಿಂದಾಗಿ ಪ್ರಕರಣವನ್ನು ಬೇಧಿಸುವುದು ತುಂಬಾ ಕಷ್ಟವಾಗುತ್ತಿದೆ. ಅದರಲ್ಲೂ ಈ ಕೃತ್ಯಗಳಲ್ಲಿ ತಲೆ ಮಾಸಿದ ಹೆಂಗಸರೇ ಮುಂಚೂಣಿಯಲ್ಲಿರುವುದರಿಂದಾಗಿ ಸ್ವಲ್ಪವೂ ಸಂಶಯ ಬರದಂತೆ ನಡೆದು ಹೋಗಿ ಬಿಡುತ್ತದೆ.

ವೇಶ್ಯಾವಾಟಿಕೆಗೆ ಸಂಬಂಧಿಸಿದ ಸುದ್ದಿಗಳು ಮೈಸೂರಿನಲ್ಲಿ ಬೇಕಾದಷ್ಟು ಕೇಳಿ ಬರುತ್ತಿವೆ. ಬೇರೆ, ಬೇರೆ ಮಗ್ಗುಲನ್ನು ಬದಲಿಸಿಕೊಂಡು ಈ ದಂಧೆ ನಡೆಯುತ್ತಿದೆ. ಇದೀಗ ಋತುಮತಿಯಾದ ಅಪ್ರಾಪ್ತ ಬಾಲಕಿಯರನ್ನು ದಂಧೆ ತಳ್ಳುತ್ತಿರುವ ಪ್ರಕರಣ ಬೆಳಕಿಗೆ ಬಂದಿದ್ದು ಹೆಣ್ಣು ಹೆತ್ತವರನ್ನು ಬೆಚ್ಚಿ ಬೀಳಿಸುವಂತೆ ಮಾಡಿದೆ. ಇಲ್ಲಿ ಹೆಂಗಸೊಬ್ಬಳು ಈ ದಂಧೆಯಲ್ಲಿರುವುದು ಹೆಣ್ಣು ಕುಲಕ್ಕೆ ಅವಮಾನ ಮಾಡಿದಂತಾಗಿದೆ. ಇಷ್ಟಕ್ಕೂ ಹಾಗೆ ಮಾಡಲು ಆಕೆಗೆ ಮನಸ್ಸಾದರೂ ಹೇಗೆ ಬಂತು? ಇಷ್ಟಕ್ಕೂ ನಡೆದಿದ್ದೇನು? ಎಂಬುದನ್ನು ನೋಡಿದ್ದೇ ಆದರೆ ಋತುಮತಿಯಾದ ಯುವತಿಯರನ್ನೇ ಟಾರ್ಗೆಟ್ ಮಾಡುವುದು ಈ ಜಾಲದ ಅಜೆಂಡಾ ಆಗಿದೆ.

ಈ ದಂಧೆಯಲ್ಲಿ ಬೆಂಗಳೂರಿನ ಶೋಭಾ (35) ಮತ್ತು ತುಳಸಿಕುಮಾರ್ (42) ತೊಡಗಿಸಿಕೊಂಡಿದ್ದರು ಎನ್ನುವುದು ಒಡನಾಡಿ ಸೇವಾ ಸಂಸ್ಥೆ, ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಸ್‌ಜೆಪಿಯು, ಮಕ್ಕಳ ಸಹಾಯವಾಣಿ ಹಾಗೂ ಪೊಲೀಸರ ಸಂಯುಕ್ತ ಕಾರ್ಯಾಚರಣೆಯಿಂದ ಬೆಳಕಿಗೆ ಬಂದಿದೆ. ಸದ್ಯದ ಮಾಹಿತಿ ಪ್ರಕಾರ ಇವರು ಋತುಮತಿಯಾದ ಬಾಲಕಿಯನ್ನು 20ಲಕ್ಷ ರೂಪಾಯಿಗೆ ಮಾರಾಟ ಮಾಡುವ ದಂಧೆಯಲ್ಲಿ ತೊಡಗಿಸಿಕೊಂಡಾಗ ಸಿಕ್ಕಿ ಬಿದ್ದಿದ್ದಾರೆ.



ಒಂದು ವೇಳೆ ಇವರು ಸಿಕ್ಕಿ ಬೀಳದೆ ಹೋಗಿದ್ದರೆ ಆ ಬಾಲಕಿಯ ರಕ್ಷಣೆಯೂ ಆಗುತ್ತಿರಲಿಲ್ಲ ದಂಧೆಕೋರರು ಸಿಕ್ಕಿಯೂ ಬೀಳುತ್ತಿರಲಿಲ್ಲ. ದೇವರ ದಯೆ ಕಾಮುಕರಿಗೆ ಬಲಿಯಾಗುತ್ತಿದ್ದ ಬಾಲಕಿ ಬಚಾವಾಗಿದ್ದಾಳೆ. ಆದರೆ ಈ ಶೋಭ ಮತ್ತು ತುಳಸೀಕುಮಾರ್ ಯಾರು? ಅವರ ಹಿಂದೆ ಇನ್ಯಾರಿದ್ದಾರೆ? ದೊಡ್ಡ ಜಾಲ ಇದೆಯಾ? ಬಾಲಕಿಯನ್ನು ಯಾರಿಗೆ ಮಾರಾಟ ಮಾಡಲು ಹೊರಟಿದ್ದರು? ಎಂಬಿತ್ಯಾದಿ ವಿಚಾರಗಳು ಪೊಲೀಸರ ತನಿಖೆಯಿಂದ ಹೊರಬರಬೇಕಿದೆ.

ಕೆಲವು ಕಾಮುಕರು ಅಪ್ರಾಪ್ತ ಬಾಲಕಿಯರನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಿದ್ದು, ಅವರ ಮೂಲಕ ತಮ್ಮ ಕಾಮತೃಷೆಯನ್ನು ತೀರಿಸಿಕೊಳ್ಳುತ್ತಾರೆ ಎನ್ನಲಾಗಿದೆ. ಚಿಕ್ಕವಯಸ್ಸಿನವರು ಆಗಿರುವುದರಿಂದ ಅವರನ್ನು ಹೆದರಿಸಿ, ಬೆದರಿಸಿ ತಮಗೆ ಹೇಗೆ ಬೇಕೋ ಹಾಗೆ ಬಳಸಿಕೊಳ್ಳುತ್ತಾರೆ. ಅದಕ್ಕಿಂತ ಹೆಚ್ಚಾಗಿ ಋತುಮತಿಯಾದ ಬಾಲಕಿಯರ ಜೊತೆ ಲೈಂಗಿಕ ಕ್ರಿಯೆ ಮಾಡುವುದರಿಂದ ದೈಹಿಕ ಸುಖದ ಜತೆಗೆ ಲೈಂಗಿಕ ಆರೋಗ್ಯವೂ ಸುಧಾರಿಸುತ್ತದೆ ಎಂಬ ತಪ್ಪು ಕಲ್ಪನೆಯಿದ್ದು ಅದಕ್ಕಾಗಿ ಲಕ್ಷಾಂತರ ರೂಪಾಯಿ ನೀಡಿ ಅಪ್ರಾಪ್ತ ಬಾಲಕಿಯರನ್ನು ಕೆಲವರು ಖರೀದಿ ಮಾಡುತ್ತಿದ್ದಾರೆ ಎನ್ನಲಾಗಿದೆ. ಇದನ್ನು ಅರಿತ ಶೋಭಾ ಮತ್ತು ತುಳಸಿಕುಮಾರ್ ಬಾಲಕಿಯನ್ನು ಕರೆತಂದು ಆಕೆಯನ್ನು ಮಾರಾಟಕ್ಕೆ ಮುಂದಾಗಿದ್ದರು.

ಬಾಲಕಿಗೆ 20ಲಕ್ಷಕ್ಕಿಂತ ಒಂದು ರೂಪಾಯಿ ಕಡಿಮೆಯಾದರೂ ಆಕೆಯನ್ನು ಕಳಿಸಲ್ಲ ಎಂದು ಅವರು ಡಿಮ್ಯಾಂಡ್ ಮಾಡಿದ್ದರಲ್ಲದೆ, ಆಕೆಗೆ ಶಾಲಾ ಯೂನಿಫಾರ್ಮ್ ತೊಡಿಸಿದ ಫೋಟೋಗಳನ್ನು ತೋರಿಸಿ ಮಾರಾಟಕ್ಕೆ ಮುಂದಾಗಿದ್ದರು. ಇಷ್ಟೇ ಅಲ್ಲದೆ ನೀವು ಹೇಗೆ ಬೇಕಾದರೂ ಆಕೆಯನ್ನು ಬಳಸಿಕೊಳ್ಳಬಹುದು ಎಂದು ಹೇಳಿದ್ದರು. ಬಾಲಕಿಯನ್ನು ಮಾರಾಟ ಮಾಡುತ್ತಿರುವ ವಿಚಾರ ಮೈಸೂರಿನ ಒಡನಾಡಿ ಸಂಸ್ಥೆಗೆ ಗೊತ್ತಾಗುತ್ತಿದ್ದಂತೆಯೇ ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಎಸ್ ಜೆಪಿಯು, ಮಕ್ಕಳ ಸಹಾಯವಾಣಿ ಹಾಗೂ ಪೊಲೀಸರ ಜತೆ ಸೇರಿ ಕಾರ್ಯಾಚರಣೆ ನಡೆಸಲಾಗಿದೆ. ಈ ವೇಳೆ ದಂಧೆಕೋರರಾದ ಶೋಭಾ ಮತ್ತು ತುಳಸಿಕುಮಾರ್ ಸಿಕ್ಕಿಬಿದ್ದಿದ್ದು ಅವರನ್ನು ಬಂಧಿಸಲಾಗಿದೆ. ಈ ಸಂಬಂಧ ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ☯

## ಒಡನಾಡಿಯ ಸ್ಟಾನ್ಲಿ, ಪರಶು ಹೇಳುವುದೇನು?

ಒಡನಾಡಿ ಸಂಸ್ಥೆಯ ಸ್ಥಾಪಕ ಸ್ಟಾನ್ಲಿ ಅವರು ಹೇಳುವ ಪ್ರಕಾರ ಬಾಲಕಿ ಮಾರಾಟ ವಿಚಾರ ಸಂಬಂಧ ನಮಗೆ ಮಾಹಿತಿ ದೊರೆತು, ಹಣಕ್ಕೆ ಡಿಮ್ಯಾಂಡ್ ಮಾಡಿದ್ದ ಶೋಭಾ ಮತ್ತು ತುಳಸಿ ಕುಮಾರ್ ಅವರನ್ನು ಬಂಧಿಸಲಾಗಿದೆ. ಅಪ್ರಾಪ್ತ ಬಾಲಕಿಯರನ್ನು ವೇಶ್ಯಾವಾಟಿಕೆಗೆ ಇಳಿಸುವ ಪ್ರಯತ್ನ ನಡೆದಿತ್ತು. ಋತುಮತಿಯಾದ ಬಾಲಕಿಯರ ಜೊತೆ ಮೊದಲ ಲೈಂಗಿಕ ಸಂಪರ್ಕ ನಡೆಸಿದ್ರೆ, ಮಾನಸಿಕ ಮತ್ತು ಲೈಂಗಿಕ ಕಾಯಿಲೆಗಳು ದೂರ ಆಗುತ್ತವೆ ಎಂಬ ಮೂಢ ನಂಬಿಕೆಯನ್ನು ಬಳಸಿಕೊಂಡು ಬಾಲಕಿಯನ್ನು ಬಳಸಿ ದುಡ್ಡು ಮಾಡಲು ಮುಂದಾಗಿದ್ದರು ಎಂದು ಹೇಳಿದ್ದಾರೆ.

ಇನ್ನು ಪರಶುರಾಮ್ ಮಾತನಾಡಿ ಇದು ಬೇರೆ ದೇಶಗಳಲ್ಲಿ ನಡೆಯುತ್ತದೆ, ನಮ್ಮಲ್ಲಿ ಕೇಳಿದ್ವಿ ಅಷ್ಟೇ. 20 ಲಕ್ಷಕ್ಕೆ ಬಾಲಕಿಯನ್ನು ಏನು ಬೇಕಾದ್ರೂ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಈಗ ನಾವೇ ಕಣ್ಣಾರೆ ಕಂಡು ಬಾಲಕಿಯನ್ನು ರಕ್ಷಿಸಿದ್ದೇವೆ. ಇದರ ಹಿಂದೆ ದೊಡ್ಡ ಜಾಲ ಇದೆ ಅನಿಸುತ್ತದೆ ಎಂದು ಹೇಳಿದ್ದಾರೆ. ☯



# ಅಕ್ರಮ ಸಂಬಂಧಕ್ಕೆ ಅಡ್ಡಿಯಾದ ಅತ್ತೆಯನ್ನು ಪ್ರಿಯಕರನೊಂದಿಗೆ ಸೇರಿ ಚಟ್ಟ ಕಟ್ಟಲು ಪ್ಲಾನ್!

**ಪ್ರಿಯಕರನೊಂದಿಗಿನ ಅಕ್ರಮ ಸಂಬಂಧ ಹಾಗೂ ಮೊಬೈಲ್ ಬಳಕೆಯನ್ನು ವಿರೋಧಿಸಿದ ಅತ್ತೆ, ಪ್ರಿಯಕರನೊಂದಿಗಿನ ಸಂಬಂಧ ಬಿಡುವಂತೆ ಬುದ್ದಿ ಹೇಳಿದಳು. ಅಕ್ರಮ ಸಂಬಂಧ ಹಾಗೂ ಮೊಬೈಲ್ ಬಳಕೆಗೆ ಅಡ್ಡಿಯಾಗಿರುವ ಅತ್ತೆಯು ನಮ್ಮಿಬ್ಬರ ವಿಚಾರವನ್ನು ಗಂಡನಿಗೆ ಹೇಳುತ್ತಾಳೆಂಬ ಕಾರಣಕ್ಕೆ ಸೊಸೆಯು ಪ್ರಿಯಕರನೊಂದಿಗೆ ಸೇರಿ ಮಚ್ಚಿನಿಂದ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದು, ಗಂಭೀರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದಿರುವ ಅತ್ತೆಯು ಸತ್ತು ಹೋಗಿರಬೇಕೆಂದು ತಿಳಿದು, ಗಂಡನಿಗೆ ಫೋನ್ ಮಾಡಿ ಯಾರೋ ಬಂದು ನಿಮ್ಮ ತಾಯಿಯನ್ನು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಹೋಗಿದ್ದಾರೆಂದು ಕಥೆ ಕಟ್ಟಿ ಹೇಳಿದಳು. ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ತಾಯಿಯನ್ನು ಆಸ್ಪತ್ರೆಗೆ ಸೇರಿಸಿದ ಮಗ ತಾಯಿ ಕೊಲೆಗೆ ಯತ್ನಿಸಿ ಪರಾರಿಯಾಗಿರುವ ವ್ಯಕ್ತಿಗಳನ್ನು ಪತ್ತೆ ಮಾಡಿ ಕ್ರಮ ಕೈಗೊಳ್ಳುವಂತೆ ದೂರು ನೀಡಿದರು. ಅತ್ತೆಯ ಕೊಲೆಗೆ ಸಂಚು ರೂಪಿಸಿದ್ದ ಸೊಸೆಯ ಡ್ರಾಮ ಪೊಲೀಸರಿಗೆ ಗೊತ್ತಾಗಿ ಪ್ರಿಯಕರನೊಂದಿಗೆ ಜೈಲು ಸೇರಿರುವ ಘಟನೆ ಶ್ರೀನಿವಾಸಪುರ ತಾಲ್ಲೂಕಿನ ರಾಯಲ್ಪಾಡು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.**


ಅತ್ತೆ ರಮಣಮ್ಮ



ಆರೋಪಿ ರೇಖಾ

**ಕೋಲಾರ**

✍ ಕೋಲಾರ ಮಂಜು

ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ರಾಯಲ್ಪಾಡು ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದ ತುಮ್ಮಲಪಲ್ಲಿ ಗ್ರಾಮದ ತಿಮ್ಮರಾಯಪ್ಪ ಮತ್ತು ರಮಣಮ್ಮ ದಂಪತಿಗಳಿಗೆ ಮಂಜುನಾಥ ರೆಡ್ಡಿ ಎಂಬ ಮಗನಿದ್ದು ಹಾಲು ವಾಹನದ ಡ್ರೈವರ್ ಆಗಿ ಕೆಲಸ ಮಾಡಿಕೊಂಡಿರುತ್ತಾನೆ. ಮಂಜುನಾಥ ರೆಡ್ಡಿ ಕಳೆದ ಏಳು ವರ್ಷದ ಹಿಂದೆ ಆಂಧ್ರಪ್ರದೇಶದ ಮದನಪಲ್ಲಿಗೆ ಸೇರಿದ ರಾಳ್ಳಪಲ್ಲಿ ಗ್ರಾಮದ ರೇಖಾ ಎಂಬುವವರನ್ನು ಮದುವೆಯಾಗಿದ್ದು ಇವರಿಗೆ ಒಂದೂವರೆ ವರ್ಷ ಹೆಣ್ಣುಮಗುವೊಂದಿರುತ್ತದೆ. ಕಳೆದ ಎರಡು ವರ್ಷಗಳ ಹಿಂದೆ ತಿಮ್ಮರಾಯಪ್ಪನವರು ಮೃತಪಟ್ಟಿರುತ್ತಾರೆ. ಮಂಜುನಾಥ ರೆಡ್ಡಿಯು ಕೆಲಸಕ್ಕೆ ಹೋದರೆ ಎರಡು-ಮೂರು ದಿನಗಳ ನಂತರ ಮನೆಗೆ ಬರುತ್ತಿದ್ದರು. ಆಗ ಮನೆಯಲ್ಲಿ ಅತ್ತೆ, ಸೊಸೆ ಇಬ್ಬರೇ ಇರುತ್ತಿದ್ದರು. ಇದೇ ಸಂದರ್ಭದಲ್ಲಿ ತುಮ್ಮಲಪಲ್ಲಿ ಗ್ರಾಮದ ಶಶಿಕುಮಾರ್ ಎಂಬ ಯುವಕನೊಬ್ಬ ರೇಖಾಗೆ ಪರಿಚಯವಾಗಿ ದಿನಗಳು ಕಳೆದಂತೆ ಇಬ್ಬರು ಪ್ರೀತಿಸಲು ಪ್ರಾರಂಭಿಸುತ್ತಾರೆ. ಅತ್ತೆ ರಮಣಮ್ಮ ಮಧ್ಯಾಹ್ನ ಊಟ ಮಾಡಿ ಪಕ್ಕದ ಮನೆಯ ಚಂದ್ರಮ್ಮನ ಮನೆಗೆ ಹೋಗಿ ಸಂಜೆವರೆಗೂ ಅಲ್ಲಿಯೇ ಕಾಲ ಕಳೆದುಕೊಂಡು ನಂತರ ಮನೆಗೆ ಬರುತ್ತಿದ್ದರು. ಈ ಅವಕಾಶವನ್ನು ಉಪಯೋಗಿಸಿಕೊಂಡ ಸೊಸೆ ರೇಖಾ ಪ್ರಿಯಕರ ಶಶಿಕುಮಾರ್‌ನನ್ನು ಮನೆಗೆ ಕರೆಸಿಕೊಂಡು ಅವನೊಂದಿಗೆ ದೇಹಸುಖದಲ್ಲಿ ತೊಡಗುತ್ತಿದ್ದಳು. ಇದೇ ರೀತಿ ಕದ್ದುಮುಚ್ಚಿ ಸುಮಾರು ಮೂರು ತಿಂಗಳಿಂದ ಅಕ್ರಮ ಸಂಬಂಧವನ್ನು ಇಟ್ಟುಕೊಂಡಿದ್ದರು.

ಇವರಿಬ್ಬರ ನಡುವಿನ ಅಕ್ರಮ ಸಂಬಂಧದ ವಿಚಾರ ಊರೆಲ್ಲ ಹರಡುತ್ತಿದ್ದಂತೆ ರೇಖಾಳ ಗಂಡನಿಗೆ ಗೊತ್ತಾಗಿ ಹೆಂಡತಿಯು ತುಂಬಾ ಒಳ್ಳೆಯವಳು, ಇದೊಂದು ಗುಸು ಗುಸು ಸುದ್ದಿ ನಾನು ನಂಬುವುದಿಲ್ಲವೆಂದು ಸುಮ್ಮನಾಗಿ ಬಿಟ್ಟನು. ಆದರೆ ಒಂದು ದಿನ ಮಧ್ಯಾಹ್ನ ಕೆಲಸ ಮುಗಿಸಿಕೊಂಡು ಮನೆಗೆ ಬಂದ ಮಂಜುನಾಥ ರೆಡ್ಡಿಗೆ ಹೆಂಡತಿಯು ಎಂತಹವಳು ಎಂದು ಗೊತ್ತಾಯಿತು. ಗ್ರಾಮದ ಶಶಿಕುಮಾರ್ ಮನೆಯಲ್ಲಿ ಪ್ರತ್ಯಕ್ಷವಾಗಿರುವುದನ್ನು ನೋಡಿ ಜನ ಮಾತನಾಡಿಕೊಳ್ಳುತ್ತಿರುವುದು ನಿಜವೆಂದು ತಿಳಿದು ಶಶಿಕುಮಾರ್‌ಗೆ ಬುದ್ದಿ ಹೇಳಿ ಕಳುಹಿಸಿದನಲ್ಲದೆ ಹೆಂಡತಿ ರೇಖಾಗೆ ನೀನು ಮದುವೆಯಾಗಿ ಒಂದು ಮಗುವಿನ ತಾಯಿಯಾಗಿದ್ದು, ನಮ್ಮ ಕುಟುಂಬಕ್ಕೆ ಮರ್ಯಾದೆ ಹೋಗುವ ಕೆಲಸ ಮಾಡುತ್ತಿದ್ದೀಯಾ, ನಿನ್ನ ಬಗ್ಗೆ ಊರಲ್ಲಿ ಒಬ್ಬೊಬ್ಬರೊಂದು ಮಾತನಾಡಿಕೊಳ್ಳುತ್ತಿದ್ದರೂ ಆದರೆ ನಾನು ಮಾತ್ರ ನಿನ್ನ ಬಗ್ಗೆ ಅನುಮಾನ ಪಟ್ಟಿರಲಿಲ್ಲ. ಈಗ ಮಿಂಡನೊಂದಿಗೆ ನೇರವಾಗಿ ಸಿಕ್ಕಿಹಾಕಿಕೊಂಡಿರುವುದರಿಂದ ನಿನ್ನ ಹೆಂಡತಿಯು ಎಂತಹ ಪತಿವ್ರತೆ ಎಂಬುವುದು ತಿಳಿಯುತ್ತದೆ. ಇಷ್ಟು ದಿನ ಮಾಡಿದ್ದು ಸಾಕು ಈಗಲಾದರೂ ಬುದ್ದಿ ಕಲಿತುಕೊಂಡು ನ್ಯಾಯವಾಗಿ ನನ್ನ ಜೊತೆ ಸಂಸಾರ ಮಾಡಿಕೊಂಡಿರು ಇಲ್ಲವಾದರೆ ನಿಮ್ಮ ಹುಟ್ಟಿದ ಮನೆಗೆ ಹೋಗಿಬಿಡುವಂತೆ ಬುದ್ದಿ ಹೇಳಿದರು. ಆಗ ರೇಖಾ ಗಂಡನ ಮಾತಿಗೆ ಮರು ಮಾತನಾಡದೇ ನಾನು ಮಾಡಿದ್ದು ತಪ್ಪು, ಮುಂದೆ ಇಂತಹ ತಪ್ಪು ಮಾಡುವುದಿಲ್ಲ. ನನ್ನನ್ನು ಕ್ಷಮಿಸಿ ಎಂದು ಹೇಳಿ ಗಂಡನ ಕಾಲಿಗೆ ಬಿದ್ದು ಬೇಡಿಕೊಂಡಳು. ಆಗ ಮಂಜುನಾಥ ರೆಡ್ಡಿ ಹೆಂಡತಿ ಮಾಡಿರುವ ತಪ್ಪನ್ನು ಕ್ಷಮಿಸಿದನು. ಬುದ್ದಿ ಕಲಿತ ರೇಖಾ ಗಂಡ, ಅತ್ತೆ ಮತ್ತು ಮಗು ಜೊತೆ ಸುಖವಾಗಿ ಜೀವನ ಮಾಡಿಕೊಂಡಿದ್ದಳು.


ಎಸ್ಪಿ ಬಿ. ನಿಖಿಲ್


ಪಿ.ಐ. ಶಿವಕುಮಾರ್ ಎಂ.


ರೇಖಾಳ ಗಂಡ ಮಂಜುನಾಥ ರೆಡ್ಡಿ


ಆರೋಪಿ ಶಶಿಕುಮಾರ್

**ಅತ್ತೆ ಕೊಲೆಗೆ ಸಂಚು**

ಹೆಂಡತಿ ರೇಖಾ ಆಗಸ್ಟ್ 31ರಂದು ರಾತ್ರಿ 10.30ಕ್ಕೆ ಗಂಡ ಮಂಜುನಾಥ ರೆಡ್ಡಿಗೆ ಫೋನ್ ಮಾಡಿ ಯಾರೋ ಅಪರಿಚಿತ ವ್ಯಕ್ತಿಗಳು ನಮ್ಮ ಮನೆಗೆ ಬಂದು ಮಾರಕಾಸ್ತ್ರಗಳಿಂದ ನಿಮ್ಮ ತಾಯಿ ಮೇಲೆ ಅಟ್ಯಾಕ್ ಮಾಡಿ ಮಾರಣಾಂತಿಕವಾಗಿ ಹಲ್ಲೆ ಮಾಡಿ ಹೋಗಿರುವುದಾಗಿ ಹೇಳಿದರು. ಹಾಲು ತೆಗೆದುಕೊಂಡು ಡೈರಿ ಕಡೆ ಹೊರಟಿದ್ದ ಮಂಜುನಾಥ ರೆಡ್ಡಿಯು ವಾಹನವನ್ನು ಬೇರೊಬ್ಬ ಡ್ರೈವರ್ ಜೊತೆ ಕಳುಹಿಸಿ ತಾನು ಮನೆಗೆ ಬಂದು ನೋಡಲಾಗಿ ತಾಯಿ ರಮಣಮ್ಮ ರಕ್ತದ ಮಡುವಿನಲ್ಲಿ ಬಿದ್ದಿದ್ದು, ಸಾವು-ಬದುಕಿನ ನಡುವೆ ಹೋರಾಡುತ್ತಿದ್ದ ತಾಯಿಯನ್ನು ಕೂಡಲೇ ಅಲ್ಲಿಂದ ಆಟೋದಲ್ಲಿ ಶ್ರೀನಿವಾಸಪುರ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ಪ್ರಥಮ ಚಿಕಿತ್ಸೆ ನೀಡಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲು ಮಾಡಿದ ಮೇಲೆ ಮಂಜುನಾಥ ರೆಡ್ಡಿ ರಾಯಲ್ಪಾಡು ಪೊಲೀಸ್ ಠಾಣೆಗೆ ಹಾಜರಾಗಿ ತಾಯಿ ರಮಣಮ್ಮ ಮತ್ತು ಹೆಂಡತಿ ರೇಖಾರವರು ಮನೆಯಲ್ಲಿದ್ದಾಗ ಯಾರೋ ಅಪರಿಚಿತ ವ್ಯಕ್ತಿಗಳು ಮನೆಗೆ ಬಂದು ರೇಖಾಳ ಮೇಲೆ ಹಲ್ಲೆಮಾಡಿ ಕೊಠಡಿ ಒಳಕ್ಕೆ ತಳ್ಳಿ ನಂತರ ತಾಯಿ ರಮಣಮ್ಮನವರ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿ ಪರಾರಿಯಾಗಿದ್ದಾರೆ. ನಾನು ತಾಯಿಯನ್ನು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆಗೆ ಸೇರಿಸಿದ್ದು ತಾಯಿಯು ಚಿಕಿತ್ಸೆಗೆ ಸ್ಪಂದಿಸುತ್ತಿರುವುದಾಗಿ ವೈದ್ಯರು ತಿಳಿಸಿರುತ್ತಾರೆ. ತಾಯಿ ರಮಣಮ್ಮನವರ ಮೇಲೆ ಹಲ್ಲೆ








ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಮಣಮ್ಮ

☞10

# ಹೆಂಡತಿಯೊಡನೆ ಅಕ್ರಮ ಸಂಬಂಧ ಶಂಕೆ ಹೆತ್ತ ತಂದೆಯನ್ನೇ ಕೊಂದ ಜಾನ್ಸನ್!


ಮಗನಿಂದ ಕೊಲೆಯಾದ ಪಾಕಿಯನಾದನ್

**ತಂದೆ ಡ್ರೈವರ್, ಮಗ ಕಲ್ಲುಕ್ವಾರಿ ಕೆಲಸ ಮಾಡಿಕೊಂಡಿದ್ದ. ಕಳೆದ ಮೂರು ವರ್ಷಗಳ ಹಿಂದೆ ಸ್ವಗ್ರಾಮದ ತನ್ನದೆ ಜಾತಿಯ ಯುವತಿಯನ್ನು ಪ್ರೀತಿಸಿ ಮದುವೆಯಾಗಿದ್ದ. ಪ್ರಾರಂಭದಲ್ಲಿ ದಂಪತಿಗಳು ಅನ್ಯೋನ್ಯವಾಗಿದ್ದರು. ಅದರ ಫಲವಾಗಿ ಇವರಿಗೆ ಒಂಭತ್ತು ತಿಂಗಳ ಹೆಣ್ಣು ಮಗುವಿದೆ. ಆದರೆ ಈತನ ತಲೆಗೆ ಅದ್ಯಾಗೆ ಅನುಮಾನ ಹೊಕ್ಕಿತೋ? ತಂದೆ ನನ್ನ ಹೆಂಡತಿಯ ಜೊತೆ ಅನೈತಿಕ ಸಂಬಂಧ ಹೊಂದಿದ್ದಾನೆ ಎಂದು ಜಿಗುಪ್ಸೆಗೊಂಡಿದ್ದ. ಈ ಕುರಿತು ಸಂಬಂಧಿಕರು ಕೂರಿಸಿಕೊಂಡು ಅವಳಿಗೂ ನಿನ್ನ ಹಾಗೆ ತಂದೆಯ ಸ್ಥಾನದಲ್ಲಿ ಇದ್ದಾರೆ. ಇದೆಲ್ಲ ತಪ್ಪು ಬುದ್ಧಿವಾದ ಹೇಳಿದ್ದರು. ಆದರೂ ಕೇಳದೆ ಅಂದು ರಾತ್ರಿ ಕುಡಿದ ಮತ್ತಿನಲ್ಲಿ ಮಲಗಿದ್ದ ತಂದೆ ತಲೆಗೆ ಕಲ್ಲಿನಿಂದ ಮನಸೋ ಇಚ್ಛೆ ಹೊಡೆದು ಕೊಲೆ ಮಾಡಿದ್ದಾನೆ. ಕೊಲೆ ಮಾಡಿದ ನಂತರ ಹಂತಕ ಆರೋಪಿ ಪೊಲೀಸರ ಬಳಿ ತಪ್ಪೊಪ್ಪಿಕೊಂಡು ಈಗ ಜೈಲು ಸೇರಿದ್ದಾನೆ.**


ಆರೋಪಿ ಜಾನ್ಸನ್‌ಜೀವ

**ಚಾಮರಾಜನಗರ**
✍ ಎಸ್. ಸ್ವಾಮಿ

ಹೌದು ಈ ದುರಂತ ನಡೆದಿರುವುದು ಚಾಮರಾಜ ನಗರ ಜಿಲ್ಲೆ ಹನೂರು ತಾಲ್ಲೂಕು ಮಾರ್ಟಳ್ಳಿ ಸಮೀಪದ ಸಂದನಪಾಳ್ಯ ಗ್ರಾಮದಲ್ಲಿ, ಇಲ್ಲಿನ ಅಣ್ಣೆತ್ರೇಸಾ ನಗರದ ಕ್ರಿಶ್ಚಿಯನ್ ಜನಾಂಗದ ಪಾಕಿಯನಾದನ್ ಎಂಬಾತನೆ ಅವಿವೇಕಿ ಮಗನ ಅನುಮಾನಕ್ಕೆ ಬಲಿಯಾದ ದುರ್ದೈವಿ ತಂದೆ. ತಂದೆ ಕೊಂದ ಪಾಪಿ ಮಗ ಸುಮಾರು 33 ವರ್ಷ. ಜಾನ್ಸನ್ ಜೀವ ಮಾಡಿದ ಘನಘೋರ ತಪ್ಪಿಗೆ ಜೈಲು ಸೇರಿದ್ದಾನೆ.

ಮೃತ ಪಾಕಿಯನಾದನ್ ಡ್ರೈವರ್ ಕೆಲಸ ಮಾಡಿಕೊಂಡಿದ್ದ. ಈತನ ಹೆಂಡತಿ ಸಗಾಯಿಮೇರಿ ಈ ದಂಪತಿಗಳಿಗೆ ಜಾನ್ಸನ್‌ಜೀವ 33 ವರ್ಷ ಮೇರಿ ಮೆರ್ಲಿನ್ ನಿತ್ಯಾ ಹಾಗೂ ವಿಕ್ಟರ್ ನೆಪೋಲಿಯನ್ ಎಂಬ ಮೂವರು ಮಕ್ಕಳು. ಈ ಮೂವರಿಗೂ ಮದುವೆಯಾಗಿದೆ. ತಂದೆ ಪಾಕಿಯನಾದನ್ ಡ್ರೈವರ್ ಕೆಲಸ ಮಾಡಿಕೊಂಡಿದ್ದನು. ತಾಯಿ ಸಗಾಯಿಮೇರಿ ತೋಮಿಯರ್‌ಪಾಳ್ಯ ಡಾಕ್ಟರ್ ರವರ ಮನೆಯಲ್ಲಿ ಮನೆ ಕೆಲಸ ಮಾಡಿಕೊಂಡು ಬೆಂಗಳೂರಿನಲ್ಲಿ ವಾಸವಾಗಿದ್ದಳು. ತಂದೆಯ ಹಂತಕ ಹಿರಿಯ ಮಗ ಜಾನ್ಸನ್‌ಜೀವ ಕಲ್ಲುಕ್ವಾರಿ ಕೆಲಸ ಮಾಡಿ ಕೊಂಡಿದ್ದ ಹಾಗೂ ಕಳೆದ ಮೂರು ವರ್ಷಗಳ ಹಿಂದೆ ಸ್ವಗ್ರಾಮ ಸಂದನಪಾಳ್ಯದ ಮುರುಗನ್ ರವರ ಮಗಳು ಗಾಯಿತ್ರಿ, ಎಂಬಾಕೆ ಯನ್ನು ಪ್ರೀತಿಸಿ ಮದುವೆಯಾಗಿದ್ದನು. ಇವರಿಗೆ 9 ತಿಂಗಳ ಇನಿಯಾ ಜಾನ್ಸನ್ ಎಂಬ ಹೆಣ್ಣು ಮಗುವಿದೆ.


ಡಿವೈಎಸ್ಪಿ ಧರ್ಮೇಂದ್ರ

ಪಾಕಿಯನಾದನ್ ಹಾಗೂ ಸಗಾಯಿಮೇರಿ ಈ ದಂಪತಿ ತಮ್ಮ ಎರಡನೇ ಮಗಳು ಮೇರಿ ಮೆರ್ಲಿನ್ ನಿತ್ಯಾಳ ಮದುವೆಗಾಗಿ ಸುಮಾರು 5 ಲಕ್ಷ ರೂ.ಗಳನ್ನು ಸಾಲ ಮಾಡಿದ್ದರು. ಮಗಳ ಮದುವೆಗಾಗಿ ಮಾಡಿದ್ದ ಸಾಲವನ್ನು ಜಾನ್ಸನ್‌ಜೀವ ಹಾಗೂ ಆತನ ತಮ್ಮ ವಿಕ್ಟರ್ ನೆಪೋಲಿಯನ್ ಇಬ್ಬರಿಗೂ ತಲಾ ಎರಡೂವರೆ ಲಕ್ಷ ಸಾಲ ವಹಿಸಿದ್ದರು. ಆ ಬಾಬ್ತು ಜಾನ್ಸನ್‌ಜೀವ ಪ್ರತಿ ತಿಂಗಳು ಬಡ್ಡಿಯನ್ನು ಕಟ್ಟುತ್ತಿದ್ದ. ಇದೇ ವಿಚಾರವಾಗಿ ನನಗೂ ಹಾಗೂ ನನ್ನ ತಂದೆಗೂ ಆಗಾಗ ಗಲಾಟೆಯಾಗುತ್ತಿತ್ತು. ತಂಗಿಯ ಮದುವೆ ಸಾಲ ತೀರಿಸುವ ಸಲುವಾಗಿ ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಯ ಕಲ್ಲುಕ್ವಾರಿಯೊಂದರಲ್ಲಿ ಕ್ವಾರಿ ಕೆಲಸ ಮಾಡಿಕೊಂಡಿದ್ದ ಹಾಗಾಗ ಕೆಲಸವಿಲ್ಲದಿದ್ದಾಗ ಊರಿಗೆ ಬಂದು ಹೋಗುತ್ತಿದ್ದ ಅದೇ ರೀತಿ ಇದೇ 21 9 2025ರಂದು ಬೆಳಿಗ್ಗೆ ಸುಮಾರು 9:00ಯಲ್ಲಿ ಕಲ್ಲುಕ್ವಾರಿಯಲ್ಲಿ ಕೆಲಸವಿಲ್ಲದ ಕಾರಣ ಜಾನ್ಸನ್ ಜೀವ ತೆರಕಣಾಂಬಿಯಿಂದ ಊರಿಗೆ ಬಂದಿದ್ದ.

ಅಂದು ಜಾನ್ಸನ್‌ಜೀವ ಮನೆಯ ಬಳಿ ಬಂದಾಗ ಹೆಂಡತಿ ಗಾಯಿತ್ರಿ ಮತ್ತು ಮಗು ಇನಿಯಜಾನ್ಸನ್ ಮನೆಯಲ್ಲಿದ್ದರು. ತಂದೆ ಪಾಕಿಯನಾದನ್ ಕುರ್ಚಿ ಹಾಕಿಕೊಂಡು ಮಾವಿನ ಮರದ ಕೆಳಗೆ ಫೋನಿನಲ್ಲಿ ಮಾತನಾಡುತ್ತಾ ಕುಳಿತಿದ್ದ ಮನೆಯೊಳಗೆ ಹೋದ ಜಾನ್ಸನ್‌ಜೀವ ಕೆಲ ಹೊತ್ತು ವಿಶ್ರಾಂತಿ ಪಡೆದು ಮಧ್ಯಾಹ್ನ ಸುಮಾರು 2:00 ಗಂಟೆಯಲ್ಲಿ ಸುಸಿನಾರವರ ಅಂಗಡಿಗೆ ಹೋಗಿ ಅವರಿಗೆ ಕೊಡಬೇಕಿದ್ದ ಈ ತಿಂಗಳ ಹಾಲಿನ ಬಾಬ್ತು 1000 ರೂ. ಗಳನ್ನು ಕೊಟ್ಟು ನಂತರ ಅಲ್ಲಿಂದ ಲಿಂಗಣ್ಣರವರ ಚಿಕನ್ ಅಂಗಡಿಗೆ ಹೋಗಿ ಒಂದು ಕೆಜಿ ಚಿಕನ್ ತೆಗೆದುಕೊಂಡು, ಅಲ್ಲಿಂದ ಪ್ರಕಾಶ್‌ರವರ ಅಂಗಡಿಗೆ ಹೋಗಿ ಮೂರು ಒರಿಜಿನಲ್ ಚಾಯ್ಸ್ ಮದ್ಯದ ಪೌಚ್‌ಗಳನ್ನು ತೆಗೆದು ಕೊಂಡು ಮನೆಗೆ ಬಂದಿದ್ದಾನೆ. ಪತ್ನಿ ಗಾಯತ್ರಿ ಸಂಜೆ ಸುಮಾರು 4:00 ಗಂಟೆಯಲ್ಲಿ ಟೀ ಕಾಯಿಸಿ ಕೊಟ್ಟಿದ್ದಾಳೆ. ಈತ ಟೀ ಕುಡಿಯುತ್ತಿರುವಾಗ ಹೆಂಡತಿ ಗಾಯಿತ್ರಿ ಮಾವ ಪಾಕಿಯನಾದನ್ ಜೊತೆ ಮಾತನಾಡುತ್ತಿದ್ದುದ್ದನ್ನು ಗಮನಿಸಿದ್ದಾನೆ. ಆದರೆ ಅವರು ಮಾತನಾಡುತ್ತಿದ್ದುದ್ದು ಜಾನ್ಸನ್‌ಜೀವಗೆ ಏನೂ ಕೇಳಿಸುತ್ತಿರಲಿಲ್ಲ, ನಂತರ ಹೆಂಡತಿ ಮನೆಯೊಳಗೆ ಬಂದಾಗ ನಮ್ಮ ತಂದೆಯ ಜೊತೆಯಲ್ಲಿ ಏನು ಮಾತನಾಡುತ್ತಿದ್ದೆ ಎಂದು ಕೇಳಿದ್ದಾನೆ. ಆದರೆ ಪತ್ನಿ ಏನು ಉತ್ತರ ಕೊಟ್ಟಿಲ್ಲ. ಇದರಿಂದ ಕುಪಿತನಾದ ಗಂಡ ನನ್ನ ಹೆಂಡತಿಗೆ ಎರಡು ಏಟು ಒಡೆದು ನಮ್ಮ ತಂದೆ ಸರಿ ಇಲ್ಲ ಆತನನ್ನು ಮನೆಗೆ ಏಕೆ ಸೇರಿಸಿದ್ದೀಯಾ ಎಂದು ಮತ್ತೆ ಹೊಡೆದಿದ್ದಾನೆ.


ಎಸ್ಪಿ ಡಾ. ಬಿ.ಟಿ. ಕವಿತಾ

ಆನಂತರ ತಾನು ತಂದಿದ್ದ ಎಣ್ಣೆಯನ್ನು ಕುಡಿದು ರಾತ್ರಿ ಆದ ನಂತರ ನಮ್ಮ ತಂದೆಯನ್ನು ವಿಚಾರಿಸೋಣ ವೆಂದು ಸುಮ್ಮನಾಗಿದ್ದಾನೆ. ಸ್ವಲ್ಪ ಸಮಯದ ನಂತರ ತಂದೆ ಪಾಕಿಯಾನಾದನ್ ಎಣ್ಣೆ ಹೊಡೆದು ಫುಲ್ ಟೈಟಾಗಿ ಮನೆ ಹೊರಗೆ ಇರುವ ಮಾವಿನ ಮರದ ಕೆಳಗಡೆ ಮಲಗಿದ್ದ, ಸಂಜೆ ಸುಮಾರು 6:45ರ ಸಮಯದಲ್ಲಿ ನಮ್ಮ ತಂದೆ ಮಲಗಿದ್ದನ್ನು ನೋಡಿದ ಜಾನ್ಸನ್‌ಜೀವ ಮನೆಯ ಬಾತ್ ರೂಮ್ ಹತ್ತಿರ ಕುಳಿತು ಬೀಡಿ ಸೇದುತ್ತಾ ಕುಳಿತಿದ್ದ ರಾತ್ರಿ ಸುಮಾರು 8:00 ಗಂಟೆ ಸಮಯದಲ್ಲಿ ನೆಲದ ಮೇಲೆ ಮಲಗಿದ್ದ ತಂದೆ ಫಾಕಿಯಾನಾದನ್ ನೋಡಿ ನನ್ನ ಹೆಂಡತಿ ಜೊತೆ ಸಂಬಂಧ ಇಟ್ಟುಕೊಂಡು ಹೇಗೆ ಮಲಗಿದ್ದಾನೆ ನೋಡು ಎಂದು ಮನಸ್ಸಿ ನಲ್ಲಿಯೇ ಕುದಿದು ಹೋಗಿದ್ದಾನೆ.

ಕಳೆದ ಹಲವಾರು ದಿನಗಳಿಂದ ತನ್ನ ತಂದೆಯ ಮೇಲೆ ಅನುಮಾನ ಗೊಂಡು ಒಲಗೊಳಗೆ ಕುದಿಯುತ್ತಿದ್ದ ಜಾನ್ಸನ್ ಜೀವ ಅಂದು ಒಂದು ನಿರ್ಧಾರಕ್ಕೆ ಬಂದೇ ಬಿಟ್ಟಿದ್ದಾನೆ. ಇಂದು ಹೇಗಾದರೂ ಮಾಡಿ ಈತನನ್ನು ಮುಗಿಸಲೇಬೇಕು ಎಂದು ನಿರ್ಧರಿಸಿ ದ್ದಾನೆ. ಮೊದಲೇ ಕುಡಿದ್ದರಿಂದ ಕೋಪ ಮತ್ತಷ್ಟು ಹೆಚ್ಚಾಗಿ ಮನಸ್ಸನ್ನು ಹತೋಟಿಗೆ ತೆಗೆದುಕೊಳ್ಳಲು ಆಗದೇ ಆತ ಮಲಗಿದ್ದಲ್ಲಿಗೆ ಹೋಗಿ ಇಟ್ಟಿಗೆಗಳನ್ನು ಜೋಡಿಸಿರುವ ಪಕ್ಕದಲ್ಲಿದ್ದ ಕಲ್ಲಿನ ಗೋಡೆಯಿಂದ ಒಂದು ಕಲ್ಲನ್ನು ಎತ್ತಿಕೊಂಡು ಜೋರಾಗಿ ಮಲಗಿದ್ದ ಫಾಕಿಯಾನಾದನ್ ತಲೆಗೆ ಬಲವಾಗಿ ಕಲ್ಲಿನಿಂದ ಹೊಡೆದೇ ಬಿಟ್ಟಿದ್ದಾನೆ. ಒಡೆದ ರಭಸಕ್ಕೆ ತಲೆಯಿಂದ ಚಿಮ್ಮಿದ ರಕ್ತ ಪಕ್ಕದಲ್ಲಿರುವ ಇಟ್ಟಿಗೆ ಗೋಡೆಗೆ, ಹಗ್ಗದ ಮಂಚಕ್ಕೆ ಹಾಗೂ ಈತನ ಕೈಗೆ ಹಾರಿದೆ. ಮೊದಲೇ ಕಂಠ ಪೂರ್ತಿ ಕುಡಿದು ಮಲಗಿದ್ದ ಫಾಕಿಯಾ ನಾದನ್ ಈತನ ಹೊಡೆತಕ್ಕೆ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾನೆ.


ಸಿಪಿಐ ಚಿಕ್ಕರಾಚಶೆಟ್ಟಿ

ಅಷ್ಟರಲ್ಲಾಗಲೇ ಗಲಾಟೆಯನ್ನು ಕೇಳಿ ಚಿಕ್ಕಪ್ಪ ಸೇಸುರಾಜು ಮತ್ತು ಅವರ ಮಗ ಆರೋಗ್ಯಸ್ವಾಮಿ ರವರುಗಳು ಸ್ಥಳಕ್ಕೆ ಓಡಿ ಬಂದಿದ್ದಾರೆ. ತಂದೆಯನ್ನು ನಿಕೃಷ್ಟವಾಗಿ ಕೊಂದು ಅಲ್ಲಿಯೇ ದಿಗ್ಭ್ರಮೆಗೊಂಡು ನಿಂತಿದ್ದ ಮಗನನ್ನ ಏಕೆ ನಿಮ್ಮಪ್ಪನನ್ನು ಹೊಡೆದು ಸಾಯಿಸಿದೆ ಪ್ರಶ್ನಿಸಿ ಹೊಡೆದಿದ್ದಾರೆ. ಈ ವೇಳೆ ಆತನ ಹೆಂಡತಿ ಗಾಯತ್ರಿಯು ಸಹ ಬಂದು ಬೈಯುತ್ತಿದ್ದಳು. ಘಟನೆಯಿಂದ ದಿಕ್ಕು ತೋಚದಂತಾದ ಜಾನ್ಸನ್ ಅಲ್ಲಿಂದ ತಪ್ಪಿಸಿಕೊಂಡು ಸಂದನಪಾಳ್ಯ ಗ್ರಾಮದ ಕಡೆಗೆ ಓಡಿ ಹೋಗಿದ್ದಾನೆ. ಅಷ್ಟರಲ್ಲಾಗಲೇ ರಾಮಾಪುರ ಪೊಲೀಸರಿಗೆ ವಿಷಯ ಮುಟ್ಟಿಸಲಾಗಿದ್ದರಿಂದ ಕೂಡಲೇ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ.

ಸುಮಾರು ಅರ್ಧ ಗಂಟೆಯ ನಂತರ ಬಂದು ಮನೆಯ ಹಿಂಭಾಗದಲ್ಲಿ ಅವಿತುಕೊಂಡು ನೋಡುತ್ತಿದ್ದ ಜಾನ್ಸನ್ ಗಾಬರಿಗೊಂಡು ಅಲ್ಲಿಂದ ಮತ್ತೆ ಮದ್ಯಪಾನ ಮಾಡಲು ಹೊರಟು ಹೋಗಿದ್ದಾನೆ. ಚಿನ್ನಣ್ಣನವರ ಮನೆಯ ಮುಂಭಾಗದಲ್ಲಿರುವ ಮನೆಯ ಬಳಿ ಬರುತ್ತಿದ್ದಾಗ ಪೊಲೀಸರು ಈತನನ್ನು ವಶಕ್ಕೆ ಪಡೆದಿದ್ದಾರೆ.

ಜಾನ್ಸನ್‌ಜೀವನನ್ನು ವಶಕ್ಕೆ ಪಡೆದ ರಾಮಾಪುರ ಠಾಣೆ ಪೊಲಿಸರು ಆತನನ್ನು ವಿಚಾರಣೆಗೊಳಪಡಿಸಿದಾಗ ನಾನು ಕೆಲಸಕ್ಕೆಂದು ಮನೆ ಬಿಟ್ಟು ಹೋದಾಗ ನಮ್ಮ ತಂದೆ ಪಾಕಿಯಾನಾದನ್‌ರವರು ನನ್ನ ಹೆಂಡತಿಯ ಜೊತೆ ಅನೈತಿಕ ಸಂಬಂಧ ಹೊಂದಿದ್ದು ಇದರಿಂದ ಜಿಗುಪ್ಸೆಗೊಂಡ ನಾನು ಕುಡಿದ ಮತ್ತಿನಲ್ಲಿ ರಾತ್ರಿ ಸುಮಾರು 8:00 ಗಂಟೆ ಸಮಯದಲ್ಲಿ ನನ್ನ ತಂದೆ ಪಾಕಿಯಾನಾದನ್‌ರವರು ಮಾವಿನ ಮರದ ಕೆಳಗೆ ಬೋರಲಾಗಿ ಮಲಗಿದ್ದಾಗ ಪಕ್ಕದಲ್ಲಿರುವ ಒಂದು ಕಲ್ಲಿನಿಂದ ನಮ್ಮ ತಂದೆ ಪಾಕಿಯಾನಾದನ್‌ರವರ ತಲೆಗೆ ಬಲವಾಗಿ ಹೊಡೆದು ಕೊಲೆ ಮಾಡಿರುತ್ತೇನೆ ಎಂದು ಹಂತಕ ಆರೋಪಿ ಪೊಲೀಸರ ಬಳಿ ತಪ್ಪೊಪ್ಪಿಕೊಂಡಿದ್ದಾನೆ.

ಮಾರನೆಯ ದಿನ 22-9-2025ರಂದು ಮಧ್ಯಾಹ್ನ 12:30ರ ಸಮಯದಲ್ಲಿ ಮೃತನ ಅಣ್ಣ ಸುಮಾರು 58 ವರ್ಷದ ಮೊದಲೈಸ್ವಾಮಿ ರಾಮಾಪುರ ಠಾಣೆಗೆ ಹಾಜರಾಗಿ ನಾನು ಡ್ರೈವರ್ ಕೆಲಸ ಮಾಡಿಕೊಂಡಿದ್ದು ತಂದೆ ಅರುಳಾನಂದ್‌ಗೆ ನಾನು ಹಾಗೂ ನನ್ನ ತಮ್ಮ ಪಾಕಿಯ ನಾದನ್ ಸೇರಿ ಒಟ್ಟು ಎಂಟು ಜನ ಮಕ್ಕಳು ಮೊದಲನೆ ಯವನು ಲೇ. ಸೆಲ್ವರಾಜ್, ಎರಡನೆಯವನು ಸೂಸೈಯಪ್ಪನ್, ಮೂರನೆಯವನು ಅಪ್ಪು, ನಾಲ್ಕನೆಯವನು ಲೇ. ಸಂಸೋನ್, ಐದನೆಯವನು ಲೇ. ತೆರೇಸನಾದನ್, ಆರನೆಯವನು ಮುದಲೈಸ್ವಾಮಿ, ಏಳನೆಯವನು ಪಾಕಿಯನಾದನ್, ಎಂಟನೆಯವಳು ಎಲಿಜಬೆತ್ ರಾಣಿ.

ಮೃತ ಪಾಕಿಯನಾದನ್ ಡ್ರೈವರ್ ಕೆಲಸ ಮಾಡಿಕೊಂಡಿದ್ದ. ಈತನ ಹೆಂಡತಿ ಸಗಾಯಿಮೇರಿ ಈ ದಂಪತಿಗಳಿಗೆ ಜಾನ್ಸನ್‌ಜೀವ (33 ವರ್ಷ), ಮೇರಿ ಮೆರ್ಲಿನ್ ನಿತ್ಯ ಹಾಗೂ ವಿಕ್ಟರ್ ನೆಪೋಲಿಯನ್ ಎಂಬ ಮೂವರು ಮಕ್ಕಳು. ಹಿರಿಯ ಮಗ ಜಾನ್ಸನ್‌ಜೀವ ಅದೇ ಗ್ರಾಮದ ಗಾಯತ್ರಿ ಎಂಬಾಕೆಯನ್ನು ಪ್ರೀತಿಸಿ ಮದುವೆಯಾಗಿದ್ದು ಅವನಿಗೆ ಒಂದು ವರ್ಷದ ಹೆಣ್ಣು ಮಗುವಿದ್ದು ಮದುವೆಯ ಹೊಸತರಲ್ಲಿ ತನ್ನ ಹೆಂಡತಿಯ ಜೊತೆ ಚೆನ್ನಾಗಿದ್ದನು. ನಂತರ ನನ್ನ ಹೆಂಡತಿಯನ್ನು ನನ್ನ ತಂದೆ ಇಟ್ಟುಕೊಂಡಿದ್ದಾನೆ ಎಂದು ಆಗಾಗ್ಗೆ ತಂದೆ ಪಾಕಿಯನಾದನ್ ಮೇಲೆ ಗಲಾಟೆ ಮಾಡುತ್ತಿದ್ದನು. ಈ ವಿಚಾರವಾಗಿ ಪಾಕಿಯನಾದನ್

☞10

# ಉಡುಪಿ: ಜೊತೆಗಾರರಿಂದಲೇ ಕೊಲೆಯಾದ ಬಸ್ ಮಾಲಿಕ!

ಉಡುಪಿ
✍ ಮೋಹನ್ ಬೋಳಂಗಡಿ

**ಬಹಳ ಸಮಯದ ನಂತರ ಉಡುಪಿಯಲ್ಲಿ ರಕ್ತ ಹರಿದಿದೆ. ಈ ಒಂದು ಮರ್ಡರ್ ಪ್ರಕರಣದ ಹಿಂದೆ ಹಲವು ಮಜಲುಗಳಿವೆ. ಒಂದು ಅಂದಾಜಿನ ಪ್ರಕಾರ ಈ ಒಂದು ಹತ್ಯೆಗೆ ರಿವೆಂಜ್ ಬಹುತೇಕ ಖಚಿತ. ಎಲ್ಲವೂ ಪ್ರೀಪ್ಲಾನ್ ಪ್ರಕಾರವೇ ನಡೆದಿದೆ. ಯಾರ ಕೈಗೂ ಸಿಗದ ವ್ಯಕ್ತಿ, ಯಾರನ್ನು ಹತ್ತಿರಕ್ಕೂ ತೆಗೆದುಕೊಳ್ಳದ ವ್ಯಕ್ತಿ, ಅಷ್ಟೇ ಈಜಿಯಾಗಿ ತಲವಾರಿಗೆ ಮೈಒಡ್ಡುತ್ತಾನೆ ಅಂದ್ರೆ ನಂಬಲು ಸಾಧ್ಯವೇ ಇಲ್ಲ. ಈಗ ಕೊಲೆ ಮಾಡಿದವರು, ಸರಂಡರ್ ಆಗಿದ್ದಾರೆ ನಿಜ. ಆದರೆ ಅವರ ಜೊತೆಗೆ ಗುಪ್ತ ವ್ಯಕ್ತಿಗಳು ಇದ್ದರಾ? ಎಂಬ ಅನುಮಾನವೂ ಇದೆ. ಅತ್ಯಂತ ವ್ಯವಸ್ಥಿತವಾಗಿ ಆತನನ್ನು ಕಡಿದು ಮಲಗಿಸಿದ್ದಾರೆ. ಉಡುಪಿಯ ಕಾಲಿ-ಪಿಲ್ಲೆ ರೌಡಿ ಅನಾಥವಾಗಿ ಹೆಣವಾಗಿದ್ದಾನೆ. ಕೊಂದವರು ಎನ್ನಲಾದವ್ರೆ ಸರೆಂಡರ್ ಆಗಿದ್ದಾರಾ...? ಅಥವಾ ಡಮ್ಮಿಗಳು ಸರಂಡಾರಾದರಾ? ಈ ಹತ್ಯೆಯ ಸೂತ್ರಧಾರಿ ಯಾರು? ಯಾಕಾಗಿ ಈ ಹತ್ಯೆ ನಡೆಯಿತು? ಅದೆಲ್ಲವೂ ಇನ್ವೆಸ್ಟಿಗೇಷನ್ ಸಂದರ್ಭದಲ್ಲಿ ಹೊರಬರಬೇಕು. ಉಡುಪಿಯ ಪೊಲೀಸರು ಕಠಿಣ ರೀತಿಯಲ್ಲಿ ತನಿಖೆ ನಡೆಸದಿದ್ದರೆ ಈ ಪ್ರಕರಣಕ್ಕೆ ರಿವೆಂಜ್ ಕಟ್ಟಿಟ್ಟ ಬುತ್ತಿ ಎನ್ನುವ ಮಾತು ಇಡೀ ಉಡುಪಿಯಲ್ಲಿ ಕೇಳಿ ಬರುತ್ತಿದೆ.**


ಕೊಲೆಯಾದ ಸೈಫುದ್ದೀನ್

ಉಡುಪಿಯ ಕಡಲತಡಿ ಮತ್ತೊಮ್ಮೆ ರಕ್ತವನ್ನು ಕುಡಿದಿದೆ. ಅಪರಾಧ ಪ್ರಕರಣಗಳು ಆಗಾಗ ನಡೆಯುತ್ತಿತ್ತು.. ನಡೆದಿದೆ. ಆದರೆ ಒಂದು ಭೀಬತ್ಸ ರೌಡಿಯ ಮೇಲಿನ ಮಾರಕ ದಾಳಿ ಕೆಲವು ದಿನಗಳಿಂದ ನಡೆದಿರಲಿಲ್ಲ. ಆ ಮಟ್ಟಿಗೆ ಉಡುಪಿ ಶಾಂತವಾಗಿತ್ತು. ಈಗ ಮತ್ತೊಮ್ಮೆ ಉಡುಪಿಯ ಕಡಲತಟವು ಭೀಕರವಾಗಿದೆ. ಅಪರಾಧ ಜಗತ್ತಿನ ಆಯುಧಗಳು ಮತ್ತೊಮ್ಮೆ ರಣಕೆಕೆ ಹಾಕಿವೆ. ಉಡುಪಿಯ ಪಾತಕ ಜಗತ್ತಿಗೆ ಅಂಕುಶ ಬಿದ್ದೆ ಹೊಯ್ತು. ಅನ್ನುತ್ತಿರುವಾಗ ಈ ಹೆಣ ಬಿದ್ದಿದೆ ನೋಡಿ. ಆ ಹೆಣಕ್ಕಾಗಿ ಉಡುಪಿಯ ಜನರು ಯಾರೂ ಮರುಗುತ್ತಿಲ್ಲ, ಸಂಕಟಪಡುತ್ತಿಲ್ಲ, ಯಾರಿಗೂ ತೀವ್ರ ಆಘಾತವೂ ಆಗಿಲ್ಲ. ಆದರೆ ನಮ್ಮ ಪರಿಸರದಲ್ಲಿ ಮತ್ತೆ ತಲವಾರಿನ ಸದ್ದು ಕೇಳಲು ಪ್ರಾರಂಭವಾಯಿತು ಎಂಬ ನೋವು ಉಡುಪಿಯ ಸಭ್ಯ ಜನರ ಮುಖದಲ್ಲಿ ಕಾಣಿಸುತ್ತಿದೆ. ನಮ್ಮ ಊರಿನ ಹೆಸರಿಗೆ ಈ ರೀತಿಯ ಕಳಂಕ ಬರಬಾರದು ಎಂಬ ಕಾರಣಕ್ಕೆ ಅವರಲ್ಲಿ ಆತಂಕ ಉಂಟಾಗಿದೆ.

ಅವರ ಆತಂಕಕ್ಕೂ ಕಾರಣವಿದೆ. ಒಂದು ಹತ್ಯೆಗೆ ಇನ್ನೊಂದು ಹತ್ಯೆ... ರಿವೆಂಜ್... ಎಂಬಂತೆ ಹಲವು ಹತ್ಯೆಗಳು ಸರಪಳಿಯಂತೆ ನಡೆದ ಉದಾಹರಣೆ, ಈ ನೆಲದಲ್ಲಿ ಕಾಣಸಿಗುತ್ತದೆ. ಆ ರೀತಿಯ ಹತ್ಯೆಗಳ ಸರಪಣಿ ಮತ್ತೆ ಪ್ರಾರಂಭವಾಗಿ ಬಿಡುತ್ತದೆ ಎಂಬ ಭಯ ಜನರಲ್ಲಿ ಇದೆ. ಹಾಗಾಗಿ ಜನರು ಹತ್ಯೆಗಳಿಗೆ ಫುಲ್‌ಸ್ಟಾಪ್ ಹಾಕಬೇಕು ಅಂತ ಬಹಳ ಸಮಯದಿಂದ




ಆಗ್ರಹಿಸುತ್ತಿದ್ದವರಿಗೆ ಕೆಲವು ಸಮಯಗಳಿಂದ ನೆಮ್ಮದಿ ಸಿಕ್ಕಿದ್ದು ನಿಜ. ಆ ನೆಮ್ಮದಿಗೆ ಭಂಗವೆಂಬಂತೆ ನಡೆದಿದೆ ನೋಡಿ ಈ ಮರ್ಡರ್. ಅಷ್ಟಕ್ಕೂ ಸತ್ತವ ಯಾರು? ಅವನ ಹಿನ್ನೆಲೆ ಏನು?

ಎಕೆಎಂಎಸ್, ಬಸ್ ಉಡುಪಿಯ ಎಲ್ಲಾ ಜನರಿಗೂ ಗೊತ್ತು. ಆದರ ಮಾಲೀಕನ ಬಗ್ಗೆ ಪೂರ್ತಿ ವಿವರ ಇಲ್ಲದಿದ್ದರೂ ಆ ಬಸ್ಸಿನ ಬಗ್ಗೆ ಗೊತ್ತು. ಪದೇ ಪದೇ ಆ ಬಸ್ಸಿನ ಮಾಲಿಕ ಗಲಾಟೆ ಮಾಡಿಕೊಳ್ಳುತ್ತಿದ್ದ ಅನ್ನುವುದು ಗೊತ್ತಿರುವ ವಿಚಾರವೇ. ಅದೇ ಬಸ್‌ನ ಮಾಲಿಕ ಸೈಫುದ್ದೀನ್, ಹಂತಕರು ಬೀಸಿದ ತಲವಾರಿಗೆ ಅವನದೇ ಮನೆಯಲ್ಲಿ ಹೆಣವಾಗಿ ಬಿದ್ದಿದ್ದಾನೆ. ಅದು ಕೂಡ ಹಾಡ-ಹಗಲಲ್ಲಿ ನಡೆದ ಕ್ರೂರ ಹತ್ಯೆ. ಮೊನ್ನೆ ಶನಿವಾರ ಬೆಳ್ಳಂ ಬೆಳಗ್ಗೆಯೇ ಉಡುಪಿಯ ಕಡೆಯಿಂದ ಈ ಸುದ್ದಿಯೊಂದು ಬರುತ್ತಿದ್ದಂತೆ ಒಂದಷ್ಟು ಜನರು ಶನಿ ಹೋಯಿತು ಅಂದುಕೊಂಡರು. ಇನ್ನೊಂದಿಷ್ಟು ಜನರು ಮತ್ತೆ ಶುರುವಾಯಿತಾ ಅಂತ ಗೊಣಗಿಕೊಂಡರು. ಇನ್ನು ಕೆಲವರು ಸಮಾಜದಲ್ಲಿ ಇಂತಹ ಘಟನೆಗಳಿಗೆ ಆಸ್ಪದ ಆಗುತ್ತಿರುವುದರ ವಿಚಾರವಾಗಿ ವ್ಯವಸ್ಥೆಯ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಒಟ್ಟಿನಲ್ಲಿ ಅವರವರ ಯೋಚನೆಗೆ ತಕ್ಕಂತೆ ಅಂದುಕೊಂಡಿದ್ದು ಸತ್ಯ.

ಎಸ್, ಈ ಎಕೆಎಂಎಸ್ ಬಸ್ನ ಮಾಲೀಕ ಸೈಫುದ್ದೀನ್, ಮಣಿಪಾಲ್ ಸರ್ಕಲ್ ಹತ್ತಿರ ಇರುವ ರಘುಪತಿ ಭಟ್ಟರ ಹೋಟೆಲ್ ಸನಿಹವೇ ಇರುವ ಮನೆಯಲ್ಲಿ ಹೆಂಡತಿ ಮಕ್ಕಳೊಂದಿಗೆ ವಾಸವಾಗಿರುತ್ತಾನೆ. ಆತ ಜಿಲ್ಲೆಯ ಎರಡು ಪೊಲೀಸ್ ಠಾಣೆಯಲ್ಲಿ ರೌಡಿಶೀಟರ್ ಎಂಬ ಲೇಬಲ್ ಅಂಟಿಸಿಕೊಂಡವ. ಮೂರು ಮರ್ಡರ್ ಪ್ರಕರಣದ ಪ್ರಮುಖ ಆರೋಪಿ ಆಗಿದ್ದವ, ಹತ್ತಕ್ಕೂ ಹೆಚ್ಚು ಹಲ್ಲೆ, ಕೊಲೆ ಯತ್ನ ಸಹಿತ ವಿವಿಧ ಪ್ರಕರಣಗಳನ್ನು ತನ್ನ ಎದೆಗೆ ಅಂಟಿಸಿಕೊಂಡಿದ್ದಂತಹ ಸಮಾಜಘಾತಕ ವ್ಯಕ್ತಿ.

ಈ ಸೈಫುದ್ದೀನ್ ಸಮಾಜದ ಬಗ್ಗೆ ಕಳಕಳಿ ಹೊಂದಿರುವಂಥವನು ಅಲ್ಲ ಜನರ ನೋವುಗಳಿಗೆ ಸ್ಪಂದಿಸುತ್ತಿದ್ದಂತಹ ವ್ಯಕ್ತಿಯು ಅಲ್ಲ. ಜನಪರ ಕಾಳಜಿಯ ಕಾರಣಕ್ಕೆ ಹೋರಾಟ ಮಾಡಿದ ಕಾರಣಕ್ಕೆ ಕೇಸುಗಳನ್ನು ಹಾಕಿಸಿಕೊಂಡವನು ಅಲ್ಲ. ಈತ ಪಕ್ಕ ಕ್ರಿಮಿನಲ್ ಮೆಂಟಲಿಟಿಯ ವ್ಯಕ್ತಿ. ಹಾಗಾಗಿ ಈ ವ್ಯಕ್ತಿಯ ಬಗ್ಗೆ ಸಮಾಜದ ಹಾಗೂ ಜಿಲ್ಲೆಯ ಯಾವುದೇ ಜನರಿಗೂ ಉತ್ತಮವಾದಂತಹ ಅಭಿಪ್ರಾಯ ಇರಲೇ ಇಲ್ಲ. ಅದೇ ವ್ಯಕ್ತಿಯೇ ಮೊನ್ನೆ ತೀರ ಹತ್ತಿರದ ವ್ಯಕ್ತಿಗಳಿಂದಲೇ ಹತ್ಯೆಯಾಗಿದ್ದಾನೆ. ಕೈಯಲ್ಲಿರುವ ತನ್ನದೇ ಒಡೆತನದ ಬಂಗಲೆಯಂತಹ ಮನೆಯಲ್ಲಿ ಯದ್ವಾ-ತದ್ವಾ ಕಡೆಸಿಕೊಂಡು ಹತ್ಯೆಯಾಗಿದ್ದಾನೆ.


ಎಸ್ಪಿ ಹರಿರಾಂ

ನಿಜ ಏನಂದರೆ, ಈ ಹತ್ಯೆಯ ವಿಚಾರ ಯಾರಿಗೂ ಗೊತ್ತಾಗುವ ಹಾಗೂ ಇರಲಿಲ್ಲ. ಹತ್ಯೆ ಆರೋಪಿಗಳು ಮಲ್ಪೆ ಪೊಲೀಸ್ ಠಾಣೆಗೆ ಹೋಗಿ ನಾವು ಹೀಗೆ ಮರ್ಡರ್ ಮಾಡಿ ಬಂದಿದ್ದೇವೆ ಅಂತ ಸರೆಂಡರ್ ಆದ ಮೇಲೆಯೇ ಈ ಮರ್ಡರ್ ವಿಚಾರ ಗೊತ್ತಾಗಿರುವಂಥದ್ದು ಅನ್ನುವುದು ಪತ್ರಿಕೆಗೆ ಉಡುಪಿಯ ಪಾತಕ ಜಗತ್ತಿನ ಬಗ್ಗೆ ತಿಳಿದಿರುವಂತಹ ವ್ಯಕ್ತಿಗಳಿಂದ ಬಂದಿರುವಂತಹ ಪಕ್ಕ ಮಾಹಿತಿಯಾಗಿದೆ.


ಫೈರುಝ್ ಖಾನ್ ಶುಕುರು ಶರೀಫ್

## ಯಾರೀ ಸೈಫುದ್ದೀನ್?

ಅತ್ರಾಡಿಯ ಅಬ್ದುಲ್ ಖಾದರ್ ಎಂಬಾತನ ಮೂರನೆಯ ಮಗನೇ ಈ ಸೈಫುದ್ದೀನ್. ಅಬ್ದುಲ್ ಖಾದರ್ ಎಕೆಎಂಎಸ್ ಎಂಬ ಒಂದು ಬಸ್ ಅನ್ನು ನಡೆಸುತ್ತಿರುತ್ತಾನೆ. ಉಡುಪಿಯ ಹೈವೇ ಹತ್ತಿರ ಡಾಬಾ ಟೈಪ್ ಹೋಟೆಲ್ ಒಂದನ್ನು ನಡೆಸುತ್ತಾನೆ. ಅಲ್ಲಿ ಒಂದಷ್ಟು ಗಲಾಟೆಯಾದ ಕಾರಣ ಆ ಹೋಟೆಲ್ ಅನ್ನು ಮುಚ್ಚಬೇಕಾಗುತ್ತದೆ. ಅಬ್ದುಲ್ ಖಾದರ್ ಎಕೆಎಂಎಸ್ ಬಸ್ಸನ್ನು ನಡೆಸುತ್ತಲೇ ಬೇರೆ ಬೇರೆ ವ್ಯವಹಾರದಲ್ಲಿ ತೊಡಗಿಕೊಳ್ಳುತ್ತಾನೆ. ಆತನಿಗೆ ಪುಂಡಲಿಕ ಎಂಬ ವ್ಯಕ್ತಿಯ ಪರಿಚಯವಾಗುತ್ತದೆ. ಅದು ಗಾಢ ಸ್ನೇಹವಾಗಿಯೂ ಮಾರ್ಪಾಡಾಗುತ್ತದೆ. ಆ ಪುಂಡಲಿಕ ಪಾತಕ ಜಗತ್ತಿನ ಸಂಪರ್ಕದಲ್ಲಿ ಇದ್ದಂತವನೇ ಆಗಿದ್ದ. ಆವತ್ತಿನ ಕಾಲದ ಗ್ಯಾಂಗ್‌ಸ್ಟಾರ್ ಸಾಧು ಶೆಟ್ಟಿಯ ಜೊತೆಗೆ ಕಾಣಿಸಿಕೊಳ್ಳುತ್ತಿದ್ದವ ಈ ಪುಂಡಲೀಕ. ಆ ಪುಂಡಲಿಕನ ಸಂಪರ್ಕವನ್ನು ಈ ಅಬ್ದುಲ್ ಖಾದರ್ ತನ್ನ ಲಾಭಕ್ಕೆ ಬಳಸಿಕೊಳ್ಳುತ್ತಾನೆ. ಒಂದು ಸಂದರ್ಭದಲ್ಲಿ ಅಬ್ದುಲ್ ಖಾದರ್‌ಗೆ ಈ ಪುಂಡಲಿಕ ಬಲಗೈ ಬಂಟ ಅಂತಲೇ ಅಂದುಕೊಂಡವರಿದ್ದರು ಉಡುಪಿಯಲ್ಲಿ. ಹಾಗಿರುವಾಗ ಈ ಪುಂಡಲಿಕ, ಅಬ್ದುಲ್ ಖಾದರ್‌ನ ಮಗಳೊಂದಿಗೆ ಪ್ರಣಯದಾಟ ಶುರು ಮಾಡುತ್ತಾನೆ. ಈ ಪ್ರಣಯದಾಟದ ವಿಚಾರ ಮನೆಯ ಇತರರಿಗೆ ಗೊತ್ತಾಗಲು ಹೆಚ್ಚು ಸಮಯ ಬೇಕಾಗರಲಿಲ್ಲ. ಯಾವಾಗ ಮನೆಯ ಮಗಳನ್ನು ತನ್ನ ಮಗ್ಗುಲಿಗೆ ಕೆಡವಿಕೊಂಡ ಈ ಪುಂಡಲಿಕ ಅನ್ನುವುದು ಗೊತ್ತಾಯಿತೋ, ಆಗಲೇ ಅಬ್ದುಲ್ ಖಾದರ್ ಸಹಿತ ಅವರ ಮಕ್ಕಳು ಖುದ್ದರಾಗುತ್ತಾರೆ. ಅಬ್ದುಲ್ ಖಾದರ್‌ನ ಹಿರಿಯ ಮಗ ಎಂ.ಡಿ ಹುಸೇನ್, ಎರಡನೆಯ ಮಗ ನಾಸಿರ್, ಮೂರನೇ ಮಗ ಈ ಸೈಫುದ್ದಿನ್ ಹಾಗೂ ನಾಲ್ಕನೆಯ ಅಂಜು ಯಾನೆ ಅನ್ವರ್ ಹುಸೇನ್ ಸೇರಿಕೊಂಡು ಪುಂಡಲಿಕನಿಗೆ ಚಟ್ಟ ಕಟ್ಟುತ್ತಾರೆ.

ಇದು ಸೈಫುದ್ದಿನ ಮೊದಲ ಮರ್ಡರ್ ಕಥೆ. ಈ ಒಂದು ಹತ್ಯೆಯು ಕೇವಲ ಸಹೋದರಿಯನ್ನು ಬಳಸಿಕೊಂಡ ಎಂಬ ಕಾರಣಕ್ಕೆ ಮಾಡಿದ್ದೆ ಹೊರತು ಯಾವುದೇ ಲಾಭಕ್ಕಾಗಿ ಅಲ್ಲ. ಈ ಕೊಲೆಯ ನಂತರ ಆ ಮನೆಯ ಬಹುತೇಕ ಸದಸ್ಯರು ತಟಸ್ಥರಾಗುತ್ತಾರೆ ಪಾತಕ ಜಗತ್ತಿನಿಂದ ದೂರವಿರಲು ಬಯಸುತ್ತಾರೆ. ಆದರೆ ಸೈಫುದ್ದಿನ್ ಮಾತ್ರ ಪಾತಕ ಜಗತ್ತಿನ ನಂಟನ್ನು ಬಿಡುವುದಿಲ್ಲ. ನಾನು ಸಾಧುಶೆಟ್ಟಿಯ ಬಂಟ ಪುಂಡಲಿಕನನ್ನೇ ಕೊಂದವ ಅಂತ ನಿಗರಾಡಿಕೊಂಡು ಓಡಾಡಲು ಪ್ರಾರಂಭಿಸುತ್ತಾನೆ. ಇದು ಉಡುಪಿಯಲ್ಲಿ ಒಂದು ಹವಾ ಕ್ರಿಯೇಟ್ ಮಾಡಿಕೊಟ್ಟದ್ದು ನಿಜವೇ. ಇದರ ಲಾಭವನ್ನು ಸೈಫುದ್ದಿನ್ ಯಥೇಚ್ಛವಾಗಿ ಪಡೆಯುತ್ತಾನೆ. ಪರಿಣಾಮ ಒಂದು ಬಸ್ ಹೊಂದಿದ್ದ.. ಈ ಫ್ಯಾಮಿಲಿಯು ಬರೋಬ್ಬರಿ 36 ಬಸ್ ಹೊಂದುವಂತಾಯ್ತು.

ಅಲ್ಲಿಂದ ಈತನ ಖದರ್ರೇ ಬೇರೆ ಆಯ್ತು ನೋಡಿ. ತನ್ನ ಒಡಹುಟ್ಟಿದ ಸಹೋದರರನ್ನು ಈತ ಅತ್ಯಂತ ನಿಕೃಷ್ಟವಾಗಿ ನೋಡಲು ಪ್ರಾರಂಭಿಸುತ್ತಾನೆ. ಬಾಯಲ್ಲಿ ಪುಂಕಾನು ಪುಂಕವಾಗಿ ಸುಳ್ಳು ಮಾತನಾಡುವ ಈತ ಯಾರಿಗೂ ಒಂದಿಷ್ಟು ಸಹಾಯ ಮಾಡುವುದಿಲ್ಲ. ಇದರಿಂದಾಗಿ ಅವರ ಕುಟುಂಬದ ಒಳಗೆ ಯಾವುದು ಸರಿ ಇಲ್ಲ ಎಂಬಂತಾಗುತ್ತದೆ. ಆದರೂ ಕುಟುಂಬಸ್ಥರು ತೀರ ದೂರವಾಗುವುದಿಲ್ಲ.

ಇತ್ತ ಸೈಫುದ್ದಿನ್ ಹಂತ ಹಂತವಾಗಿ ಹಣ ಮಾಡುತ್ತಾ ಸಾಗುತ್ತಾನೆ. ಮಣಿಪಾಲ್, ಉಡುಪಿ ಸಹಿತ ಹಲವು ಕಡೆ ಆಸ್ತಿ ಮಾಡುತ್ತಾನೆ. ಆ ಆಸ್ತಿ ತನ್ನ ಕುಟುಂಬಸ್ಥರ ಬದಲು

☞ 14


# ಐ ಲವ್ ಮೊಹಮ್ಮದ್! v/s ಐ ಲವ್ ಮಹಾದೇವ್!

✍ ಮಹದೇವ್ ಕೆಂಪಯ್ಯ

ಕೆಲವು ದಿನಗಳಿಂದ ಭಾರತ ದೇಶದಲ್ಲಿ ಹೊಸದೊಂದು ವಿದ್ಯಾಮಾನ ನಡೆಯುತ್ತಿದೆ. ಅದೇ ಐ ಲವ್ ಮೊಹಮ್ಮದ್! ಇದಕ್ಕೆ ಪ್ರತಿಯಾಗಿ, ಐ ಲವ್ ಮಹಾದೇವ್!! ಈ ಮೂಲಕ ಭಾರತದಲ್ಲಿ ಮತ್ತೊಮ್ಮೆ ದೇವರನ್ನು ಬೀದಿಗೆ ಎಳೆದು ತರಲಾಗಿದೆ ಎಂದರೆ ತಪ್ಪಾಗಲಾರದು. ಈ ಹಿನ್ನಲೆಯಲ್ಲಿ ಪ್ರತಿಭಟನೆ, ಗಲಾಟೆ, ಕಲ್ಲುತೂರಾಟ, ಲಾಟೀಚಾರ್ಜು, ಬಂಧನ, ಬೆದರಿಕೆ..... ಈಗಾಗಲೇ ಚಾಲೂ ಆಗಿವೆ.

ದೊಂಬಿ, ಸಾರ್ವಜನಿಕ ಆಸ್ತಿಪಾಸ್ತಿಗೆ ಬೆಂಕಿಹಚ್ಚುವ ದುರ್ವರ್ತನೆ, ಗೋಲಿಬಾರ್‌ನಂತಹ ದುಸ್ಥಿತಿ ಸದ್ಯಕ್ಕೆ ಎಲ್ಲೂ ಆಗಿಲ್ಲ, ಆದರೂ ದಿನನಿತ್ಯ ರಸ್ತೆಯಲ್ಲಿ ಒಟ್ಟಿಗೇ ಕುಳಿತು ವ್ಯಾಪಾರ ಮಾಡುವ, ಕೂಲಿನಾಲಿ ಮಾಡಿ ಒಟ್ಟೊಟ್ಟಿಗೇ ಬದುಕು ಸಾಗಿಸುವ ಯಾವುದೇ ದೇವರು ಧರ್ಮದ ಸೋಂಕನ್ನು ಮೈಗಂಟಿಸಿಕೊಳ್ಳದ ಎರಡೂ ಧರ್ಮದ ಸಾಮಾನ್ಯ ಜನರು ಇಂತಹ ಸಂಧರ್ಭದಲ್ಲಿ ಕೋಮು ಸೌಹಾರ್ಧತೆಯನ್ನು ಹಾಳುಮಾಡಲು ಕಾದು ಕುಳಿತವರ ಬಗ್ಗೆ ಇಬ್ಬರ ನಡುವೆ ಜಾತಿ ಧರ್ಮದ ಜಗಳ ತಂದಿಡುವವರ ಬಗ್ಗೆ ಪ್ರಜ್ಞಾವಂತ ಜನತೆ ಎಚ್ಚರದಿಂದಿರಬೇಕಾಗಿದೆ! ಉತ್ತರ ಪ್ರದೇಶದಲ್ಲಿ ಆರಂಭವಾಗಿದ್ದ ಐ ಲವ್ ಮೊಹಮ್ಮದ್ ಅಭಿಯಾನದ ಗಲಾಟೆಗಳು ದೇಶಾದ್ಯಂತ ಉಲ್ಬಣಗೊಂಡು, ನಮ್ಮ ವಾಣಿಜ್ಯ ನಗರಿ ದಾವಣಗೆರೆಗೂ ಕಾಲಿಟ್ಟು ಹಿಂದುತ್ವವಾದಿಗಳ ಅರೆಸ್ಟ್ ಆಗಿದೆ! ಈಗಾಗಲೇ ಹಲವು ರಾಜ್ಯಗಳಲ್ಲಿ ಪ್ರತಿಭಟನೆ ನಡೆದು ಹತ್ತಾರು ಕಡೆ ಎರಡು ಗುಂಪಿನ ನಡುವೆ ಕಲ್ಲೆಸೆತವಾಗಿದ್ದು, ಪೊಲೀಸರು ಲಾಠಿಚಾರ್ಜ್ ಕೂಡ ನಡೆಸಿದ್ದಾರೆ. ಹಿಂದೂ ಮುಸ್ಲಿಂ ಎರಡೂ ಕೋಮಿನ ಕಡೆಯವರ ಮೇಲೆ ಎಫ್‌ಐಆರ್‌ಗಳಾಗಿವೆ.

ಕಳೆದ ಸೆಪ್ಟೆಂಬರ್ 04ರಂದು ಉತ್ತರ ಪ್ರದೇಶದ ಕಾನ್ಪುರದಲ್ಲಿ ಈದ್-ಎ-ಮಿಲಾದ್-ಉನ್-ನಬಿ ಮೆರವಣಿಗೆಯ ಸಂದರ್ಭದಲ್ಲಿ, ಆ ಮಾರ್ಗದುದ್ದಕ್ಕೂ ಟೆಂಟ್‌ನಲ್ಲಿ 'ಐ ಲವ್ ಮೊಹಮ್ಮದ್' ಎಂಬ ಪೋಸ್ಟರ್ ಹಾಕಲಾಗಿತ್ತು. ಅದು ಇಸ್ಲಾಂ ಧರ್ಮದ ಸಂಸ್ಥಾಪಕರಾದ ಪ್ರಾಫೆಟ್ ಮಹಮ್ಮದ್ ಬರ್ತ್‌ಡೇ ಪ್ರೊಸೆಷನ್ ಜುಲೂಸ್, ರ್‍ಯಾಲಿ ನಡೆಯುತ್ತಿದ್ದಾಗ ಪರ್ಮಿಷನ್ ಇಲ್ಲದ ಜಾಗದಲ್ಲಿ ಐ ಲವ್ ಮೊಹಮ್ಮದ್ ಬ್ಯಾನರ್ ಹಾಕಿದ್ದರೆಂದು, ಅಲ್ಲಿ ಅನ್ಯ ಧರ್ಮಿಯರ ಮತ್ತೊಂದು ಬ್ಯಾನರ್ ಮೇಲೆ ಇದನ್ನು ಮುಸ್ಲಿಂ ಯುವಕರು ಕಟ್ಟಿದ್ದರೆಂದು, ಅದಕ್ಕೆ ಬ್ಯಾನರ್ ಹರಿದರೆಂದು, ಉತ್ತರ ಪ್ರದೇಶದ ಸ್ಥಳೀಯ ಪೊಲೀಸರು ಎಫ್.ಐ.ಆರ್. ಹಾಕಿದರೆಂದು ಕಾನ್ಪುರದಲ್ಲಿ ಆರಂಭವಾದ ಈ ಗಲಾಟೆ ಈಗ ಭಾರತದಾದ್ಯಂತ ವಿಸ್ತರಿಸಿದೆ!




ಮೊದಲ ಬಾರಿಗೆ ಮಾಡ್ರನ್ ಎಕ್ಸ್‌ಪ್ರೆಷನ್ ರೀತಿಯಲ್ಲಿ ಈ ಪುರಾತನ ಸಾಂಪ್ರದಾಯಿಕ ಯಾತ್ರೆಯಲ್ಲಿ ಐ ಲವ್ ಮಹಮ್ಮದ್ ಬ್ಯಾನರ್ ಕಾಣಿಸಿಕೊಂಡು, ಹೊಸ ಸೃಜನಶೀಲ ಅಭಿವ್ಯಕ್ತಿಗೆ ಅಭಿನಂದನೆಗಳ ಮಹಾಪೂರವೇ ಹರಿದು ಬಂದಿತ್ತಂತೆ. ಆದರೀಗ ಇದೇ ಐ ಲವ್ ಮಹಮ್ಮದ್ ಪ್ರಪಂಚದೆಲ್ಲೆಡೆ ಸದ್ದು ಮಾಡುತ್ತಿದೆಯಲ್ಲದೆ, ಕಟ್ಟರ್ ಹಿಂದುತ್ವ ವಾದಿಗಳು ಕೆರಳುವಂತೆ ಆಗಿದೆ. ಇದೇ ಈಗ ಹಲವು ಕಡೆ ಗಲಾಟೆಗೆ ಕಾರಣವಾಗಿದೆ.




ಸೆಪ್ಟೆಂಬರ್ 04 ರಂದೇ ಐ ಲವ್ ಮಹಮ್ಮದ್ ಪೋಸ್ಟರ್ ಹೊಂದಿರುವ ಟೆಂಟ್ ಅನ್ನು ಉತ್ತರ ಪ್ರದೇಶದ ಕಾನ್ಪುರದಲ್ಲಿ ಪೊಲೀಸರು ತೆಗೆಸಿದ್ದರು. ನಂತರ ಕಾನ್ಪುರದಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಧ್ವನಿ ಎತ್ತಲು ಮತ್ತು ಜ್ಞಾಪಕ ಪತ್ರವನ್ನು ಸಲ್ಲಿಸಲು ಧರ್ಮಗುರುವೊಬ್ಬರು ಕರೆ ನೀಡಿದ್ದರು. ಶುಕ್ರವಾರದ ಪ್ರಾರ್ಥನೆಯ ನಂತರ ಬರೇಲಿಯ ಇಸ್ಲಾಮಿಯಾ ಮೈದಾನದ ಬಳಿ ಭಾರಿ ಜನಸಮೂಹ ಜಮಾಯಿಸಿತ್ತು. ಅವನ್ಯಾರೋ ಧರ್ಮಗುರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿಗೇ ಧಮ್ಕಿ ಹಾಕಿ ಪತ್ವಾ ಹೊರಡಿಸುತ್ತಿದ್ದ!

ಕೆಲವರು ಆಕ್ಷೇಪಾರ್ಹ ಘೋಷಣೆಗಳನ್ನು ಕೂಗುತ್ತಿದ್ದಂತೆ ಜನಸಮೂಹ ಹೆಚ್ಚುತ್ತಲೇ ಇತ್ತು. ಕೆಲವು ಪ್ರತಿಭಟನಾಕಾರರು ಪೊಲೀಸರ ಮೇಲೆಯೇ ಕಲ್ಲುತೂರಾಟ ನಡೆಸಿದ ನಂತರ, ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ಲಾಠಿಪ್ರಹಾರ ನಡೆಸಿದ್ದರು. ಆಗ ಹಲವರನ್ನು ಬಂಧಿಸಿ ಎಫ್‌ಐಆರ್ ಮಾಡಲಾಯಿತೆಂದು 'ಐ ಲವ್ ಮಹಮ್ಮದ್' ಬ್ಯಾನರ್ ವಿರುದ್ದವೇ ಎಫ್‌ಐಆರ್ ಮಾಡಿದ್ದಾರೆಂದೂ ಈಗ ಭಾರತದಾದ್ಯಂತ ಪ್ರತಿಭಟನಾ ಹೋರಾಟಗಳು ಬೀದಿ ಬೀದಿಯಲ್ಲಿ ಭುಗಿಲೆದ್ದು ಸಮಾಜದ ಸ್ವಾಸ್ಥ್ಯ ಹಾಳಾಗುವ ಸೂಕ್ಷ್ಮ ಸಂಧರ್ಭ ಬಂದೊದಗಿದೆ.

**ಐ ಲವ್ ಮಹಮ್ಮದ್ ವರ್ಸಸ್ ಐ ಲವ್ ಮಹದೇವ್!**

ಕಾನ್ಪುರದಿಂದ ಭಾರತದ ಉದ್ದಗಲಕ್ಕೂ ಹರಡಿದ 'ಐ ಲವ್ ಮಹಮ್ಮದ್' ಮಂತ್ರವೀಗ ಕರ್ನಾಟಕದ ದಾವಣಗೆರೆಗೂ ದಾಟಿಬಂದು 8 ಜನ ಅರೆಸ್ಟ್ ಆಗಿದ್ದಾರೆ! ಕಳೆದ ಸೆಪ್ಟೆಂಬರ್ 24ರಂದು ದಾವಣಗೆರೆಯ ಕಾರ್ಲ್ ಮಾರ್ಕ್ಸ್ ನಗರದಲ್ಲಿ ಬ್ಯಾನರ್ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ಕೋಮಿನ ನಡುವೆ ಗಲಾಟೆ ನಡೆದಿತ್ತು. ಈ ವೇಳೆ ಹಿಂದೂಗಳ ಮನೆ ಮೇಲೆ ಕಲ್ಲುತೂರಾಟ ನಡೆದಿತ್ತು ಎಂಬ ಆರೋಪ ಕೇಳಿ ಬಂದಿತ್ತು. ಈ ಸಂಬಂಧ ಮೂರು ಮಂದಿಯ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು! ಈಗ ಎರಡೂ ಕೋಮಿನ 8 ಮಂದಿಯನ್ನು ಬಂಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ಕು ತಂಡಗಳನ್ನು ರಚನೆ ಮಾಡಿದ್ದು, ಇನ್ನುಳಿದವರ ಬಂಧನಕ್ಕೂ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಸೋಷಿಯಲ್ ಮೀಡಿಯಾಗಳನ್ನು ಹದ್ದುಬಸ್ತಿನಲ್ಲಿಟ್ಟು ಕಣ್ಣಿಡದಿದ್ದರೇ, ಹಿಂದೂ ಮುಸ್ಲಿಂ ಎರಡೂ ಧರ್ಮದ ಅಮಾಯಕರನ್ನು ರಾಜಕೀಯ ಪುಢಾರಿಗಳು ಬೀದಿಗಿಳಿಸಿ ಮತ್ತೊಂದು ಸುತ್ತಿನ ರಾಜಕೀಯ ಬೇಳೆ ಬೇಯಿಸಿಕೊಂಡು ಸಾಮಾನ್ಯ ಜನರ ಮನೆಗಳಿಗೆ ಅಂಗಡಿ ಮುಂಗಟ್ಟುಗಳಿಗೆ ಬೀಳುವ ಬೆಂಕಿಯಲ್ಲಿ ಚಳಿ ಕಾಯಿಸಿಕೊಂಡು, ಬೀಳುವ ಹೆಣಗಳ ಮೇಲೆ ರಾಜಕೀಯ ಭಾಷಣ ಕುಟ್ಟಿ ಓಟು ಎತ್ತುವ ಹುನ್ನಾರಕ್ಕೆ ಈಗಾಗಲೇ ಎರಡೂ ಪಕ್ಷದಲ್ಲಿರುವ, ಎರಡೂ ಧರ್ಮದೊಳಗಿರುವ ರಾಜಕೀಯ ಮುಖಂಡರೂ ಹವಣಿಸುತ್ತಿರುವುದಂತೂ ಸತ್ಯ. ಏಕೆಂದರೆ ಅದಕ್ಕಾಗಿಯೇ ಈಗ ಅಲ್ಲಲ್ಲಿ ಕೌಂಟರ್ ಅಟ್ಯಾಕ್ ರೀತಿಯಲ್ಲಿ 'ಐ ಲವ್ ಮಹಮ್ಮದ್!' ವಿರುದ್ಧ ಐ ಲವ್ ಮಹದೇವ್! ಅಭಿಯಾನವನ್ನೂ ಹುಟ್ಟು ಹಾಕಿ ಹಿಂದೂಗಳನ್ನೂ ಬೀದಿಗಿಳಿಸಲಾಗುತ್ತಿದೆ! ದುರಂತವೇನೆಂದರೆ, ಲಂಗು ಲಗಾಮು ಇಲ್ಲದ ಸೋಷಿಯಲ್ ಮೀಡಿಯಾಗಳೇ ಈ ರಾಜಕೀಯ ಅಜೆಂಡಾವನ್ನು ಈಗ ದೇಶದುದ್ದಗಲಕ್ಕೂ ಹೊತ್ತಿ ಉರಿಸಿವೆ. ಸಹಜವಾಗಿ 'ಜೈ ಶ್ರೀರಾಮ್' ಕೂಗಲು ಒತ್ತಾಯಿಸುವ ಜನರೊಂದು ಕಡೆ ಜಮಾಯಿಸಲು ಅಣಿಯಾಗುತ್ತಿದ್ದಾರೆ! ಜೊತೆ ಜೊತೆಗೆ ಎಲ್ಲೆಲ್ಲೂ 'ಐ ಲವ್ ಮಹಮ್ಮದ್' ಆಂದೋಲನವೂ ಆರಂಭವಾಗಿವೆ. ಪರಿಸ್ಥಿತಿ ಹೀಗಿಯೇ ಮುಂದುವರಿದರೆ ದೇಶದ ಗತಿ ಅಧೋಗತಿ!

ಈಗಾಗಲೇ ಭಾರತದಲ್ಲಿ ರಾಜಕೀಯ ಕಾರಣಕ್ಕೆ ಹಲವಾರು ವರ್ಷಗಳಿಂದಲೂ ಹಿಂದೂ ಮುಸ್ಲಿಂಮರ ನಡುವೆ ಕೋಮು ಗಲಭೆಗಳು ಭುಗಿಲೆದ್ದು, ಆ ಕೋಮು ಜ್ವಾಲೆಯ ದಳ್ಳುರಿಗೆ ಸಾವಿರಾರು ಜನರು ಪ್ರಾಣ, ನೆಮ್ಮದಿ ಕಳೆದುಕೊಂಡು ಬೀದಿ ಪಾಲಾಗಿದ್ದಾರೆ. ಇಡೀ ದೇಶವೇ ಸದಾ ಈ ಹಿಂದೂ-ಮುಸ್ಲಿಂ ಕೋಮು ಸಂಘರ್ಷದ ಆತಂಕದಲ್ಲಿರುವಂತಹ ಕೃತಕ ಭಯದ ವಾತಾವರಣವನ್ನೇ ಈ ರಾಜಕೀಯ ನಾಯಕರು ಸೃಷ್ಟಿ ಮಾಡಿಟ್ಟಿದ್ದಾರೆ. ಉದ್ಯೋಗವಿಲ್ಲದೇ, ಊಟಕ್ಕೆ ಗತಿಯಿಲ್ಲದೆ, ಮನೆಮಠವಿಲ್ಲದೆ ಸಾಯುತ್ತಿರುವ ಬಡಜನರು, ಮಧ್ಯಮ ವರ್ಗಗಳು, ಆವಾಗಾವಾಗ ಜಾಸ್ತಿಯಾಗುವ ಬಸ್ ಪ್ರಯಾಣ ದರ, ಪೆಟ್ರೋಲ್ ಬೆಲೆ, ಗ್ಯಾಸ್ ರೇಟ್, ಟ್ಯಾಕ್ಸ್ ಹೆಚ್ಚಳದ ವಿರುದ್ಧ ಧ್ವನಿ ಎತ್ತಿ, ಪ್ರತಿಭಟಿಸಿ ಎಲ್ಲಾ ಜಾತಿ ಧರ್ಮದ ಜನರೂ ಒಗ್ಗಟ್ಟಿನಿಂದ, ಎಲ್ಲಾ ಪಕ್ಷಗಳ ವಿರುದ್ಧವೂ ಬೀದಿಗಿಳಿಯಬೇಕಾಗಿದ್ದವರು ಈಗ ಭಾವನಾತ್ಮಕವಾಗಿ ಪ್ರಚೋದನೆಗೊಳಗಾಗಿ, ಪದೇ ಪದೇ ಧರ್ಮ, ದೇವರ ವಿಷಯಗಳಿಗೆ ಸಾಮೂಹಿಕವಾಗಿ ಬೀದಿಗಿಳಿದು ಪರಸ್ಪರ ಹೊಡೆದಾಡಿ, ನೆಮ್ಮದಿ ಕೆಡಿಸಿಕೊಂಡು ಬದುಕು ಬರ್ಬಾದು ಮಾಡಿಕೊಳ್ಳುತ್ತಿದ್ದಾರೆ.

ಈಗ ಭಾರತದಲ್ಲಿ ಹಿಂದೂ ಮುಸ್ಲಿಂರ ಪ್ರತಿಯೊಂದು ಹಬ್ಬ ಹರಿದಿನಗಳು, ಧಾರ್ಮಿಕ ಮೆರವಣಿಗೆಗಳು ಪೊಲೀಸರ ನೆರಳಿನ ಬೆಂಗಾವಲಿನಲ್ಲಿ ನಡೆಯುವಂತಹ ವಿಷಮ ಸಾಮಾಜಿಕ ವಾತಾವರಣ ಸೃಷ್ಟಿ ಮಾಡಲಾಗಿದೆ. ಜನರ ಭಾವನೆಗಳಿಗೇ ಬೆಂಕಿ ಹಚ್ಚಲಾಗುತ್ತಿದೆ. ಗಣೇಶನ ಗಲಾಟೆಗಳಲ್ಲದೆ ಈಗ ಸಣ್ಣಪುಟ್ಟ ಹಬ್ಬಗಳನ್ನೂ ಕೋಮು ಸಂಘರ್ಷಕ್ಕೆ ತಿರುಗಿಸುವ ಪ್ರಯತ್ನಗಳನ್ನು ರಾಜಕೀಯ ಪಕ್ಷಗಳು ಟೂಲ್ ಕಿಟ್ ರೀತಿಯಲ್ಲಿ ಪ್ರೊಫಗಾಂಡ ರಚಿಸಿಕೊಂಡು ಮಾಡುತ್ತಿವೆ! ದಸರಾದಂತಹ ನಾಡಹಬ್ಬಗಳನ್ನೂ, ಟಿಪ್ಪೂ ಬರ್ತ್‌ಡೇಯನ್ನು, ಈದ್ ಮಿಲಾದ್ ಮೆರವಣಿಗೆಯನ್ನೂ ಬಿಡದೇ ಎರಡೂ ಧರ್ಮದ ಜನರ ನಡುವೆ ಜಗಳ ಹಚ್ಚಲು ಈ ಓಟಿನ ಚೋರರು ಹವಣಿಸುತ್ತಿದ್ದಾರೆ.

ಜನರ ರಕ್ತ, ನೋವು, ಸಾವಿನ ಗೋರಿಯ ಮೇಲೆಯೇ ತಮ್ಮ ಆಡಳಿತ ಸೌಧಗಳನ್ನು ಎಬ್ಬಿಸಿ ದುಡ್ಡು ಮಾಡಲು ಟೊಂಕಕಟ್ಟಿ ನಿಂತಿದ್ದಾರೆ. ಆದರೀಗ ಎರಡು ಕೋಮಿನ ಜನರಿಗೂ ಇದು ಅರ್ಥವಾಗುತ್ತಿಲ್ಲ. ತಮ್ಮ ದೇವರು ಧರ್ಮಗಳನ್ನು ಬೀದಿಗೆಳೆದು ತಂದು ಮೆರವಣಿಗೆಯ ಹೆಸರಿನಲ್ಲಿ ಪರಸ್ಪರ ಹೊಡೆದಾಡಿಕೊಂಡು ಜೈಲು ಪಾಲಾಗುತ್ತಿದ್ದಾರೆ. ಭವಿಷ್ಯ ಹಾಳು ಮಾಡಿಕೊಂಡು, ಪ್ರಾಣ ಕಳೆದುಕೊಂಡು ಶಾಂತಿ ನೆಮ್ಮದಿಗೆ ಭಂಗ ತಂದುಕೊಳ್ಳುತ್ತಿದ್ದಾರೆ. ನಿಜವಾಗ್ಲೂ ನಮ್ಮ ದೇಶಕ್ಕೀಗ ಅತ್ಯಂತ ತ್ವರಿತವಾಗಿ ಈ ಕೋಮುವಾದದಿಂದ ಮುಕ್ತಿ ಬೇಕಿದೆ. ಧರ್ಮ ದೇವರುಗಳನ್ನು ಬೀದಿಯಲ್ಲಿ ತಂದು ಮನುಷ್ಯ ಮನುಷ್ಯರು ಹೊಡೆದಾಡಿಕೊಳ್ಳುವ ದುಸ್ಥಿತಿ ಬೇಡವೇ ಬೇಡ.

**ಲವ್ ಎಂಬುದು ಆಂಟಿ ನ್ಯಾಷನಲ್ ಪದವೇ?**

ಭಾರತದಲ್ಲೀಗ ಧಾರ್ಮಿಕ ಸ್ವಾತಂತ್ರದ ಮೇಲೆ ಹಲ್ಲೆಯಾಗುತ್ತಿದೆ ಎಂದು ಧ್ವನಿ ಎತ್ತಿರುವ ಮುಸ್ಲಿಂ ಮುಲ್ಲಾಗಳು, ರಾಜಕೀಯ ಮುಖಂಡರು ಪ್ಯಾರ್, ಲವ್, ಮೊಹಬ್ಬತ್ ಎಂಬುದು ಈಗ ದೇಶ ವಿರೋಧಿ ಶಬ್ದವೇ? ಲವ್ ಎಂಬುದು ಆಂಟಿ ನ್ಯಾಷನಲ್ ಪದವೇ? ನಮ್ಮ ಸಂವಿಧಾನ ಆರ್ಟಿಕಲ್ 25 ಫ್ರೀಡಂ ಆಫ್ ರಿಲೀಜಿನ್ ಹಕ್ಕು ಕೊಟ್ಟಿದೆ. 'ನಾವು ಪ್ರೀತಿಸುವ ವ್ಯಕ್ತಿಗೆ ಐ ಲವ್ ಯೂ ಹೇಳುವುದು ಯಾವ ರೀತಿಯ ದೇಶದ್ರೋಹದ ಕೆಲಸ?' ಎಂದು ಮುಸ್ಲಿಂ ಸಂಘಟನೆಗಳು ಕೇಳುತ್ತಿವೆ. ಅದಕ್ಕಾಗಿಯೇ ನಾವು 'ಐ ಲವ್ ಮಹಮ್ಮದ್' ಬ್ಯಾನರ್ ವಿರುದ್ಧ ಉತ್ತರ ಪ್ರದೇಶದಲ್ಲಿ ಎಫ್‌ಐಆರ್ ಹಾಕಿದ್ದನ್ನು ಖಂಡಿಸಿ ಎಲ್ಲೆಡೆ 'ಐ ಲವ್ ಮೊಹಮ್ಮದ್' ಬ್ಯಾನರ್ ಕಟ್ಟಿ ಪ್ರತಿಭಟನೆ ಆಂದೋಲನ ನಡೆಸುತ್ತಿದ್ದೇವೆ ಎನ್ನುತ್ತಿದ್ದಾರೆ.




ಲವ್ ಜಿಹಾದ್ ಹೆಸರಿನಲ್ಲಿ ಈಗಾಗಲೇ ಭಾರತದ ಮುಸ್ಲಿಂ ಯುವಕರನ್ನು ಟಾರ್ಗೆಟ್ ಆಗುತ್ತಿದ್ದಾರೆ! ಗೋ ಮಾತೆಯನ್ನು ಕೊಂದು ಮಾಂಸವನ್ನು ರಫ್ತು ಮಾಡಿ ಕೋಟ್ಯಾಂತರ ರೂಪಾಯಿ ಆದಾಯ ಗಳಿಸುತ್ತಿರುವ ಇದೇ ಬಿಜೆಪಿ ಸರ್ಕಾರದ ಉದ್ಯಮಿಗಳು, ಮುಸ್ಲಿಮರು, ದಲಿತರು ಬೀಫ್ ತಿನ್ನುವ ವಿಷಯದಲ್ಲೂ ತಕರಾರು ತೆಗೆದು ಅವರ ಸಾಂಪ್ರದಾಯಿಕ ಆಹಾರ ಪದ್ಧತಿಗೂ ಸಂಚಕಾರ ತರಲು ಸಂಚು ನಡೆಸಿದರೆ ಏನರ್ಥ? ಎಂಬುದೀಗ ಭಾರತೀಯ ಪ್ರಜ್ಞಾವಂತರಲ್ಲಿ ಚರ್ಚೆ ಆಗುತ್ತಿದೆ. ಇದೇನೇ ಇರಲಿ, ವಚನ ಚಳುವಳಿಯು ಎಲ್ಲಾ ಜಾತಿಗಳನ್ನು ಭಕ್ತಿಯ ಹೆಸರಿನಲ್ಲಿ ಒಂದೇ ಸೂರಿನಡಿ ತಂದಂತೆ ಸೂಫಿಗಳು, ದಾಸರು, ಸಂತರು, ಧರ್ಮವನ್ನೇ ದೇವರನ್ನೇ ನಿಸ್ವಾರ್ಥ ಭಕ್ತನ ಪಾದಡಿಗೆ ತಂದಂತೆ ತಂದರೇ ಆಧ್ಯಾತ್ಮಕ್ಕೂ ಒಂದು ಅರ್ಥವಿರುತ್ತದೆ. ಈ ಹಿಂದೆ ಬುದ್ಧರ ಬೋದನೆಗಳು, ನಾಥ ಪಂಥಗಳು, ಸೂಫಿ ಪಂಥಗಳು, ಹರಡಿದ ಮಾನವೀಯ ಬಾಂಧವ್ಯಗಳನ್ನು, ಸಾಮರಸ್ಯವನ್ನು ಈಗ ಅದೇ ಹಿಂದೂ-ಮುಸ್ಲಿಂ ಧರ್ಮದೊಳಗಿನಿಂದ ಬಂದವರೇ ಹೊಡೆದು ಛಿದ್ರ ಮಾಡಿ, ಬಾಂಧವ್ಯ ಭ್ರಾತೃತ್ವವನು ಅಳಿಸಿ ಹಾಕಿ, ಮನುಷ್ಯರ ನಡುವೆ ಕೋಮುವಾದದ ವಿಷ ಬೀಜ ಬಿತ್ತಿ ಧರ್ಮಗಳ ವಿರುದ್ಧ ಧರ್ಮಗಳ ಎತ್ತಿಕಟ್ಟಿ, ದೇವರುಗಳ ವಿರುದ್ಧ ದೇವರನ್ನೇ ಜಗಳಕ್ಕೆ ಹಚ್ಚಿ ದೇವನೊಬ್ಬ ನಾಮ ಹಲವು! ಎಂಬ ಅದ್ಬುತ ಬಸವಣ್ಣನ ವಚನಕ್ಕೆ ಕಳಂಕ ತರಲಾಗಿದೆ. 'ಎಲ್ಲ ಜೀವಿಗಳು ಒಂದೇ ಪರಮಾತ್ಮನ ಭಾಗವಾಗಿವೆ. ಎಲ್ಲ ಧರ್ಮಗಳು ಒಂದೇ ಸತ್ಯದತ್ತ ಸಾಗುತ್ತವೆ!' ಎಂದು ಸಾರುವ ಬಸವಣ್ಣನವರ ಈ ವಚನದ ಸಾರವನ್ನು ಅರಿತು ಅಳವಡಿಸಿಕೊಂಡು ಬಾಳಲಾರದ ಸ್ಥಿತಿಗೆ ಜನರನ್ನು ತರಲಾಗುತ್ತಿದೆ. ಸಾಂಸ್ಕೃತಿಕ ರಾಜಕಾರಣವೀಗ ಇಡೀ ಭಾರತವನ್ನೇ ಬೆಂಕಿಯ ಬಾಣಲೆಯಲ್ಲಿಟ್ಟಿದೆ. ಧರ್ಮ ದೇವರುಗಳನ್ನೇ ರಾಜಕೀಯ ಅಸ್ತ್ರವಾಗಿ ಬಳಸಿಕೊಂಡು ಅಧಿಕಾರ ಹಿಡಿಯುವ ಹೊಸ ತಂತ್ರಗಾರಿಕೆಗೆ ಜನರು ಬದುಕು ಬಲಿಯಾಗುತ್ತಿದೆ.

**ಮನುಷ್ಯತ್ವದ ಮುಂದೆ ಧರ್ಮ ಚಿಕ್ಕದು!**

'ಚಾರ್ಲಿ ಹೆಬ್ಡೊ' ಎಂಬ ಫ್ರೆಂಚ್ ವಿಡಂಬನಾತ್ಮಕ ಪತ್ರಿಕೆಯು ರಾಜಕೀಯ ಮತ್ತು ಧಾರ್ಮಿಕ ನಾಯಕರ ಮೇಲೆ ವಿಡಂಬನಾತ್ಮಕ ಬರಹದ ದಾಳಿಗಳಿಂದ ದೀರ್ಘಕಾಲ ವಿವಾದಕ್ಕೆ ಗುರಿಯಾಗಿತ್ತು. ಇದು 2012 ರಲ್ಲಿ ಇಸ್ಲಾಮಿಕ್ ಪ್ರವಾದಿ ಮುಹಮ್ಮದ್ ಅವರ ವ್ಯಂಗ್ಯಚಿತ್ರಗಳನ್ನು ಪ್ರಕಟಿಸಿತ್ತು. ರೊಚ್ಚಿಗೆದ್ದ ಅರೇಬಿಯನ್ ಪೆನಿನ್ಸುಲಾದಲ್ಲಿ ಉಗ್ರ ಸಂಘಟನೆ ಅಲ್-ಖೈದಾದ ಸದಸ್ಯರು ಜನವರಿ 7, 2015 ರಂದು, ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಬೆಳಿಗ್ಗೆ 11:30 ರ ಸುಮಾರಿಗೆ , ಫ್ರೆಂಚ್ ವಿಡಂಬನಾತ್ಮಕ ವಾರಪತ್ರಿಕೆ ಚಾರ್ಲಿ ಹೆಬ್ಡೊದ ಉದ್ಯೋಗಿಗಳ ಮೇಲೆ ಇಬ್ಬರು ಫ್ರೆಂಚ್ ಮೂಲದ ಅಲ್ಜೀರಿಯನ್ ಮುಸ್ಲಿಂ ಸಹೋದರರಾದ ಸೈದ್ ಕೌಚಿ ಮತ್ತು ಚೆರಿಫ್ ಕೌಚಿ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದರು . ರೈಫಲ್‌ಗಳು ಮತ್ತು ಇತರ ಶಸ್ತ್ರಾಸ್ತ್ರಗಳೊಂದಿಗೆ ಶಸ್ತ್ರಸಜ್ಜಿತರಾದ ಈ ಜೋಡಿ ಪತ್ರಿಕೆಯ ಸಂಪಾದಕರನ್ನೂ ಸೇರಿ 12 ಜನರನ್ನು ಕೊಂದಿತ್ತು! ಇತರ 11 ಜನರು ಗಾಯಗೊಂಡಿದ್ದರು.

ನಂತರ ಇದರಿಂದಾಗಿ ಪ್ರತೀಕಾರದ ಭಯದಿಂದಾಗಿ ಫ್ರಾನ್ಸ್ 20ಕ್ಕೂ ಹೆಚ್ಚು ದೇಶಗಳಲ್ಲಿ ರಾಯಭಾರ ಕಚೇರಿಗಳು ಮತ್ತು ಶಾಲೆಗಳನ್ನು ತಾತ್ಕಾಲಿಕವಾಗಿ ಮುಚ್ಚಬೇಕಾಗಿತ್ತು! ಇಂಥಹ ಕರಾಳ ಇತಿಹಾಸ ವಿರುವ ಪ್ರವಾದಿ ಮಹಮ್ಮದ್ ಹೆಸರಿಗೆ ಅಗೌರವ ಬಂದರೇ ದಾಳಿ ಮಾಡಿ ಕೊಂದು ಹಾಕುವ ಮನಸ್ಥಿತಿ ಇರುವ ಇಸ್ಲಾಂ ಭಯೋತ್ಪಾದಕ ಸಂಘಟನೆಗಳು ಇರುವಾಗ ಇಂತಹ ಸೂಕ್ಷ್ಮ ವಿಚಾರವನ್ನು ಯೋಗಿ ಸರ್ಕಾರವಾಗಲೀ, ಮೋದಿ ಸರ್ಕಾರವಾಗಲೀ ಗಂಭೀರವಾಗಿ ತೆಗೆದುಕೊಂಡು ಪರಿಸ್ಥಿತಿಯನ್ನು ನಿಭಾಯಿಸಬೇಕಿದೆ. ಮನುಷ್ಯನಿಗಾಗಿ ಮನುಷ್ಯರೇ ಸೃಷ್ಟಿಸಿಕೊಂಡ ಧರ್ಮಗಳೀಗ ಅವುಗಳ ಅಂಧಭಕ್ತರ, ಪರಿಪಾಲಕರ ಅಜ್ಞಾನದ, ಸ್ವಾರ್ಥದ ಕಾರಣಗಳಿಂದ ಸಹಿಷ್ಣುತೆ ಬಿಟ್ಟು ಕ್ರೂರತೆಗಿಳಿದಿವೆ. ಧರ್ಮದ ವಿಷಯಗಳಲ್ಲಿ ಬಿನ್ನಾಭಿಪ್ರಾಯ, ಪ್ರಶ್ನೆ ಎತ್ತುವುದೇ ಅಪರಾಧ ಎನ್ನುವಂತಹ ಭಯಾನಕ ವಾತಾವರಣ ನಿರ್ಮಾಣ ಮಾಡಲಾಗಿದೆ. ಧರ್ಮಗಳ ಶೋಷಣೆ, ಮೂಢನಂಬಿಕೆಗಳ ವಿರುದ್ಧ ಎಚ್ಚರಿಸಿ, ಪ್ರಶ್ನಿಸಿ, ವೈಜ್ಞಾನಿಕತೆ, ವೈಚಾರಿಕತೆ ಬೆಳೆಸುವವರನ್ನು ಹುಡುಕಾಡಿ ಕೊಲ್ಲಲಾಗುತ್ತದೆ. ಇದಕ್ಕೆ ತಾಜಾ ಉದಾಹರಣೆ ಮಹಾರಾಷ್ಟ್ರದ ವಿಚಾರವಾದಿ ನರೇಂದ್ರ ದಾಬೋಲ್ಕರ್, ನಾಸ್ತಿಕ ಗೋವಿಂದ ಪನ್ಸಾರೇ, ಸಂಶೋಧಕ ಬರಹಗಾರ-ಚಿಂತಕ ಕಲ್ಬುರ್ಗಿ, ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಗಳು!

ಹಿಂದೂ ಧರ್ಮವೇ ಆಗಿರಲೀ, ಇಸ್ಲಾಂ ಧರ್ಮವೇ ಆಗಿರಲೀ ಕಾಲಚಕ್ರದಲ್ಲಿ ಪರಿವರ್ತನೆ, ಪರಿಷ್ಕರಣೆ ಆಗಿ ಮಾನವೀಕರಣಗೊಂಡರಷ್ಟೆ ಅದಕ್ಕೆ ಬೆಲೆ. ಯಾವ ಧರ್ಮದ ಮೂಢಾಚರಣೆಗಳೂ ಪ್ರಶ್ನಾತೀತವಲ್ಲ. ಸಂವಿಧಾನದ ಕಾನೂನುಗಳ ಮುಂದೆ ಯಾವ ಧರ್ಮಗಳೂ ದೊಡ್ಡವಲ್ಲ. ಆದರೂ ಈ ಎರಡೂ ಧರ್ಮಗಳಲ್ಲೂ ಕೋಮುವಾದವು ಇತ್ತೀಚಿಗೆ ಯಥೇಚ್ಛವಾಗಿ ಸೇರಿಕೊಳ್ಳುತ್ತಿದೆ. ಮನುಷ್ಯರ ಸ್ವತಂತ್ರ ಚಿಂತನೆಗೆ ಅಡ್ಡಿಯಾಗಿದೆ. ಭಕ್ತಿಯ ಹೆಸರಲ್ಲಿ ಗುಲಾಮಿತನ ಬೆಳೆಸುತ್ತಾ ಪತ್ವಾ ಹೊರಡಿಸುವ ಧರ್ಮಗಳು, ಅವುಗಳ ಆಚರಣೆಗಳನ್ನು ಒಪ್ಪಿ ಪಾಲಿಸದಿದ್ದರೇ, ಐ ಲವ್ ಮಹಮ್ಮದ್, ಐ ಲವ್ ಮಹದೇವ್, ಜೈ ಶ್ರೀರಾಮ್ ಹೇಳದಿದ್ದರೇ, ಹೊಡೆದು ಕೊಲ್ಲುವುದು ಯಾವ ನ್ಯಾಯ? ಅದೆಂತಹ ಧರ್ಮ? ಮನುಷ್ಯನಿಗಿಂತಲೂ ಧರ್ಮ ದೊಡ್ಡದೆಂದುಕೊಂಡು, ಬಲವಂತವಾಗಿ ಅದರ ಗೊಡ್ಡು, ಅಮಾನವೀಯ ಅಚರಣೆ ಕಾನೂನುಗಳನ್ನು ಸಾಮಾನ್ಯ ಜನರ ಮೇಲೆ ಹೇರಲು ಹೋದರೇ ಅಂತಹ ಧರ್ಮಗಳು ನಿಧಾನಕ್ಕೆ ಸಾಯುತ್ತವೆ! ಅದರ ಅನುಯಾಯಿಗಳು ಆತ್ಮಹತ್ಯಾ ಬಾಂಬರ್‌ಗಳಷ್ಟೇ ಆಗುತ್ತಾರಲ್ಲವೇ.

**ಉಪಗ್ರಹಗಳ ಹಿಂದೆ ಬೀಳಬೇಕಾದವರ ಬೀದಿ ಜಗಳ!**

ಜಗತ್ತಿನಾದ್ಯಂತ ಹಲವಾರು ದೇಶಗಳು ಈ ಜಾತಿ ಧರ್ಮಗಳ ಜಗಳಗಳನ್ನು ಮನೆಯಲ್ಲೆ ಕಟ್ಟಿಟ್ಟು, ತಮ್ಮ ದೇಶದ ಅಭಿವೃದ್ಧಿಗೆ ನಾನಾ ರೂಪುರೇಷೆಗಳನ್ನು ಹಾಕಿಕೊಂಡು, ಕಾರ್ಯಪ್ರವೃತ್ತರಾಗಿ ಹಗಲುರಾತ್ರಿಯೆನ್ನದೇ ಆರ್ಥಿಕವಾಗಿ ಮೇಲೆ ಬರಲು ಶ್ರಮಿಸುತ್ತಿದ್ದಾರೆ. ದೇವರು ಧರ್ಮದ ಮೂಢನಂಬಿಕೆಗಳಲ್ಲೇ ಬಿದ್ದು ಸಾಯದೇ ವೈಜ್ಞಾನಿಕವಾಗಿ ಮುಂದುವರಿಯುತ್ತಿದ್ದಾರೆ. ಆದರಿಲ್ಲಿ ಭಾರತದಲ್ಲಿ ಬದುಕಿಗೆ ಅವಶ್ಯಕತೆ ಇಲ್ಲದಿದ್ದರೂ, ಮನುಷ್ಯನ ಪ್ರತಿದಿನ, ಘಳಿಗೆ, ಗಂಟೆಗಳನ್ನು ಗ್ರಹಗತಿಗೆ ಗಂಟುಹಾಕಿ ಮನೆಯಿಂದ ಒಂದು ಹೆಜ್ಜೆಯನ್ನು ಮುಂದಿಡದಂತೆ ರಾಹುಕಾಲ, ಯಮಕಂಟಕವೆಂಬ ಕಾಲ್ಪನಿಕ ಕಾಲಗಳಲ್ಲಿ ಕಟ್ಟಿಹಾಕಲಾಗಿದೆ. ಮೊದಲೆಲ್ಲಾ ಇಲ್ಲದ ಇತ್ತೀಚೆಗೆ ಜನರ ತಲೆಕೆಡಿಸಿರುವ ಧಾರ್ಮಿಕ ಆಚರಣೆಗಳು, ವಾರ ವಾರವೂ ಬರುವ ಸಂಕಷ್ಟ ಚತುರ್ಥಿಗಳು, ಶುಕ್ರವಾರದ ನಮಾಜಿನ ಪವಿತ್ರ ಜುಮ್ಮಾಗಳು, ಜೀಸಸ್‌ರನ್ನೇ ತೋರಿಸುತ್ತೇವೆ ಬನ್ನಿ ಎಂದು ಆಹ್ವಾನಿಸುವ ಭಾನುವಾರದ ಚರ್ಚ್ ಪ್ರಾರ್ಥನೆಗಳು ಈಗ ಮಹತ್ವ ಪಡೆದುಕೊಂಡಿವೆ. ಧಾರ್ಮಿಕತೆ ಆಚರಿಸುವ ಹಕ್ಕು ಸ್ವಾತಂತ್ರವನ್ನೇ ಎಲ್ಲಾ ಧರ್ಮಗಳು ದುರುಪಯೋಗಪಡಿಸಿಕೊಂಡು, ಜನರನ್ನು ಭಕ್ತಿಯಲ್ಲಿ ಮುಳುಗಿಸಿ, ಮೂಢನಂಬಿಕೆಗಳನ್ನು ಬಿತ್ತಿ, ಮರಳುಮಾಡಿ, ಸಂವಿಧಾನದ ಮತ್ತೊಂದು ಕಲಂ 51 ಎ ನಲ್ಲಿ ಹೇಳಿರುವ ವೈಜ್ಞಾನಿಕತೆ, ವೈಚಾರಿಕತೆ, ಮಾನವೀಯತೆ ಬೆಳೆಸುವ ಪ್ರಜೆಯ ಮೂಲಭೂತ ಕರ್ತವ್ಯಗಳನ್ನು ಬೇಕಂತಲೇ ಗಾಳಿಗೆ ತೂರಿ, ಆಧ್ಯಾತ್ಮಿಕ ವ್ಯಾಪಾರವನ್ನೇ ತಮ್ಮ ಬಂಡವಾಳ ಮಾಡಿಕೊಂಡು ಭಕ್ತಿ-ಭಯದಲ್ಲೆ ಜನರನ್ನಿಟ್ಟು ದೋಚುತ್ತಿರುವ ಹಲವು ಧರ್ಮಗಳು, ಧರ್ಮಗುರುಗಳು ಧರ್ಮವನ್ನೇ, ದೇವರನ್ನೆ ವ್ಯಾಪಾರದ ಸರಕನ್ನಾಗಿಸಿ ಜನರನ್ನು ಜೀವನ ಕರ್ತವ್ಯದಿಂದ ವಿಮುಖರನ್ನಾಗಿಸಿ ಹಾದಿ ತಪ್ಪಿಸುತ್ತಿರುವುದರಿಂದ, ಭಾರತದಂತ ಬಹು ಜನಸಂಖ್ಯಾ ದೇಶಗಳಲ್ಲೀಗ ದೇವರುಗಳ ಹೆಸರಲ್ಲೆ ಸರ್ವ ಧರ್ಮಗಳು ದುಡ್ಡು ಎತ್ತುವ ಹೊಸ ಬಿಸಿನೆಸ್ ನಡೆಸುತ್ತಿದ್ದಾರೆ. ಜನರು ಕಾಣದ ಸ್ವರ್ಗದ ಆಸೆಗೆ ಬಿದ್ದು ಹಲವು ಕಳ್ಳ ಸ್ವಾಮೀಜಿಗಳಿಂದ, ಮುಲ್ಲಾಗಳಿಂದ, ಪಾದ್ರಿಗಳಿಂದ ಧಾರ್ಮಿಕ ದರೋಡೆಗೆ ತುತ್ತಾಗುತ್ತಿದ್ದಾರೆ.

ಆರ್ಥಿಕವಾಗಿ ತಾವೇ ದಿವಾಳಿಯ ಅಂಚಿನಲ್ಲಿದ್ದರೂ ಭಾರತೀಯರು ಸಾಲ ಮಾಡಿಕೊಂಡು ಕೇಳದ ದೇವರಿಗೆ ಕೋಳಿ ಕುಯ್ಯುವ, ಸದಾ ಒಂದಿಲ್ಲೊಂದು ಭಕ್ತಿ ಪರವಶತೆಯ ಆಚರಣೆಯಲ್ಲೇ ಮುಳುಗೇಳುತ್ತಾ ವ್ರತ, ಹರಕೆ, ಉತ್ಸವ ಯಾತ್ರೆಗಳ ಮಾಡುತ್ತಾ, ಶ್ರೀರಾಮ, ಜೀಸಸ್, ಮಹಮ್ಮದ್‌ರನ್ನು ಬೀದಿಗಿಳಿಸಿ ಬಡಿದಾಡುವ ಕಾಯಕದಲ್ಲಿ ಭಾರೀ ಉತ್ಸಾಹ ತೋರಿಸುತ್ತಾರೆ! ಇವರ ಬ್ಯಾಂಕ್ ಖಾತೆಗಳಲ್ಲಿ ದುಡ್ಡು ತಂದು ದೇವರೇ ಇಡುತ್ತಾನೆ! ಸರ್ವ ಕಷ್ಟ ನಿವಾರಿಸುತ್ತಾನೆ! ಎಂದು ಮುಗ್ಧವಾಗಿ ನಂಬಿ ಕೊನೆಗೊಂದು ದಿನ ಜೇಬು ಖಾಲಿಯಾಗಿ ತಮ್ಮ ದೇವರ ಎಲ್ಲಾ ನೀತಿ ನಿಯಮಗಳನ್ನೇ ಗಾಳಿಗೆ ತೂರಿ ಕೊಲೆ, ಸುಲಿಗೆ ದರೋಡೆಗಿಳಿಯುತ್ತಾರೆ! ಇದೆಲ್ಲವನ್ನು ಮಾಡಲಾರದವರು ದೇವರ ಫೋಟೋದೆದುರು ನನ್ನ ಸಾವಿಗೆ ನಾನೇ ಕಾರಣವೆಂದು ಚೀಟಿ ಬರೆದು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ! ಈ ಎರಡನ್ನೂ ಮಾಡದ ಪ್ರಜ್ಞಾವಂತರು ಇದೇ ಸತ್ರಜ್ರೆಗಳನ್ನು ಧರ್ಮ, ದೇವರ ಅಮಲಿನಲ್ಲಿಟ್ಟು ತಮ್ಮ ಪಾಲನ್ನು ದೋಚುತ್ತಿರುವ ಭ್ರಷ್ಟ ರಾಜಕಾರಣಿಗಳ ಕೊರಳ ಪಟ್ಟಿಗೆ ಕೈಹಾಕಿ ಜೈಲು ಪಾಲಾಗುತ್ತಾರೆ. ಬೀದಿಗಿಳಿಯುತ್ತಾರೆ.





ಅಮಾಯಕ ಜನರು ಯಾಕೆ ಬೀದಿಗಿಳಿಯಬೇಕು ಎಂದು ತೋರಿಸಿಕೊಟ್ಟು ಮಾದರಿಯಾಗುತ್ತಾರೆ. ಆದರೀಗ ಧರ್ಮದ ಅಫೀಮು ತಿಂದು ಅಮಲಿನಲ್ಲಿರುವವರಿಗೆ ರಾಜಕೀಯ ಮುಖಂಡರು, ಧರ್ಮಗುರುಗಳು ಯಾಕೆ ತಮ್ಮನ್ನೂ ತಮ್ಮ ದೇವರು ಧರ್ಮಗಳನ್ನೂ ಇತ್ತೀಚಿಗೆ ಹೆಚ್ಚಾಗಿ ಬೀದಿಗಿಳಿಸುತ್ತಿದ್ದಾರೆಂಬುದನ್ನೂ ಅರಿಯದೇ ತಾವೂ ಬಲಿಯಾಗುವುದಲ್ಲೇ ಪರರನ್ನೂ, ದಿನನಿತ್ಯದ ಹೊಟ್ಟೆಪಾಡಿನ ಕಾಯಕದಲ್ಲಿ ಬೀದಿಗಿಳಿದು ದುಡಿಯುವವರನ್ನು ಬಲಿಪಶು ಮಾಡುತ್ತಿದ್ದಾರೆ.

ಮನುಷ್ಯನ ಜೀವನದಲ್ಲಿ ದೇವರು, ಧರ್ಮ ಆಧ್ಯಾತ್ಮಿಕಯ ಅವಶ್ಯಕತೆ ಎಲ್ಲಿಗೆ ಸೀಮಿತವಾಗಬೇಕಿತ್ತು? ಮೂಢನಂಬಿಕೆಯನ್ನು ಡಿಜಿಟಲ್ ಯುಗದಲ್ಲೂ ಎಐ ಬಳಸಿ

☞ 11

## ಪಂದ್ರಾ ಮಿನಿಟ್ಸ್...



ಮುಸಲ್ಮಾನರ 'ಐ ಲವ್ ಮೊಹಮ್ಮದ್' ಅಭಿಯಾನದ ಹಿನ್ನಲೆಯಲ್ಲಿ ಕೆಲ ಕಟ್ಟರ್ ಹಿಂದುತ್ವವಾದಿಗಳು ತಕರಾರು ತೆಗೆದು- 'ಐ ಲವ್ ಮಹಾದೇವ್' ಅಭಿಯಾನ ಶುರು ಮಾಡಿದ್ದೂ ಆಯಿತು. ಈ ನಡುವೆ ಆಂಧ್ರದಲ್ಲಿರೋ ಮುಸ್ಲಿಂ ಲೀಟರ್ ಓವೈಸಿ ಸೋದರ ಎನ್ನಲಾದ ವ್ಯಕ್ತಿಯೊಬ್ಬ ಒಂದಿಷ್ಟು ದುರಹಂಕಾರದ ಮಾತುಗಳನ್ನಾಡಿದ್ದ ವಿಡಿಯೋ ಬಿಟ್ಸ್ ಒಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಪೊಲೀಸರು ಬರೀ ಹದಿನೈದು ನಿಮಿಷ 'ಡ್ಯೂಟಿ' ಮಾಡದೆ ನಮ್ಮನ್ನು ಫ್ರೀಯಾಗಿ ಬಿಟ್ರೆ... ಎಂಬ ದುರಹಂಕಾರದ ಮಾತುಗಳವು! ಇದನ್ನೇ ಕೆಲ ಮತಾಂಧರು ''ಪಂದ್ರಾ ಮಿನಿಟ್'' ಎಂಬ ಹಾಡು ಮಾಡಿ ವೈರಲ್ ಮಾಡಿದ್ರು !!

ಇದೆಲ್ಲಾ ಏನ್ರೀ ? ಯಾರು ಮಾಡ್ತಿದ್ದಾರೆ ಇದನ್ನೆಲ್ಲಾ? ಸರ್ಕಾರ ಏನು ಮಾಡ್ತಿದೆ? ಪ್ರಧಾನ ಮಂತ್ರಿಗಳು ಇದನ್ನೆಲ್ಲಾ ಮಗನಿಸಿ ಆಯಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಸೂಚನೆ ನೀಡಿ ಕಾನೂನು ಕ್ರಮ ಜರುಗಿಸಬೇಕಿದೆ!! ☯

5
ಮಾಡಿ ಕೊಲೆಗೆ ಯತ್ನಿಸಿ ಪರಾರಿಯಾಗಿರುವ ಆರೋಪಿಗಳನ್ನು ಪತ್ತೆ ಮಾಡಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ದೂರು ನೀಡಿದರು. ಪಿಎಸ್ಐ ರಾಮುರವರು ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮಕ್ಕಾಗಿ ಹಿರಿಯ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದರು. ಸ್ಥಳಕ್ಕೆ ಎಸ್ಪಿ ಬಿ. ನಿಖಿಲ್, ಗೌನಪಲ್ಲಿ ಪೊಲೀಸ್ ಠಾಣೆಯ ಪಿಐ ಶಿವಕುಮಾರ್ ಮತ್ತು ಸಿಬ್ಬಂದಿಯು ಭೇಟಿ ನೀಡಿ ಪರಿಶೀಲಿಸಲಾಯಿತು. ರಮಣಮ್ಮನವರ ಕೊಲೆಗೆ


ಮಂಜುನಾಥನ ಮನೆ

ಯತ್ನಿಸಿ ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಎಸ್ಪಿ ಬಿ. ನಿಖಿಲ್‌ರವರ ಮಾರ್ಗದರ್ಶನದಲ್ಲಿ ಪಿಐ ಶಿವಕುಮಾರ್‌ರವರ ನೇತೃತ್ವದಲ್ಲಿ ಪಿಎಸ್ಐ ರಾಮು, ಸಿಬ್ಬಂದಿ ವರ್ಗದವರಾದ ಗಣೇಶ್, ಮಂಜುನಾಥ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಆರೋಪಿಗಳ ಪತ್ತೆಗಾಗಿ ತನಿಖೆ ಕೈಗೊಂಡಿರುತ್ತಾರೆ.

**ಪ್ರೇಯಸಿಯೊಂದಿಗೆ ತಗಲಾಕಿಕೊಂಡ ಪ್ರಿಯಕರ**

ರಮಣಮ್ಮನ ಕೊಲೆಗೆ ಸಂಚು ರೂಪಿಸಿದವರು ಯಾರು, ಕೊಲೆ ಪ್ರಯತ್ನ ಯಾವ ಕಾರಣಕ್ಕೆ ನಡೆದಿದೆ, ಅಟ್ಯಾಕ್ ಆದಾಗ ಮನೆಯಲ್ಲಿ ಸೊಸೆ ರೇಖಾ ಇದ್ದಳು. ಅತ್ತೆ ಮೇಲೆ ಮಾರಣಾಂತಿಕ ಹಲ್ಲೆಯಾಗಿದೆ. ಆದರೆ ಸೊಸೆ ರೇಖಾಳ ಮೇಲೆ ಯಾವುದೇ ಹಲ್ಲೆಯಾಗಿಲ್ಲ. ಆದರೆ ಗಂಡನಿಗೆ ಫೋನ್ ಮಾಡಿ ಹೇಳಿದಾಗ ಅಪರಿಚಿತ ವ್ಯಕ್ತಿಗಳು ನನ್ನ ಮೇಲೆ ಹಲ್ಲೆ ಮಾಡಿ ಕೊಠಡಿ ಒಳಕ್ಕೆ ತಳ್ಳಿದರು ಎಂದು ತಿಳಿಸಿದ್ದಳು. ಈ ಎಲ್ಲಾ ಮಾಹಿತಿಗಳನ್ನು ಕಲೆ ಹಾಕಿದ ಪೊಲೀಸರು ಸೊಸೆ ರೇಖಾಳ ಬಗ್ಗೆ ಅನುಮಾನಗೊಂಡು ಈ ಬಗ್ಗೆ ಗಂಡ ಮಂಜುನಾಥ ರೆಡ್ಡಿ ಬಳಿ ವಿಚಾರಿಸಲಾಗಿ ನಾನು ಮನೆಯಲ್ಲಿಲ್ಲದ್ದಾಗ ಅತ್ತೆ, ಸೊಸೆ ಚೆನ್ನಾಗಿಯೇ ಇರುತ್ತಿದ್ದರು. ನಾನು ಕೆಲಸಕ್ಕೆ ಹೋದ ಮೇಲೆ ಮನೆಯಲ್ಲಿ ಯಾವುದಾದರೊಂದು ವಿಚಾರಕ್ಕೆ ಜಗಳ ಮಾಡಿಕೊಳ್ಳುತ್ತಿದ್ದರೆಂದು ತಾಯಿ ರಮಣಮ್ಮ ತಿಳಿಸಿರುವುದಾಗಿ ಹೇಳಿದರು.

# ಪ್ರಿಯಕರನೊಂದಿಗೆ ಸೇರಿ ಚಟ್ಟ ಕಟ್ಟಲು ಪ್ಲಾನ್!

ಕೂಡಲೇ ರೇಖಾಳನ್ನು ವಶಕ್ಕೆ ಪಡೆದ ಪೊಲೀಸರು ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಆ ದಿನ ರಾತ್ರಿ ಅಪರಿಚಿತ ವ್ಯಕ್ತಿಗಳು ಮುಖಕ್ಕೆ ಮಾಸ್ಕ್ ಧರಿಸಿಕೊಂಡು ಮನೆ ಒಳಕ್ಕೆ ಬಂದರು. ಆಗ ನಾನು ಯಾರು ನೀವು ಎಂದು ಕೇಳಲಾಗಿ ನಿನ್ನ ಗಂಡ ಮಂಜುನಾಥ ರೆಡ್ಡಿ ಎಲ್ಲಿ ಎಂದು ಕೇಳಿದರು. ಅದಕ್ಕೆ ನಾನು ಕೆಲಸಕ್ಕೆ ಹೋಗಿದ್ದಾರೆಂದು ಹೇಳಿದೆ. ಆಗ ಅವರು ಏಕಾಏಕಿ ನನ್ನ ಮೇಲೆ ಹಲ್ಲೆ ಮಾಡಿ ಎಳೆದುಕೊಂಡು ಹೋಗಿ ಕೊಠಡಿ ಒಳಕ್ಕೆ ತಳ್ಳಿದರು. ಗಾಬರಿಯಲ್ಲಿ ಏನು ನಡೆಯುತ್ತಿದೆ ಎಂದು ತಿಳಿಯದೆ ಭಯದಿಂದ ಕೊಠಡಿಯಲ್ಲಿಯೇ ಇದ್ದು ಸ್ವಲ್ಪ ಹೊತ್ತಿನ ನಂತರ ಹೊರಗೆ ಬಂದು ನೋಡಲಾಗಿ ಅತ್ತೆ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ತಕ್ಷಣ ಗಂಡ ಮಂಜುನಾಥ ರೆಡ್ಡಿರವರಿಗೆ ಫೋನ್ ಮಾಡಿ ಹೇಳಿದೆನು. ನಂತರ ಅತ್ತೆಯನ್ನು ಆಸ್ಪತ್ರೆಗೆ ಸಾಗಿಸಲಾಯಿತು ಎಂದು ಹೇಳಿದಳು.

ರೇಖಾ ಹೇಳುತ್ತಿರುವುದೆಲ್ಲ ಕಟ್ಟುಕಥೆ ಎಂದು ತಿಳಿಯುತ್ತಿದ್ದಂತೆ ಪೊಲೀಸ್ ಭಾಷೆಯಲ್ಲಿ ಮಾತನಾಡುತ್ತಿದ್ದಂತೆ ನಡೆದ ಘಟನೆ ಏನೆಂದರೆ ಗಂಡ ಮಂಜುನಾಥ ರೆಡ್ಡಿಯವರು ಹಾಲು ಗಾಡಿಗೆ ಹೋದವರು ಎರಡು-ಮೂರು ದಿನಗಳ ನಂತರ ಮನೆಗೆ ಬರುತ್ತಿದ್ದರು. ರಾತ್ರಿ ಹೊತ್ತು ಒಂಟಿಯಾಗಿ ಮಲಗುತ್ತಿದ್ದೆನು. ಆ ಸಂದರ್ಭದಲ್ಲಿ


ವಿವಾಹ ಸಂದರ್ಭದಲ್ಲಿ ರೇಖಾ ಮತ್ತು ಮಂಜುನಾಥ್ ರೆಡ್ಡಿ

ಗ್ರಾಮದ ಶಶಿಕುಮಾರ್ ಪರಿಚಯವಾಗಿ ದೇಹಸುಖದಿಂದ ವಂಚಿತಳಾಗಿದ್ದ ನನಗೆ ಸುಖ ನೀಡುವ ಮೂಲಕ ನನ್ನ ಕಾಮದಾಹವನ್ನು ನೀಗಿಸಿದನು. ಗುಟ್ಟಾಗಿ ನಡೆಯುತ್ತಿದ್ದ ನಮ್ಮಿಬ್ಬರ ನಡುವಿನ ಅಕ್ರಮ ಸಂಬಂಧದ ವಿಚಾರ ಗಂಡನಿಗೆ ಗೊತ್ತಾಗಿ ಸಂಬಂಧ ಬಿಡುವಂತೆ ಬುದ್ಧಿ ಹೇಳಿದರು. ಗಂಡನ ಮಾತಿಗೆ ಕಟ್ಟುಬಿದ್ದು ಸ್ವಲ್ಪ ದಿನಗಳ ಕಾಲ ಪ್ರಿಯಕರ ಶಶಿಕುಮಾರ್‌ನಿಂದ ದೂರವಾಗಿದ್ದ ನಾನು ಅವನನ್ನು ಬಿಟ್ಟಿರಲಾರದೆ ನಮ್ಮ ನಡುವಿನ ಅಕ್ರಮ ಸಂಬಂಧವನ್ನು ಮುಂದುವರೆಸಿದೆವು. ನಮ್ಮಿಬ್ಬರ ನಡುವಿನ ಸಂಪರ್ಕಕ್ಕೆ ಒಂದು ಮೊಬೈಲ್ ಫೋನ್‌ನ್ನು ಕೊಡಿಸಿದನು. ಗಂಡ ಮತ್ತು ಅತ್ತೆಗೆ ಗೊತ್ತಾಗದಂತೆ ನಾವಿಬ್ಬರು ಫೋನ್‌ನಲ್ಲಿ ಮಾತನಾಡಿಕೊಳ್ಳುತ್ತಿದ್ದೆವು. ಒಂದು ದಿನ ಪ್ರಿಯಕರ ಶಶಿಕುಮಾರ್ ಜೊತೆ ಮಾತನಾಡುತ್ತಿದ್ದಾಗ ಗಂಡನ ಕೈಗೆ ಸಿಕ್ಕಿಹಾಕಿಕೊಂಡಿದ್ದು, ಅವರು ನನಗೆ ಶಶಿಕುಮಾರ್ ಜೊತೆ ಮಾತನಾಡದಂತೆ ಎಚ್ಚರಿಕೆ ಕೊಟ್ಟರು. ಅದರಂತೆ ನಾನು ಗಂಡ ಮನೆಯಲ್ಲಿ ಇರುವಾಗ ಫೋನ್ ತಂಟೆಗೆ ಹೋಗುತ್ತಿರಲಿಲ್ಲ. ಗಂಡ ಕೆಲಸಕ್ಕೆ ಹೋಗುವುದನ್ನೇ ಕಾಯುತ್ತಾ ಇದ್ದು, ಅವರು ಹೊರಗಡೆ ಹೋದ ನಂತರ ಪ್ರಿಯಕರ ಶಶಿಕುಮಾರ್‌ಗೆ ಫೋನ್ ಮಾಡಿ ಎಲ್ಲಿ ಸೇರಬೇಕೆಂಬುವುದನ್ನು ಮಾತನಾಡಿಕೊಳ್ಳುತ್ತಿದ್ದೆವು. ಗಂಡ ಮತ್ತು ಅತ್ತೆಗೆ ಗೊತ್ತಾಗದಂತೆ ಮೊಬೈಲ್ ಬಳಕೆ ಮಾಡಿಕೊಂಡಿದ್ದು, ಒಂದು ದಿನ ಅತ್ತೆ ರಮಣಮ್ಮನ ಕೈಗೆ ಸಿಕ್ಕಿ ಹಾಕಿಕೊಂಡೆನು. ಆಗ ಅತ್ತೆ ನನ್ನ ಮಗ ಬುದ್ಧಿ ಹೇಳಿದರೂ ಕೇಳಲಿಲ್ಲ. ಈಗ ಮತ್ತೆ ಮೊಬೈಲ್ ಫೋನ್ ಬಳಕೆ ಮಾಡುತ್ತಿದ್ದೀಯಾ. ಇದರಿಂದ ನಿಮ್ಮಿಬ್ಬರ ನಡುವೆ ಬಿರುಕು ಬಂದಿದ್ದು ಸಾಕು, ಈ ವಿಚಾರ ಗೊತ್ತಾದರೆ ನಿನ್ನನ್ನು ಮನೆಯಿಂದ ಓಡಿಸಿ ಬಿಡುತ್ತಾನೆ. ಈಗಲಾದರೂ ಬುದ್ಧಿ ಕಲಿತುಕೊಂಡು ನನ್ನ ಮಗನ ಜೊತೆ ನೆಟ್ಟಗೆ ಸಂಸಾರ ಮಾಡಿಕೊಂಡಿರು ಎಂದು ಬುದ್ಧಿ ಹೇಳಿ ಎಚ್ಚರಿಕೆ ಕೊಟ್ಟಳು. ಮೊಬೈಲ್ ಬಳಕೆ ಮಾಡುತ್ತಿರುವ ವಿಚಾರವನ್ನು ಅತ್ತೆ ನನ್ನ ಗಂಡನಿಗೆ ಹೇಳಿದರೆ ಅವರು ನನಗೊಂದು ಗತಿಕಾಣಿಸದೆ ಬಿಡುವುದಿಲ್ಲ. ಅದಕ್ಕೆ ವಿಷಯ ಗಂಡನಿಗೆ ತಿಳಿಯುವ ಮೊದಲೇ ಅತ್ತೆಗೊಂದು ಗತಿಕಾಣಿಸಬೇಕೆಂದು ಫೋನ್ ಮಾಡಿ ಶಶಿಕುಮಾರ್‌ನನ್ನು ಮನೆಗೆ ಬರುವಂತೆ ತಿಳಿಸಿದೆನು. ಅದರಂತೆ ಆಗಸ್ಟ್ 31ರಂದು ರಾತ್ರಿ 9 ಗಂಟೆ


ಮಂಜುನಾಥ್ ರೆಡ್ಡಿ ಹಾಗೂ ರೇಖಾ

ಸಮಯದಲ್ಲಿ ಅತ್ತೆ ಊಟ ಮಾಡಿ ಟಿವಿ ನೋಡುತ್ತಾ ಕುಳಿತಿದ್ದರು. ಅದೇ ಸಮಯಕ್ಕೆ ಶಶಿಕುಮಾರ್ ಬಂದನು. ಅವನನ್ನು ಕೊಠಡಿ ಒಳಕ್ಕೆ ಕರೆದುಕೊಂಡು ಹೋಗಿ ಎಲ್ಲ ವಿಷಯವನ್ನು ತಿಳಿಸಿ ಇಬ್ಬರು ಅತ್ತೆ ಕೊಲೆಗೆ ಸ್ಕೆಚ್ ಹಾಕಿದ್ದೆವು. ಅತ್ತೆ ಜೊತೆ ಯಾವುದೋ ವಿಷಯವನ್ನು ಪ್ರಸ್ತಾಪಿಸುತ್ತಾ ನಮ್ಮ ಸಂಸಾರ ಹಾಳಾಗಿ ಹೋಗುತ್ತಿರುವುದು ನಿನ್ನಿಂದ ಅತ್ತೆ ಎಂದು ಬೈದು ಕೊಠಡಿ ಒಳಕ್ಕೆ ಹೋಗುತ್ತಿರುವಾಗ ಅತ್ತೆ ನನ್ನ ಜೊತೆ ಜಗಳ ತೆಗೆದು ಹಲ್ಲೆ ಮಾಡಲು ಮುಂದಾದರು. ಆಗ ನಾನು ಶಶಿಕುಮಾರ್‌ನನ್ನು ಕರೆದು ಇಬ್ಬರು ಸೇರಿಕೊಂಡು ಅತ್ತೆ ಮನೆಲೆ ಹಲ್ಲೆಮಾಡಿದರಲ್ಲದೆ ಶಶಿಕುಮಾರ್ ಮಚ್ಚಿನಿಂದ ಅತ್ತೆಯ ತಲೆಗೆ ಕೊಚ್ಚಿದನು. ಅತ್ತೆ ನೆಲದ ಮೇಲೆ ಬಿದ್ದು ಒದ್ದಾಡುತ್ತಾ ಸುಮ್ಮನಾದಳು. ಅತ್ತೆ ಸತ್ತು ಹೋಗಿರಬೇಕೆಂದು ಕೂಡಲೇ ಅಲ್ಲಿಂದ ಶಶಿಕುಮಾರ್‌ನನ್ನು ಮನೆಯಿಂದ ಹೊರಕ್ಕೆ ಕಳುಹಿಸಿಬಿಟ್ಟೆ. ನಂತರ ಗಂಡನಿಗೆ ಫೋನ್ ಮಾಡಿ ಯಾರೋ ಮುಸುಕುಧಾರಿಗಳು ಮನೆಗೆ ನುಗ್ಗಿ ನನ್ನ ಹಾಗೂ ಅತ್ತೆ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿ ಹೋಗಿರುವುದಾಗಿ ಹೇಳಿದೇನೆಂದು ತಿಳಿಸಿದಳು.

ರೇಖಾ ನೀಡಿದ ಹೇಳಿಕೆಯಂತೆ ಕೊಲೆಗೆ ಸಂಚು ರೂಪಿಸಿದ್ದ ಶಶಿಕುಮಾರ್‌ನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ ನಂತರ ಆರೋಪಿಗಳನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳವನ್ನು ಪರಿಶೀಲಿಸಿದ ಮೇಲೆ ರೇಖಾ ಮತ್ತು ಶಶಿಕುಮಾರ್ ಇಬ್ಬರನ್ನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ☯

6
ಅಣ್ಣಂದಿರಾದ ಮೊದಲೈಸ್ವಾಮಿ, ಸೂಸೈಯಪ್ಪನ್ ಹಾಗೂ ಆತನ ಮಡದಿ ಸಗಾಯಿಮೇರಿರವರು ಮಗ ಜಾನ್ಸನ್ ಜೀವನಿಗೆ ಬುದ್ಧಿವಾದ ಹೇಳಿ ಅವಳಿಗೂ ನಿನ್ನ ಹಾಗೆ ತಂದೆಯ ಸ್ಥಾನದಲ್ಲಿ ಇದ್ದಾರೆ. ಇದೆಲ್ಲ ತಪ್ಪು ಎಂದು ಬುದ್ಧಿ ಹೇಳುತ್ತಿದ್ದೆವು.

ಆದರೆ 21-9-2025 ರಂದು ರಾತ್ರಿ ಸುಮಾರು 8:00 ಗಂಟೆ ಸಮಯದಲ್ಲಿ ಜಾನ್ಸನ್‌ಜೀವ ತಂದೆ ಪಾಕಿಯನಾದನ್ ಮೇಲೆ ಜೋರಾಗಿ ಕೂಗಾಡಿಕೊಂಡು ಗಲಾಟೆ ಮಾಡುತ್ತಿದ್ದ, ಆಗ ಲಾಟೆ ಶಬ್ದ ಕೇಳಿ ನಾನು, ನನ್ನ ಅತ್ತಿಗೆ ಸ್ಲೋರಿಯ ಮೇರಿ, ಫ್ರಾಂಕ್ಲಿನ್‌ಕುಮಾರ್‌ರವರು ಸ್ಥಳಕ್ಕೆ ಬಂದು ಏಕೆ ಗಲಾಟೆ ಮಾಡುತ್ತಿದ್ದೀಯಾ ಎಂದು ಕೇಳಿದಾಗ ಜಾನ್ಸನ್‌ಜೀವ ಇವನು ನನ್ನ ಹೆಂಡತಿಯನ್ನು ಇಟ್ಟುಕೊಂಡಿದ್ದಾನೆ. ನಾನು ಈ ದಿನ ಇವನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ತಿಳಿಸಿ ಇದು ನಮ್ಮ ಸ್ವಂತ ವಿಚಾರ. ನೀವು ಹೊರಟು ಹೋಗಿ ಎಂದು ತಿಳಿಸಿದನು. ಅದಕ್ಕೆ ನಾನು ಏಯ್, ನೀನು ಸುಮ್ಮನೆ ಹೋಗು... ಬೆಳಿಗ್ಗೆ ಮಾತನಾಡೋಣ ಎಂದು ಹೇಳಿದೆ. ಅಷ್ಟಕ್ಕೆ ಮನೆಯ ಮುಂಭಾಗದ ಮಾವಿನ ಮರದ ಕೆಳಗೆ ಇದ್ದ ಹಗ್ಗದ ಮಂಚದ ಮೇಲೆ ಕುಳಿತಿದ್ದ ನನ್ನ ತಮ್ಮ ಪಾಕಿಯನಾದನ್‌ನನ್ನು ನೋಡಿ ಈ ದಿನ ನಿನಗೆ ಸರಿಯಾಗಿ ನಿನ್ನಕಥೆ ಮುಗಿಸುತ್ತೇನೆ ಎಂದು ಮಂಚದ ಸ್ವಲ್ಪ ದೂರದಲ್ಲಿರುವ ಒಂದು ಕಲ್ಲಿನ ಕಟ್ಟೆಯಿಂದ ಕಲ್ಲನ್ನು ತೆಗೆದುಕೊಂಡು ಪಾಕಿಯನಾದನ್ ತಲೆಗೆ ಹೊಡೆದು ಮಂಚದ ಮೇಲೆ ಕುಳಿತಿದ್ದ ಆತನನ್ನು ಕೆಳಗಡೆ ಕೆಡವಿಕೊಂಡು ಆತನ ಬೆನ್ನಿನ ಮೇಲೆ ಕುಳಿತುಕೊಂಡು ಕಲ್ಲಿನಿಂದ ತಲೆಯ ಬಲಭಾಗಕ್ಕೆ ಹಾಗೂ ಕಿವಿಯ ಬಳಿ ಜೋರಾಗಿ ಗುದ್ದಿ ಕಲ್ಲನ್ನು ಅಲ್ಲೇ ಬಿಸಾಡಿ ಸ್ಥಳದಿಂದ ಓಡಿ ಹೋಗಿದ್ದಾನೆ. ಕೂಡಲೇ ನಾನು ಮತ್ತು ಸಂಬಂಧಿಕರು ಹತ್ತಿರ ಬಂದು ಪಾಕಿಯನಾದನ್ ನನ್ನ ನೋಡಲಾಗಿ ತಲೆಯಿಂದ ರಕ್ತಸ್ರಾವವಾಗಿ ಸ್ಥಳದಲ್ಲಿ ಉಸಿರು ಚೆಲ್ಲಿದ್ದನು.

ಆದ್ದರಿಂದ ನನ್ನ ತಮ್ಮ ಪಾಕಿಯಾನಾದನ್‌ತಲೆಗೆ ಕಲ್ಲಿನಿಂದ ಗುದ್ದಿ ಕೊಲೆ ಮಾಡಿರುವ ಜಾನ್ಸನ್‌ಜೀವ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಎಂದು ನೀಡಿರುವ ದೂರಿನ ಮೇರೆಗೆ 'ರಾಮಾಪುರ ಠಾಣೆ ಪೊಲೀಸರು ಠಾಣಾ ಮೊಕದ್ದಮೆ ಸಂಖ್ಯೆ 144/2025 ಯುಎಸ್ 103 (1) ಬಿಎನ್‌ಎಸ್ ರಿತ್ಯಾ ಪ್ರಕರಣ ದಾಖಲಿಸಿಕೊಂಡು ಚಿಚಾರಣೆ ನಡೆಸಿ ಬಳಿಕ ತಂದೆಯ ಹಂತಕ ಆರೋಪಿ ಮಗನನ್ನು ಜೈಲಿಗೆ ಬಿಟ್ಟು ಬಂದಿರುವ ಆರಕ್ಷಕ ನಿರೀಕ್ಷಕ ಚಿಕ್ಕರಾಚಶೆಟ್ಟಿರವರು ಮುಂದಿನ ತನಿಖೆ ಕೈಗೊಂಡಿದ್ದಾರೆ. ☯

# ಕೆಂಪಯ್ಯ ಬೇಗ ಗುಣ ಮುಖರಾಗಿ ಬರಲಿ....

2
ಮೈಸೂರಿನ ಊಟಿ ರಸ್ತೆ ಬಳಿ ಜೆಎಸ್‌ಎಸ್ ಸಂಸ್ಥೆಗೆ ಸೇರಿದ ಜಾಗದಲ್ಲಿ 1998ರಲ್ಲಿ ಶಕ್ತಿಧಾಮ ಆರಂಭಿಸಲಾಗಿತ್ತು. ಕಟ್ಟಡ ನಿರ್ಮಾಣ, ಅಭಿವೃದ್ಧಿ ಕಾರ್ಯಕ್ಕಾಗಿ ಹಣ ಬೇಕಿತ್ತು. ಪಾರ್ವತಮ್ಮ ಮೈಸೂರಿನ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಡಾ. ರಾಜ್‌ಕುಮಾರ್ ಅವರ ರಸಮಂಜರಿ ಆಯೋಜಿಸಿ, ಸುಮಾರು 45 ಲಕ್ಷ ರೂ. ಸಂಗ್ರಹಿಸಿ ಶಕ್ತಿಧಾಮಕ್ಕೆ ನೀಡಿದ್ದರು.



ಇನ್ಫೋಸಿಸ್‌ನ ಸುಧಾಮೂರ್ತಿ ಅವರಿಂದ 5 ಲಕ್ಷ ರೂ, ಮೈಸೂರಿನ ಗಣೇಶ್ ಬೀಡಿ ಸಂಸ್ಥೆಯಿಂದ 15 ಲಕ್ಷ ರೂ. ಪಡೆಯುವಲ್ಲಿ ಕೆಂಪಯ್ಯ, ಪಾರ್ವತಮ್ಮ ಅವರ ಪಾತ್ರ ಹಿರಿದಾಗಿತ್ತು. ಹಾಗಾಗಿ ಟ್ರಸ್ಟಿಗಳೆಲ್ಲ ಚರ್ಚಿಸಿ ಪಾರ್ವತಮ್ಮ ಅವರನ್ನೆ ಸಂಸ್ಥೆಯ ಗೌರವಾಧ್ಯಕ್ಷರನ್ನಾಗಿಸಿದ್ದರು. ಮುಂದೆ ಶಕ್ತಿಧಾಮ ಹೆಮ್ಮರವಾಗಿ ಬೆಳೆಯಿತು. ಪುನೀತ್ ರಾಜ್‌ಕುಮಾರ್ ಮುನ್ನಡೆಸಿದರು. ಈಗ ಶಿವಣ್ಣ ನೋಡಿಕೊಳ್ಳುತ್ತಿದ್ದಾರೆ. ಈವರೆಗೆ ಸುಮಾರು 50,000 ಮಹಿಳೆಯರು ಶಕ್ತಿಧಾಮದಲ್ಲಿ ಪುನರ್ವಸತಿ ಪಡೆದು ನಂತರ ಕುಟುಂಬಕ್ಕೆ ಮರಳಿದ್ದಾರೆ. ಈಗಲೂ ಅಲ್ಲಿ ನೂರಾರು ಮಹಿಳೆಯರು, ಮಕ್ಕಳು ಆಶ್ರಯ ಪಡೆದಿದ್ದಾರೆ. ಅಲ್ಲೀಗ ಆಶ್ರಯ ಮಾತ್ರವಲ್ಲದೆ ಮಕ್ಕಳಿಗೆ ಶಿಕ್ಷಣ ಕೊಡಿಸಲಾಗುತ್ತಿದೆ.

ಈ ಮಹತ್ ಕಾರ್ಯದ ಹಿಂದೆ ಕೆಂಪಯ್ಯನವರ ಶ್ರಮ-ಕೊಡುಗೆ ಸಾಕ್ಷಿದೆ. ಅವರು ಆದಷ್ಟು ಬೇಗ ಗುಣ ಮುಖರಾಗಲಿ ಎಂದು ಹಾರೈಸೋಣ. ☯

# ಬಿಗ್ ಬಾಸ್ 'ಸೀಸನ್- 12' ಕ್ಲೋಸ್?!




**ಈ ಭಾರಿ ಬಿಗ್ ಬಾಸ್ ಮನೆಯ ಒಳಗಡೆ ಜೆಂಟ್ಸ್‌ಗಿಂತ ಸುಂದರಿಯರೆ ಹೆಚ್ಚು ಮೆರೆದು ಮಿಂಚುತ್ತಿದ್ದರು! ಅವರ ಜಗಳವನ್ನು ನೋಡಿ ಮಜಾ ತೆಗೆದುಕೊಳ್ಳುತ್ತಿದ್ದವರೆಷ್ಟೋ. ಈ ಬಾರಿ ಒಂಟಿ – ಜಂಟಿ ಕಾನ್ಸೆಪ್ಟ್ ಬೇರೆ ಸದ್ದು ಮಾಡುತ್ತಿತ್ತು! ಗಿಲ್ಲಿ ನಟ, ಚಂದ್ರಪ್ರಭಾ ಮುಂತಾದ ಡಬಲ್ ಮೀನಿಂಗ್ ಕಾಮಿಡಿ ಕಿಂಗ್‌ಗಳು ತಮ್ಮ ಬಾಣ ಬಿರುಸು ಬಿಡಲು ಹುರಿಗೊಳ್ಳುತ್ತಿದ್ದರು! ಇಂಥ ಸಮಯದಲ್ಲೇ ಬಿಗ್ ಬಾಸ್...!!**

'ಬಿಗ್ ಬಾಸ್' ಕನ್ನಡ ಸೀಸನ್ 12 ರಿಯಾಲಿಟಿ ಶೋಗೆ ಆರಂಭದಲ್ಲೇ ಸಂಕಷ್ಟ ಎದುರಾಗಿದೆ! ಸಂಕಷ್ಟ ಎದುರಾಗೋದೇನು... ಸೋಮವಾರ ಮಧ್ಯಾಹ್ನ ನೋಟೀಸ್ ಕೊಟ್ಟ ಬೆನ್ನಲ್ಲೇ ಬಿಗ್ ಬಾಸ್ ಹೌಸ್‌ಗೆ ಬೀಗವೂ ಬಿದ್ದು ಹೋಗಿದೆ!! ನಿಮಗೆಲ್ಲ ತಿಳಿದಂತೆ, ಬಿಗ್ ಬಾಸ್ ಕನ್ನಡ ಸೀಸನ್-12 ಅದ್ದೂರಿಯಾಗಿ ಆರಂಭಗೊಂಡಿತ್ತು. ಆದರೆ,ಶೋ ಶುರುವಾದ ಒಂದೇ ವಾರದಲ್ಲಿ, ಬಿಡದಿಯಲ್ಲಿರೋ ಬಿಗ್ ಬಾಸ್ ಹೌಸ್‌ಗೆ ಬೀಗ ಬಿದ್ದಿದೆ! ಬೆಂಗಳೂರು ದಕ್ಷಿಣದ ಜಿಲ್ಲಾಧಿ




ಕಾರಿಯವರ ಆದೇಶದ ಮೇರೆಗೆ ರಾಮನಗರದ ತಹಸೀಲ್ದಾರ್ ತೇಜಸ್ವಿನಿ ಖುದ್ದಾಗಿ ಅಲ್ಲಿಗೆ ತೆರಳಿ ಬೀಗ ಜಡಿಸಿದ್ದಾರೆ!

ಈ ಬಾರಿ ಬಿಗ್ ಬಾಸ್ ಮನೆಯ ಒಳಗಡೆ ಜೆಂಟ್ಸ್‌ಗಿಂತ ಸುಂದರಿಯರೆ ಹೆಚ್ಚು ಮೆರೆದು ಮಿಂಚುತ್ತಿದ್ದರು! ಅವರ ಜಗಳವನ್ನು ನೋಡಿ ಮಜಾ ತೆಗೆದುಕೊಳ್ಳುತ್ತಿದ್ದವರೆಷ್ಟೋ. ಈ ಬಾರಿ ಒಂಟಿ – ಜಂಟಿ ಕಾನ್ಸೆಪ್ಟ್ ಬೇರೆ ಸದ್ದು ಮಾಡುತ್ತಿತ್ತು! ಗಿಲ್ಲಿ ನಟ, ಚಂದ್ರಪ್ರಭಾ ಮುಂತಾದ ಡಬಲ್ ಮೀನಿಂಗ್ ಕಾಮಿಡಿ ಕಿಂಗ್‌ಗಳು ತಮ್ಮ ಬಾಣ ಬಿರುಸು ಬಿಡಲು ಹುರಿಗೊಳ್ಳುತ್ತಿದ್ದರು!

ಇಂಥ ಸಮಯದಲ್ಲೇ ಬಿಗ್ ಬಾಸ್ ಶೋ ಆಯೋಜಕರಿಗೆ ಸೋಮವಾರ ಮಧ್ಯಾಹ್ನವೇ ರಾಜ್ಯ ಸರ್ಕಾರದಿಂದ ನೋಟಿಸ್ ಜಾರಿಯಾಗಿತ್ತು! ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಬಿಗ್ ಬಾಸ್ ಶೂಟಿಂಗ್ ನಡೆಯುತ್ತಿರುವ ವೆಲ್ಸ್ ಸ್ಟುಡಿಯೋಸ್ ಆ್ಯಂಡ್ ಎಂಟರ್‌ಟೈನ್‌ಮೆಂಟ್ ಸಂಸ್ಥೆಯನ್ನು ಮುಚ್ಚಲು ನೋಟಿಸ್ ನೀಡಿತ್ತು!




ಶೋ ಶುರುವಾದ ಮೊದಲ ದಿನವೇ ಎಲಿಮಿನೇಟ್ ಆಗಿದ್ದ ಮಂಗಳೂರಿನ ರಕ್ಷಿತಾಳನ್ನು ಮತ್ತೆ ಕರೆಸಿಕೊಂಡ ಸುದೀಪ್, ಯುಟ್ಯೂಬರ್ ಅಮಿತ್ ಹಾಗೂ ಬಾಕ್ಸರ್ ಕರಿ ಬಸಪ್ಪನನ್ನು ಹೊರಗಡೆ ಕಳುಹಿಸಿ 'ಶೋ' ಎರಡನೇ ವಾರಕ್ಕೆ ಕಾಲಿಟ್ಟ ಘಳಿಗೆಯಲ್ಲೇ ಬಿಗ್ ಬಿಗ್ ಬಾಸ್ ಹೌಸ್ ಕ್ಲೋಸ್ ಆಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಇಷ್ಟಕ್ಕೂ ಸರ್ಕಾರ ನೋಟೀಸ್ ನೀಡಿದ ಬೆನ್ನಲ್ಲೇ ಈ ಪರಿ ಮುಗಿಬಿದ್ದು ಬೀಗ ಜಡಿಯಲು ಕಾರಣವಾದರೂ ಏನಿರಬಹುದು? ಅಂಥ ನೋಡಿದ್ರೆ, ಬಿಗ್ ಬಾಸ್ ಮನೆಯಲ್ಲಿರೋ ಮಂದಿ, ಸ್ನಾನ ಮಾಡಿ, ಕಕ್ಕ ಮಾಡಿ ತಿಕ ತೊಳೆದ ಕೊಳೆ ನೀರನ್ನು ಸಂಸ್ಕರಿಸದೆ ನೇರವಾಗಿ ಮೋರಿಗೆ ಹರಿಬಿಡುತ್ತಿರುವುದೇ ಕೊಳಚೆ ನಿರ್ಮೂಲನ ಮಂಡಳಿ ಆಕ್ರೋಶಕ್ಕೆ ಕಾರಣವಾಗಿದೆ!

✍ ಹೆಚ್.ಕೆ. ಮಹದೇವ್

ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲೂಕಿನ ಬಿಡದಿ ಕೈಗಾರಿಕಾ ಪ್ರದೇಶದಲ್ಲಿರುವ ಬಿಗ್ ಬಾಸ್ ಸೆಟ್, ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವುದು ಸರಿಯಷ್ಟೇ. ಜಲ ಮಾಲಿನ್ಯ ನಿಯಂತ್ರಣ ಮತ್ತು ಸಂರಕ್ಷಣೆ ಕಾಯ್ದೆ 1974ರ ಉಲ್ಲಂಘನೆ ಮಾಡಿರುವ ಕಾರಣ ವೆಲ್ಸ್ ಸ್ಟುಡಿಯೋಸ್‌ನವರು ತಮ್ಮ ಕಾರ್ಯಾಚರಣೆಯನ್ನು ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಬೇಕು, ಕೂಡಲೇ ಈ ಯುನಿಟ್ ಅನ್ನು ಜಪ್ತಿ ಮಾಡಬೇಕು. ತಕ್ಷಣವೇ ಬೆಸ್ಕಾಂ ಅಧಿಕಾರಿಗಳು ಈ ಸ್ಟುಡಿಯೋಗೆ ನೀಡಿರುವ ವಿದ್ಯುತ್ ಸಂಪರ್ಕವನ್ನು ನಿಲ್ಲಿಸಬೇಕು ಎಂದು ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿಗಳು ಆದೇಶಿಸಿದ್ದು, ಅಂತೆಯೇ ಕ್ರಮ ಕೈಗೊಳ್ಳಲಾಗಿದೆ.

ಹಸಿರು ವಲಯದಲ್ಲಿರುವ ಈ ಸ್ಟುಡಿಯೋದಲ್ಲಿ ಜಲ ಸಂರಕ್ಷಣೆ ಕಾಯ್ದೆಗಳ ಪಾಲನೆ ಕುರಿತು ರಾಮನಗರದ ಅಧಿಕಾರಿಗಳು ಕಳೆದ ವರ್ಷ ಮಾ. 19, 2024 ಹಾಗೂ ಜೂ. 11ರಂದು ಬಿಗ್ ಬಾಸ್ ಸೆಟ್ ಇರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಎಚ್ಚರಿಕೆ ನೀಡಿದ್ದರಂತೆ. ಆದರೂ ಅವರು ಕಾನೂನು ಪಾಲನೆ ಮಾಡಿರಲಿಲ್ಲವಂತೆ. ಈಗ ಶೋ ಆರಂಭವಾಗುವ ತನಕ ಸುಮ್ಮನಿದ್ದು, ಒಂದು ವಾರ ಕಳೆದ ಹೊತ್ತಲ್ಲಿ ದಿಢೀರ್ ಕಾರ್ಯಾಚರಣೆ ನಡೆಸಿದ್ದಾರೆ!

ಈ ವೇಳೆ ಬಿಗ್ ಬಾಸ್ ಮಂದಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಯಾವುದೇ ರೀತಿಯ ಒಪ್ಪಿಗೆಯನ್ನು ಪಡೆಯದಿರುವುದು ಬೆಳಕಿಗೆ ಬಂದಿದೆ. ಅಲ್ಲದೆ ಪರವಾನಗಿ ಇಲ್ಲದೆಯೇ ಅಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ನಡೆಸಲಾಗುತ್ತಿದ್ದುದು ಪತ್ತೆ ಆಗಿದೆ. ಸದರಿ ಪಾರ್ಕ್‌ನಲ್ಲಿ ಉತ್ಪತ್ತಿ ಆಗುವ ಕೊಳಚೆ ನೀರನ್ನು ಸಂಸ್ಕರಿಸದೆ ನೇರವಾಗಿ ಹೊರಗೆ ಬಿಡಲಾಗುತ್ತಿದ್ದು, ಇದರಿಂದ ಮಾಲಿನ್ಯ ಉಂಟಾಗುತ್ತಿದೆ ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಹೇಳಿದೆ.

ಇತ್ತ ಬಿಗ್ ಬಾಸ್ ಮನೆಯಲ್ಲಿ 17 ಮಂದಿ ಸ್ಪರ್ಧಿಗಳಿದ್ದು, ಈಗಾಗಲೇ ಒಂದು ವಾರವನ್ನು ಕಳೆದು, ಎರಡನೇ ವಾರಕ್ಕೆ ಕಾಲಿಟ್ಟಿದ್ದರು. ಎಲ್ಲರಲ್ಲೂ 50 ಲಕ್ಷ ಗೆಲ್ಲುವ ಆಸೆ! ವಾರದಿಂದ ನಾವೇ ಗಮನಿಸಿದ ಮಟ್ಟಿಗೆ, ಬಿಗ್ ಬಾಸ್ ಮನೆಯ ಸ್ಪರ್ಧಿ ಗಳ ಆಟದಲ್ಲಿ ದಿನದಿಂದ ದಿನಕ್ಕೆ ರೋಚಕತೆ ಎದ್ದು ಕಾಣಿಸುತ್ತಿತ್ತು! ಈಗ ನೋಡಿದ್ರೆ ಬಿಗ್ ಬಾಸ್ ಹೌಸ್‌ಗೇ ಬೀಗ ಬಿದ್ದಿದೆ! ಸ್ಪರ್ಧೆಗಳೆಲ್ಲ ಔಟ್!! ಸದ್ಯ, ಅವರೆಲ್ಲರನ್ನು ಬಿಗ್ ಬಾಸ್ ಟೀಮ್ ಹತ್ತಿರದ ಈಗಲ್ಟನ್ ರೆಸಾರ್ಟ್‌ನಲ್ಲಿ ಇರಿಸಿದ್ದಾರೆ. ಕಿಚ್ಚ ಸುದೀಪ್ ಮತ್ತು ವೆಲ್ಸ್ ಸ್ಟುಡಿಯೋಸ್ ಆ್ಯಂಡ್ ಎಂಟರ್‌ಟೈನ್‌ಮೆಂಟ್‌ನವರು ಈ ಸಮಸ್ಯೆಯನ್ನು ಯಾವ ರೀತಿ ನಿಭಾಯಿಸಲಿದ್ದಾರೋ..... ಕಾದುನೋಡಬೇಕಿದೆ! ಅಂದಹಾಗೆ, ಈ ಸಂದರ್ಭದಲ್ಲಿ ಒಂದು ವಿಚಾರ ಭಾರಿ ಚರ್ಚೆಯಾಗುತ್ತಿದೆ.... ಬಿಗ್ ಬಾಸ್ ಮನೆಗೆ ಬೀಗ ಬೀಳಲು ಡಿಸಿಎಂ ಡಿಕೆ ಸಾಹೇಬ್ರು ಕಾರಣ ಎನ್ನಲಾಗುತ್ತಿದೆ! ಈ ಅನುಮಾನ ಬರಲಿಕ್ಕು ಒಂದು ಕಾರಣವಿದೆ ಕಣ್ರೀ.

ಕೆಲ ತಿಂಗಳ ಹಿಂದೆ ಕನಕಪುರದಲ್ಲಿ ನಡೆದ ಸಭೆಯೊಂದರಲ್ಲಿ, ಸಿನಿಮಾ ನಟರು ಸಭೆಗೆ ಬರಲಿಲ್ಲ ಎಂಬ ಕಾರಣಕ್ಕೆ ಡಿಕೆ ಸಾಹೇಬರು,ಇವರಿಗೆ ಸರ್ಕಾರಿ ಸವಲತ್ತು ಬೇಕು, ಆದ್ರೆ ಸರ್ಕಾರಿ ಸಮಾರಂಭ ಬೇಡ, ಇರಲಿ... ಟೈಮ್ ಬರುತ್ತೆ... ಬಾಲ ಕಟ್ ಮಾಡ್ತೇವೆ... ಎಂಬ ಡೈಲಾಗ್ ಗುಡುಗಿದ್ದರು! ಅವಾಗ ಇದೇ ಕಿಚ್ಚ ಸುದೀಪ್, ಬಾಲ ಕಟ್ ಮಾಡೋಕೆ ನಾವೇನು ಕುರಿ ಕೋಳಿಗಳ... ಈ ರೌಡಿಸಂ ಎಲ್ಲಾ ಬೇಡ ಸ್ವಾಮಿ... ನೀವೇನಾದ್ರು ಸಿಎಂ ಆಗ್ಬಿಟ್ರೆ ರಾಜ್ಯದ ಗತಿ ಅಷ್ಟೇ.... ಎಂಬ ಡೈಲಾಗ್ ಹೊಡೆದು, ಡಿಕೆ ಅವರಿಗೆ ಕೌಂಟರ್ ಕೊಟ್ಟಿದ್ರು! ಸೋ, ಈಗ ಬಾಲ ಕಟ್ ಆಗಿದೆ!! ಹೀಗಂತ ಜನ ಮಾತಾಡಿಕೊಳ್ಳುತ್ತಿದ್ದಾರೆ ಸ್ವಾಮಿ, ನಾವಲ್ಲ..!!! ☯

# ಐ ಲವ್ ಮೊಹಮ್ಮದ್! v/s ಐ ಲವ್ ಮಹಾದೇವ್!

9 ☞ ಬೆಳೆಸುತ್ತಿರುವ ಕಾರಣವೇನು? ಅಣು ರೇಣು ತೃಣ ಕಾಷ್ಠ ಎಂದರೆ ಒಂದು ಅತಿ ಸೂಕ್ಷ್ಮವಾದ ಕಣದಿಂದ (ಅಣು) ಒಂದು ಸಣ್ಣ ಕಸದ ಕಣದವರೆಗೆ (ರೇಣು), ಒಂದು ಸಣ್ಣ ಹುಲ್ಲುಗರಿ (ತೃಣ) ಹಾಗೂ ದೊಡ್ಡ ಮರ (ಕಾಷ್ಠ) ಸೇರಿದಂತೆ ಸೃಷ್ಟಿಯಲ್ಲಿರುವ ಪ್ರತಿಯೊಂದು ವಸ್ತುಗಳಲ್ಲೂ ಭಗವಂತನಿದ್ದಾನೆ ಎಂದು ನಂಬಿರುವ ಈ ಮನುಷ್ಯರು ಪದೇ ಪದೇ ತನ್ನನು ಬೀದಿಗೆ ತಂದು ನಿಲ್ಲಿಸಿ ಬಡಿದಾಡಿಕೊಳ್ಳುವ ಈ ಮೂರ್ಖ ಮಾನವರಿಗೆ ಬುದ್ಧಿ ಹೇಳದೇ ಆ ದೇವರು ಅದೆಲ್ಲಿಗೋದನೋ? ಅವನೇಕೆ ನಿದ್ದೆ ಹೋದನೋ? ಅಥವಾ ಅವನಿಗೂ ಈ ಜಡಾತ್ಮದ ಭ್ರಷ್ಟ ರಾಜಕಾರಣಿಗಳು ಲಂಚ ಕೊಟ್ಟು ಮೌನ ವ್ರತ ಅಚರಿಸುವಂತೆ ವಶೀಕರಣ ಮಾಡಿಕೊಂಡರೇ? ನಿಜವಾಗ್ಲೂ ದೇವರು ಬದುಕಿದ್ದರೇ ಹಿಂಗೆಲ್ಲಾ ಆಗಲು ಬಿಡುತ್ತಿದ್ದನೇ? ಎಂದು ಗೊಣಗಿಕೊಳ್ಳಬೇಕಾದ ಅನಿವಾರ್ಯತೆ...

ಆ ಸರ್ವಶಕ್ತ ಭಗವಂತ... ಅವನನ್ನು ಅದಾಗಲೇ ಧರ್ಮಗುರುಗಳು, ರಾಜಕಾರಣಿಗಳು ಕೊಂದು ಎಷ್ಟೋ ವರ್ಷಗಳಾಗಿವೆ ಎನ್ನುತ್ತಿದ್ದಾರೆ ಕೆಲ ನಾಸ್ತಿಕರು. ಹೇ.. ಹಂಗೇನೂ ಇಲ್ಲ ಇದೆಲ್ಲಾ ನಮ್ಮ ಭಗವಂತನದೇ ನಾಟಕ. ಅತನೇ ಸೂತ್ರಧಾರ..! ಇದೆಲ್ಲಾ ಅವನ (ದೈವ) ಲೀಲೆಯೇ... ಇದರಲ್ಲಿ ಧರ್ಮಗುರು, ರಾಜಕೀಯ ಪುಢಾರಿಗಳ ಕೈವಾಡವೇನಿಲ್ಲ, ಅಂತಿದ್ದಾರೆ, ದಕ್ಷಿಣೆ ಪಡೆವ ಜ್ಯೋತಿಷಿಗಳು! ಆದುನಿಕ, ವೈಜ್ಞಾನಿಕ ಯುಗದಲ್ಲಿ ಉಪಗ್ರಹಗಳ ಹಿಂದೆ ಬೀಳಬೇಕಾದವರು ಗ್ರಹಗತಿಗೆ ಬೆದರುತ್ತಾ ಮನೆಯಲ್ಲೆ ಕುಳಿತರೇ ಮನೆಯ ಆರ್ಥಿಕತೆ ಸುದಾರಿಸುತ್ತದೆಯೇ?

ಜಿಡಿಪಿ. ಜಿಎಸ್ಟಿ ಯುಗದಲ್ಲಿ ವ್ಯಕ್ತಿಯ ತಲಾದಾಯದ ಲೆಕ್ಕಾಚಾರದಲ್ಲೆ ಮನುಷ್ಯನ ತಲೆಗೆ ಬೆಲೆ ಕೊಡಲಾಗುತ್ತಿದೆ. ಜೇಬು ಖಾಲಿಯಾದರೇ ಇಲ್ಲಿ ಯಾರೂ ಯಾರಿಗೂ ಬೆಲೆ ಕೊಡುವುದಿಲ್ಲ, ಪ್ರಜೆಗಳು, ಗ್ಯಾರಂಟಿಗಳ ಬಿಕ್ಷೆ ಬೇಡುತ್ತಲೇ, ರೇಷನ್ ಅಂಗಡಿಗಳ ಮುಂದೆ ಶತಶತಮಾನಗಳಿಗೂ ನಿಂತಿಬೇಕಾಗುತ್ತದೆ ಆಗ ಶತಕೋಟಿ ದೇವರುಗಳೇನು ಬಂದು ಯಾವ ಬಡವನ ಬ್ಯಾಂಕಿನ ಖಾತೆಗೆ ದುಡ್ಡು ತುಂಬಿಸುವುದಿಲ್ಲ ಎಂಬ ಸತ್ಯ ಅರಿವಾಗುತ್ತದೆ. ರಾಜಕಾರಣಿಗಳೇ ಜನರನ್ನು ಟ್ಯಾಕ್ಸ್ ಹೆಸರಿನಲ್ಲಿ, ಟೆಂಡರ್ ಕಮಿಷನ್ ದರೋಡೆಯಲ್ಲಿ ದೋಚಿ ಬೀದಿಗೆ ನಿಲ್ಲಿಸಿದ್ದಾರೆಂಬ ಅರಿವಾಗುತ್ತದೆ. ಮನದಲ್ಲಿ ಮನೆಯಲ್ಲಿ ಇರಬೇಕಾದ ನಿಮ್ಮ ದೇವರುಗಳನ್ನು ಬೀದಿಗೆ ತಂದು ಬಡಿದಾಡುವಂತೆ ಪ್ರಚೋದನೆ ನೀಡುತ್ತಿರುವವರು ಯಾರು? ರಾಜಕಾರಣಿಗಳಾ? ಧರ್ಮಗುರುಗಳಾ? ಪ್ರಜೆಗಳು ಇನ್ನಾದರೂ ಸತ್ಯವನ್ನು ಅರಿತುಕೊಳ್ಳಬೇಕಿದೆ. ಎಚ್ಚೆತ್ತುಕೊಳ್ಳಬೇಕಾಗಿದೆ! ☯

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಬಸಮ್ಮನವರು

ಪೊಲೀಸ್ ನ್ಯೂಸ್ ವಾರಪತ್ರಿಕೆಯ ಪ್ರಸರಣಾಧಿಕಾರಿ ಹಾಗೂ ನಮ್ಮ ಸಂಸ್ಥೆಯ ಹಿರಿಯ ವ್ಯವಸ್ಥಾಪಕರಾದ ಜಿ. ವೀರನಗೌಡರವರ ಮಾತೃಶ್ರೀಯವರಾದ ಶ್ರೀಮತಿ ಬಸವ್ಮನವರು (83) ದಿ. 27.10.2025ರಂದು ಶಿವೈಕ್ಯರಾಗಿದ್ದು, ಅವರ ದಿವ್ಯಾತ್ಮಕ್ಕೆ ಚಿರಶಾಂತಿ ಸಿಗಲೆಂದು ನಾವು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

# ಧರ್ಮಸ್ಥಳ ವಿರುದ್ಧ ಷಡ್ಯಂತ್ರ; ಎಚ್ಚರಿಸಿದ್ದ ಗುಪ್ತಚರ ಇಲಾಖೆ

**ದಕ್ಷಿಣ ಕನ್ನಡ**
✍ ಮೋಹನ್ ಬೋಳಂಗಡಿ

ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಷಡ್ಯಂತ್ರವೊಂದು ರೂಪುಗೊಂಡಿದೆ ಎಂಬುದಂತೂ ಸ್ಪಷ್ಟ. ಈ ಷಡ್ಯಂತ್ರವನ್ನು ಭೇದಿಸಲೆಂದೇ ರಾಜ್ಯ ಸರಕಾರ ಎಡಿಜಿಪಿ ಮಟ್ಟದಲ್ಲಿ ವಿಶೇಷ ತನಿಖಾ ದಳ ರಚಿಸಿದೆ. ಈಗಾಗಲೇ ಈ ದಳ ಕಳೆದ ಎರಡು ತಿಂಗಳುಗಳಿಂದ ತನಿಖೆ ನಡೆಸುತ್ತಿದೆ. ಈ ಷಡ್ಯಂತ್ರದ ಭಾಗವಾಗಿದ್ದ ಬುರುಡೆ ಮ್ಯಾನ್ ಚಿನ್ನಯ್ಯ ಎಂಬಾತನನ್ನು ಬಂಧಿಸಲಾಗಿದೆ. ಈಗಾಗಲೇ ಹಲವು ಮಂದಿಯನ್ನು ಎಸ್ಐಟಿ ತನಿಖೆಗೆ ಒಳಪಡಿಸಿದೆ. ಅಚ್ಚರಿ ಎನ್ನುವಂತೆ ಈ ಷಡ್ಯಂತ್ರ 2023ರಲ್ಲಿ ಅಂದರೆ ಎರಡು ವರ್ಷಗಳ ಹಿಂದೆಯೇ ರೂಪುಗೊಂಡಿತ್ತು. ಬೆಂಗಳೂರಿನ ಮೂರು ಕಡೆಗಳಲ್ಲಿ ಸಭೆಗಳನ್ನು ನಡೆಸಿ ವಿಚಾರ ವಿನಿಮಯ ನಡೆಸಲಾಗಿತ್ತು. ಈ ಬಗ್ಗೆ ರಾಜ್ಯ ಗುಪ್ತಚರ ಇಲಾಖೆಯ ಮಂಗಳೂರು ವಿಭಾಗದ ಪ್ರಭಾರ ಮುಖ್ಯ ಗುಪ್ತಚರ ಅಧಿಕಾರಿಯವರು 2023 ಜುಲೈ 25ರಂದು ರಾಜ್ಯ ಗುಪ್ತವಾರ್ತಾ ವಿಭಾಗದ ನಿರ್ದೇಶಕರಿಗೆ ವರದಿಯೊಂದನ್ನು ಸಲ್ಲಿಸಿದ್ದರು. ಆದರೆ ಈ ವರದಿಯ ಬಗ್ಗೆ ಸರಕಾರ ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಇದೀಗ ಈ ವಿವಾದ ಬೆಟ್ಟದೆತ್ತರಕ್ಕೆ ಬೆಳೆದು ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಅಪಪ್ರಚಾರಗಳನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸುವಂತಾಗಿದೆ ಎನ್ನುವುದಂತೂ ಸ್ಪಷ್ಟ.

### ವರದಿಯಲ್ಲಿ ಏನಿದೆ?

ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳ ಗ್ರಾಮದ ಪಾಂಗಾಳ ನಿವಾಸಿ ಚಂದಪ್ಪಗೌಡ ಎಂಬವರ ಮಗಳು ಕು. ಸೌಜನ್ಯಾ ಎಂಬಾಕೆಯು ಉಜಿರೆ ಎಸ್‌ಡಿಎಂ ಪಿಯು ಕಾಲೇಜಿನಲ್ಲಿ ಕಲಾ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದವಳು ದಿನಾಂಕ 09-10-20 ರಂದು ಸಾಯಂಕಾಲ 4ರಿಂದ 5 ಗಂಟೆಯ ಸುಮಾರಿಗೆ ಕಾಲೇಜು ಬಿಟ್ಟು ಮನೆಗೆ ತೆರಳಿದ್ದವಳು ನೇತ್ರಾವತಿ ಸ್ನಾನಘಟ್ಟದ ಬಳಿಯಿಂದ ನಿಗೂಢವಾಗಿ ಕಾಣೆಯಾಗಿದ್ದು, ಅದೇ ದಿನ ರಾತ್ರಿ 10.30ರ ವೇಳೆಗೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಕ್ರೈಂ ನಂ. 250/2012ರಂತೆ ಹುಡುಗಿ ಕಾಣೆ ಪ್ರಕರಣ ದಾಖಲಾಗಿತ್ತು.

ದಿನಾಂಕ 10-10-2012ರಂದು ಸ್ನಾನ ಘಟ್ಟ ಪರಿಸರದ ಕಾಡಿನಲ್ಲಿ ಸ್ಥಳೀಯರು ಹಾಗೂ ಪೊಲೀಸರು ಹುಡುಕಾಟ ನಡೆಸಿದ್ದು ಸುಮಾರು ಮಧ್ಯಾಹ್ನ 12-30ರ ಸಮಯಕ್ಕೆ ಕಾಣೆಯಾಗಿದ್ದ ಹುಡುಗಿ ಕು.ಸೌಜನ್ಯಾಳ ಮೃತ ದೇಹ ಧರ್ಮಸ್ಥಳ ಗ್ರಾಮದ ಮಣ್ಣಸಂಕ ಎಂಬಲ್ಲಿ ಕಾಡಿನೊಳಗೆ ಒಂದು ಮುರಿದು ಬಿದ್ದಿದ್ದ ಹಳೆಯ ಮರದ ಬದಿಯಲ್ಲಿ ದೊರಕಿದ್ದು ಆಕೆಯನ್ನು ವಿಕೃತವಾಗಿ ಅತ್ಯಾಚಾರಗೈದು ಹತ್ಯೆ ಮಾಡಲಾಗಿತ್ತು. ಈ ಬಗ್ಗೆ ಈ ಹಿಂದೆ ದಾಖಲಾಗಿದ್ದ ಹುಡುಗಿ ಕಾಣೆ ಪ್ರಕರಣವನ್ನು ಪರಿವರ್ತಿಸಿ ಕೊಲೆ ಮತ್ತು ಅತ್ಯಾಚಾರದ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿತ್ತು.



ಈ ಘಟನೆಗೆ ಸಂಬಂಧಿಸಿ ಆರೋಪಿಯ ತಲಾಶೆಯಲ್ಲಿರುವ ಸಂದರ್ಭದಲ್ಲಿ ದಿನಾಂಕ 11-10-2012ರಂದು ಸಾಯಂಕಾಲ 6-30ರ ಸಮಯಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ಬಾಹುಬಲಿ ಬೆಟ್ಟದ ಗುಡ್ಡದ ಬಳಿ ಒಬ್ಬ ವ್ಯಕ್ತಿ ಸಂಶಯಾಸ್ಪದವಾಗಿ ಇದ್ದಿದ್ದು ಸಾರ್ವಜನಿಕರನ್ನು ನೋಡಿ ಓಡಿ ಹೋಗುವ ಸಂದರ್ಭದಲ್ಲಿ ಸಾರ್ವಜನಿಕರು ಹಾಗೂ ಅಲ್ಲಿನ ಸ್ಥಳೀಯರು ಆತನನ್ನು ಬೆನ್ನಟ್ಟಿ ಹಿಡಿದಿದ್ದು ಸೌಜನ್ಯಳನ್ನು ಇದೇ ವ್ಯಕ್ತಿ ಕೊಲೆ ಮಾಡಿರುವ ಬಗ್ಗೆ ಸಂಶಯ ವ್ಯಕ್ತಪಡಿಸಿ ಬಳಿಕ ಪೊಲೀಸರಿಗೆ ಒಪ್ಪಿಸಿದ್ದರು. ವಶಕ್ಕೆ ಪಡೆದಿದ್ದ ವ್ಯಕ್ತಿ ಸಂತೋಷ್ ರಾವ್ ಪ್ರಾಯ 38 ವರ್ಷ ತಂದೆ ಸುಧಾಕರ್ ರಾವ್ ವಾಸ ನವದುರ್ಗಾ ಪ್ರಸಾದ್ ಹೌಸಿಂಗ್ ಬೋರ್ಡು ಕಾಲನಿ, ಕುಕ್ಕುಂದೂರು ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ ಎಂಬವನಾಗಿದ್ದನು.

ಪ್ರಕರಣದ ತನಿಖೆಯ ವೇಳೆ ವಶಕ್ಕೆ ಪಡೆದಿದ್ದ ಸಂತೋಷ್‌ರಾವ್ ಘಟನೆಯ ಬಗ್ಗೆ ಪೂರಕವಾದ ಮಾಹಿತಿಗಳನ್ನು ನೀಡಿದ್ದರ ಪರಿಣಾಮವಾಗಿ ತನಿಖಾಧಿಕಾರಿಗಳಾದ ಬೆಳ್ತಂಗಡಿ ಸರ್ಕಲ್ ಇನ್ಸ್‌ಪೆಕ್ಟರ್ ಭಾಸ್ಕರ್ ರೈ ಮತ್ತು ಪಿಎಸ್‌ಐ ಯೋಗೀಶ್ ಕುಮಾರ್ ಬಿ.ಸಿ. ರವರು ಪ್ರಾಥಮಿಕ ತನಿಖೆ ನಡೆಸಿ ಆರೋಪಿ ಸಂತೋಷ್‌ರಾವ್‌ನನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ಸಂತೋಷ್ ರಾವ್ ಮಂಗಳೂರು ಸಬ್‌ಜೈಲ್‌ನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದನು ಹಾಗೂ ತನಿಖೆ ಪ್ರಗತಿಯಲ್ಲಿತ್ತು. ಬಳಿಕ ದಿನಾಂಕ 21/11/2012 ರಂದು ಅಂದಿನ ಬಿಜೆಪಿ ಸರ್ಕಾರ ಸಿಓಡಿ ತನಿಖೆಗೆ ಆದೇಶ ನೀಡಿತ್ತು.

ಘಟನೆ ನಡೆದು ಸುಮಾರು ಒಂದು ವರ್ಷದ ಬಳಿಕ ಅಂದರೆ ದಿನಾಂಕ 10-10-2013 ರಂದು ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯ ಮುಖಂಡರಾದ ಮಹೇಶ್ ಶೆಟ್ಟಿ ತಿಮರೋಡಿಯವರು ಹಾಗೂ ಸೌಜನ್ಯಳ ಮನೆಯವರು (ಸೌಜನ್ಯಳ ತಂದೆ ಚಂದಪ್ಪ ಗೌಡ, ತಾಯಿ ಕುಸುಮಾವತಿ ಹಾಗೂ ಮಾವ ವಿಠಲ ಗೌಡ) ಬೆಂಗಳೂರಿಗೆ ತೆರಳಿ ಟಿ.ವಿ. 9 ಚಾನೆಲ್ ಸ್ಟುಡಿಯೋದಲ್ಲಿ ಸಂದರ್ಶನ ನೀಡಿ ಸೌಜನ್ಯಾಳ ಅತ್ಯಾಚಾರ ಹಾಗೂ ಕೊಲೆ ಪ್ರಕರಣದಲ್ಲಿ ಆರೋಪಿಯನ್ನಾಗಿ ದಸ್ತಗಿರಿ ಮಾಡಿರುವ ಸಂತೋಷ್‌ರಾವ್ ನಿಜವಾದ ಆರೋಪಿಯಲ್ಲ. ಈ ಪ್ರಕರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಕುಟುಂಬದ ನೇರ ಕೈವಾಡ ಇರುವುದಾಗಿ ನೇರ ಆರೋಪ ಮಾಡಿದ್ದಲ್ಲದೆ, ವೀರೇಂದ್ರ ಹೆಗ್ಗಡೆ ಅವರ ಕಿರಿಯ ಸಹೋದರ ಹರ್ಷೇಂದ್ರ ಕುಮಾರ್ ಅವರ ಪುತ್ರ ನಿಶ್ಚಲ್ ಜೈನ್ ಸೇರಿದಂತೆ ಧರ್ಮಸ್ಥಳದ ಯುವಕರಾದ ಧೀರಜ್ ಕೆಲ್ಲ, ಉದಯ್ ಜೈನ್ ಮತ್ತು ಮಲ್ಲಿಕ್ ಜೈನ್ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದ್ದರು. ಸದ್ರಿ ಪ್ರಕರಣರನ್ನು ಸಿಬಿಐಗೆ ವಹಿಸಬೇಕೆಂದು ಆಗ್ರಹ ಮಾಡಿದ್ದರು. ಅಲ್ಲದೆ ದಿನಾಂಕ 25-10-2013ರಂದು ಬೆಳ್ತಂಗಡಿ ನಗರದ ತಾಲೂಕು ಕ್ರೀಡಾಂಗಣದಲ್ಲಿ ಸುಮಾರು 20 ಸಾವಿರ ಜನರನ್ನು ಸೇರಿಸಿ ಸದ್ರಿ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಆಗ್ರಹಿಸಿ ಪ್ರತಿಬಟನೆ ನಡೆಸಿದ್ದು ಆ ಬಳಿಕ ಮಂಗಳೂರಿನ ನೆಹರೂ ಮೈದಾನ, ಬೆಳ್ತಂಗಡಿ ತಾಲೂಕಿನ ಇಂದಬೆಟ್ಟು, ಉಜಿರೆ, ಪೆರಿಯಡ್ಕ, ಕಕ್ಕಿಂಜೆ, ನಡ, ನಿಡ್ಲೆ, ಮೊದಲಾದ ಕಡೆಗಳಲ್ಲಿ ಪ್ರತಿಬಟನಾ ಸಬೆಗಳನ್ನು ನಡೆಸಿ ಸರ್ಕಾರದ ಮೇಲೆ ಒತ್ತಡ ತಂದು ಅಂದಿನ ಬೆಳ್ತಂಗಡಿ ಶಾಸಕರಾದ ವಸಂತ ಬಂಗೇರ ರವರ ಕೋರಿಕೆಯಂತೆ ಅಂದಿನ ಕಾಂಗ್ರೆಸ್ ಸರಕಾರ ಸಿಬಿಐ ತನಿಖೆಗೆ ಆದೇಶ ಮಾಡಿದ್ದ ಹಿನ್ನೆಲೆಯಲ್ಲಿ ಚೆನ್ನೈನ ಸಿಬಿಐ ಅಧಿಕಾರಿಗಳು ಪ್ರಕರಣ ದಾಖಲಿಸಿ ತನಿಖೆ ಕೈಗೆತ್ತಿಕೊಂಡಿದ್ದರು.



ಸೌಜನ್ಯಾಳ ಪೋಷಕರು ಆರೋಪ ಮಾಡಿದ್ದ ಧೀರಜ್ ಕೆಲ್ಲ, ಉದಯ್ ಜೈನ್ ಮಲ್ಲಿಕ್ ಜೈನ್ ಹಾಗೂ ನಿಶ್ಚಲ್ ಜೈನ್ ರವರಿಗೆ ಸಿಓಡಿ ತನಿಖೆಯಲ್ಲಿ ಕ್ಲೀನ್ ಚಿಟ್ ನೀಡಿದ್ದರೂ ಬಳಿಕ ಸಿಬಿಐ ತನಿಖೆಯ ಸಂದರ್ಬದಲ್ಲಿ ಧೀರಜ್ ಕೆಲ್ಲ, ಉದಯ್ ಜೈನ್, ಮಲ್ಲಿಕ್ ಜೈನ್ ಈ ಮೂವರು ತಮ್ಮ ವಕೀಲರ ಮೂಲಕ ತಮಗೆ ಮಂಪರು ಪರೀಕ್ಷೆ, ಪೊಲೊಯೋಗ್ರಾಫಿ ಮುಂತಾದ ಪರೀಕ್ಷೆ ಮಾಡಿ ಆರೋಪದಿಂದ ಮುಕ್ತಿ ನೀಡಲು ಅರ್ಜಿ ಸಲ್ಲಿಕೆಯನ್ನು ಮಾಡಿದ್ದು, ಅದರಂತೆ ಸಿಬಿಐ ಕೋರ್ಟ್ ಮೂವರಿಗೂ ಚೆನ್ನೈನಲ್ಲಿ ಪೊಲಿಯೋಗ್ರಾಪಿ, ರಕ್ತ ಪರೀಕ್ಷೆ, ಮೊಬೈಲ್ ಡಿಟೈಲ್ಸ್ ಬ್ರೈನ್ ಮ್ಯಾಪಿಂಗ್ ಮುಂತಾದ ಪರೀಕ್ಷೆ ಮಾಡಲು ಅನುಮತಿ ನೀಡಿದ್ದರಿಂದ ಕೋರ್ಟ್ ಆದೇಶದಂತೆ ಚೆನ್ನೈನಲ್ಲಿ ಎಲ್ಲಾ ಪರೀಕ್ಷೆಗಳನ್ನು ಮಾಡಿ ಸಿಬಿಐ ಕೋರ್ಟ್‌ಗೆ ದಿ.25.03.2015 ರಂದು ವರದಿ ಸಲ್ಲಿಕೆ ಮಾಡಲಾಗಿತ್ತು.



ದಿನಾಂಕ 07-02-2017 ರಂದು ಸೌಜನ್ಯಳ ತಂದೆ ಚಂದಪ್ಪ ಗೌಡರು ತಾವು ಆರೋಪಿಸಿದ್ದ ಧೀರಜ್ ಜೈನ್ ಉದಯ ಜೈನ್ ಮಲ್ಲಿಕ್ ಜೈನ್ ವಿರುದ್ಧ ಪ್ರಕರಣ ದಾಖಲಿಸಿ ಅವರನ್ನು ಸಹ ಆರೋಪಿ ಮಾಡಲು ಸಿಬಿಐ ಕೋರ್ಟ್‌ಗೆ ವಕೀಲರಾದ ಅಮನ್ ಕೊರಾಯ ಮೂಲಕ ಅರ್ಜಿ ಸಲ್ಲಿಕೆ ಮಾಡಿದ್ದು ಅರ್ಜಿಯ ವಿರುದ್ಧವಾಗಿ ಮೂವರು ಕೂಡ ತಮ್ಮ ವಕೀಲ ಪಿಪಿ ಹೆಗ್ಗಡೆಯವರ ಮೂಲಕ, ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು ಬಳಿಕ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆದು ದಿ. 27.01.2021ರಂದು ಚಂದಪ್ಪ ಗೌಡರ ಅರ್ಜಿ ವಜಾ ಆಗಿತ್ತು.



ದಿನಾಂಕ 26/10/2017 ರಂದು ಸಿಬಿಐ ಅಧಿಕಾರಿಗಳು ತನಿಖೆ ನಡೆಸಿ ಆರೋಪಿ ಸಂತೋಷ್ ರಾವ್ ವಿರುದ್ಧ ಬೆಂಗಳೂರು 50 ನೇ ಅಡಿಷನಲ್ ಸಿಟಿ ಸಿವಿಲ್ ಮತ್ತು ಸೆಶನ್ಸ್ ಜಡ್ಜ್ ಕೋರ್ಟ್‌ಗೆ ಚಾರ್ಜ್ ಶೀಟ್ ಸಲ್ಲಿಕೆ ಮಾಡಿದ್ದು, ಸ್ಪೆಷಲ್ ಕೇಸ್ ನಂ. 203/2016 ರಂತೆ ದಾಖಲಾಗಿತ್ತು. ಸಿಬಿಐ ಕೋರ್ಟ್‌ನಲ್ಲಿ ಒಟ್ಟು 35 ಸಾಕ್ಷಿಗಳನ್ನು ಪರಿಗಣಿಸಲಾಗಿತ್ತು.

ಬೆಂಗಳೂರು 50ನೇ ಅಡಿಷನಲ್ ಪಿಟಿ ಸಿವಿಲ್ ಸೆಷನ್ ಬಡ್ಸ್ ಕೋರ್ಟ್‌ನಲ್ಲಿ ಪ್ರಕರಣದ ಎಲ್ಲಾ 35 ಸಾಕ್ಷಿಗಳ ವಿಚಾರಣೆ ನಡೆದು ದಿನಾಂಕ 16-06-2023 ರಂದು ಅಂತಿಮ ತೀರ್ಪನ್ನು ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಸಿ.ಬಿ. ರವರು ನೀಡಿದ್ದು ಪ್ರಕರಣದಲ್ಲಿ ಆರೋಪಿಯೆಂದು ಪರಿಗಣಿಸಲ್ಪಟ್ಟಿದ್ದ ಸಂತೋಷ್‌ರಾವ್‌ನ ವಿರುದ್ಧ ಸೂಕ್ತ ಸಾಕ್ಷಾಧಾರಗಳಿಲ್ಲದ ಕಾರಣ ನಿರ್ದೋಷಿ ಎಂದು ಆದೇಶ ನೀಡಿರುತ್ತಾರೆ. ಆರೋಪಿ ಪರ ವಕೀಲ ಮೋಹಿತ್ ಕುಮಾರ್ ವಾದ ಮಂಡಿಸಿದ್ದು, ಅತ್ಯಾಚಾರ ಹಾಗೂ ಕೊಲೆಯಾದ ವೇಳೆ ಆರೋಪಿ ಸ್ಥಳದಲ್ಲಿ ಇರಲಿಲ್ಲ, ರೇಪ್ ಮಾಡಿರುವ ಬಗ್ಗೆ ವೈದ್ಯಕೀಯ ವರದಿ ಇರಲಿಲ್ಲ, ಎರಡು ದಿನ ಬಳಿಕ ಆರೋಪಿಯನ್ನು ಬಂಧಿಸಲಾಗಿತ್ತು. ಸೌಜನ್ಯ ಮೃತಪಟ್ಟ ದಿನ ಭಾರೀ ಮಳೆ ಇತ್ತು. ಅಂದು 500 ಜನ ಹುಡುಕಾಟ ನಡೆಸಿದ್ದರು. ಆದರೆ ಅಂದು ಶವ ಪತ್ತೆಯಾಗಿರಲಿಲ್ಲ. ನದಿ ದಾಟಿ ಹೋಗಿದ್ದಾನೆ ಎಂದು ಅನುಮಾನ ವ್ಯಕ್ತಪಡಿಸಿದ ಪೊಲೀಸರು ಎರಡು ದಿನದ ಬಳಿಕ ಸಂತೋಷ್‌ರಾವ್‌ನನ್ನು ಬಂಧಿಸಿದ್ದರು. ಅಲ್ಲಿದ್ದ ಪ್ರಕೃತಿ ಚಿಕಿತ್ಸಾಲಯದ ಸಿಸಿಟಿವಿ ಫುಟೇಜ್ ಸಂಗ್ರಹಿಸಿಲ್ಲ. ಮರಣೋತ್ತರ ಪರೀಕ್ಷೆಯನ್ನು ರಾತ್ರೋ ರಾತ್ರಿ ಕೆಟ್ಟ ಬೆಳಕಿನಲ್ಲಿ ಮಾಡಲಾಗಿದೆ. ಸಂತೋಷ್‌ರಾವ್ ಕೊಲೆ ಮಾಡಿದ್ದಾನೆ ಎಂಬುದಕ್ಕೆ ಯಾವುದೇ ಸಾಕ್ಷ್ಯಗಳು ಇಲ್ಲ ಎಂದು ವಕೀಲರು ವಾದಿಸಿದ್ದರು. ಇದೆಲ್ಲವನ್ನೂ ಪರಿಶೀಲಿಸಿದ ನ್ಯಾಯಾಲಯ ಸರಿಯಾದ ಸಾಕ್ಷಾಧಾರಗಳಿಲ್ಲದೆ ಆರೋಪಿ ಸಂತೋಷ್‌ನನ್ನು ಖುಲಾಸೆಗೊಳಿಸಿತ್ತು.

### ತೀರ್ಪಿನ ಬಳಿಕ ನಡೆದ ಬೆಳವಣಿಗೆಗಳು

ನ್ಯಾಯಾಲಯದ ತೀರ್ಪಿನ ಬಗ್ಗೆ ಸೌಜನ್ಯ ಪರ ಹೋರಾಟ ಮಾಡಿದ್ದ ಮಹೇಶ್ ಶೆಟ್ಟಿ ತಿಮರೋಡಿಯವರು ದಿನಾಂಕ 16-06-2023 ರಂದು ಮಾಧ್ಯಮದವರೊಂದಿಗೆ ಪ್ರತಿಕ್ರಿಯಿಸಿ, ಸೌಜನ್ಯ ಅತ್ಯಾಚಾರ, ಹತ್ಯೆ ಪ್ರಕರಣದಲ್ಲಿ ನಿರಪರಾಧಿಯಾಗಿದ್ದ ಸಂತೋಷ್‌ರಾವ್‌ನನ್ನು ಅಪರಾಧಿಯಂತೆ ಬಿಂಬಿಸಲಾಗಿತ್ತು. ಆದರೆ ಸಿಬಿಐ ಕೋರ್ಟ್ ಆತನನ್ನು ದೋಷಮುಕ್ತಿಗೊಳಿಸಿದ್ದು ಇದು ನಮ್ಮ ಹೋರಾಟಕ್ಕೆ ಸಿಕ್ಕ ಮೊದಲ ಗೆಲುವು. ಸಂತೋಷ್‌ರಾವ್ ನಿರಪರಾಧಿ ಎಂದು ನಾವೇ ಸ್ವಂತ ಖರ್ಚಿನಲ್ಲಿ ವಕೀಲರ ನೇಮಿಸಿ ನ್ಯಾಯಾಲಯದಲ್ಲಿ ಹೋರಾಟ ಮಾಡಿದ್ದೇವೆ. ಇದು ನಿರೀಕ್ಷಿತ ಗೆಲುವು. ಆದರೆ ಸೌಜನ್ಯಳನ್ನು ಕ್ರೂರವಾಗಿ ಅತ್ಯಾಚಾರವೆಸಗಿ ಕೊಂದ ನೈಜ ಆರೋಪಿಗಳಿಗೆ ತಕ್ಕ ಶಿಕ್ಷೆಯಾಗಬೇಕಿದೆ. ಇದಕ್ಕಾಗಿ ಹನ್ನೊಂದು ವರ್ಷ ನಾವು ಕಾನೂನು ಹೋರಾಟ ನಡೆಸಿದ್ದೇನೆ. ತಪ್ಪಿತಸ್ಥರಿಗೆ ಮಂಜುನಾಥ ಸ್ವಾಮಿ ಮತ್ತು ಅಣ್ಣಪ್ಪ ಸ್ವಾಮಿ ಕೋರ್ಟ್‌ನಿಂದ ಮಾತ್ರ ಶಿಕ್ಷೆಯಾಗಲು ಸಾಧ್ಯ ಎಂಬುವುದನ್ನು ನಾವು ನಂಬಿದ್ದೇವೆ. ಈ ಪ್ರಕರಣದ ಹಿಂದಿರುವ ನೈಜ ಅಪರಾಧಿಗಳಿಗೆ ಅಣ್ಣಪ್ಪ ಸ್ವಾಮಿ ಸರಿಯಾದ ಶಿಕ್ಷೆ ನೀಡುತ್ತಾನೆ. ನನಗೆ ಈ ಸಂವಿಧಾನ ಕಾನೂವಿನ ಮೇಲೆ ನಂಬಿಕೆ ಇಲ್ಲ, ನಾವು ಈ ಪ್ರಕರಣದಲ್ಲಿ ಇಷ್ಟು ದೊಡ್ಡ ಹೋರಾಟ ಮಾಡಿದರೂ ನ್ಯಾಯ ಸಿಗಲಿಲ್ಲ ಎಂದಾದರೆ ಇದರ ಹಿಂದೆ ಎಷ್ಟು ದೊಡ್ಡ ಮುಂಡಾಸಿನವರು ಪ್ರಭಾವ ಬೀರರಬಹುದು. ಇಡೀ ಪ್ರಕರಣವನ್ನು ಮುಚ್ಚಿ ಹಾಕಲು ಷಡ್ಯಂತ್ರ ನಡೆಸಿದ ತನಿಖಾಧಿಕಾರಿಗಳ ಮನೆಯವರಿಗೆ, ಮಕ್ಕಳಿಗೆ ಇದರ ಶಾಪ ತಟ್ಟುತ್ತೆ. ಈ ಕೇಸನ್ನು ಮುಚ್ಚಿಹಾಕಿಸಿದ ಅಂದಿನ ಮುಖ್ಯಮಂತ್ರಿ ಆಗಿದ್ದಂತಹ ಸದಾನಂದ ಗೌಡರಿಗೆ ಶಾಪ ತಟ್ಟಿದೆ. ಇನ್ನೂ ತಟ್ಟುತ್ತೆ ಧರ್ಮಸ್ಥಳದಲ್ಲಿ ಮಂಜುನಾಥ... ಅಣ್ಣಪ್ಪಸ್ವಾಮಿ ಇದ್ದಾರಂತ ಆದ್ರೆ ನಮಗೆ ನ್ಯಾಯ ಸಿಕ್ಕೇ ಸಿಕ್ತದೆ. ಇನ್ನು ನಾವು ಕೋರ್ಟ್ ಮೇಲೆ ನಂಬಿಕೆ ಇಡಲ್ಲ ಎಂಬಿತ್ಯಾದಿಯಾಗಿ ಹೇಳಿದ್ದರು. ಅಲ್ಲದೆ ಕೊಲೆಯಾದ ಸೌಜನ್ಯಾಳ ತಾಯಿ ಶ್ರೀಮತಿ ಕುಸುಮಾವತಿ ರವರು ಮಾನ್ಯ ನ್ಯಾಯಾಲಯದ ತೀರ್ಪಿನ ಬಗ್ಗೆ ಪ್ರತಿಕ್ರಿಯಿಸಿ ಆರೋಪಿ ಸಂತೋಷ್ ರಾವ್ ದೋಷಮುಕ್ತ ಎಂದು ತೀರ್ಪು ಇವತ್ತು ಬಂದಿದೆ. ಆದರೆ ಸಿಬಿಐ ಮತ್ತೆ

☞ 13

12

ತನಿಖೆ ನಡೆಸಿ ಆರೋಪಿಗಳು ಯಾರೆಂದು ಪತ್ತೆಹಚ್ಚಿ ನಮಗೆ ನ್ಯಾಯ ಕೊಡಿಸಲಿ. ಸಿಬಿಐ ತನಿಖೆಯಿಂದ ನಮಗೆ ನ್ಯಾಯ ಸಿಗುವ ಭರವಸೆ ಇದೆ. ಮುಂದೆಯೂ ಈ ನಿಟ್ಟಿನಲ್ಲಿ ಹೋರಾಟ ಮಾಡುತ್ತೇವೆ ಎಂದು ಹೇಳಿದ್ದರು.

ಮಾನ್ಯ ನ್ಯಾಯಾಲಯದ ಅಂತಿಮ ತೀರ್ಪಿನ ಬಳಿಕ ಸೌಜನ್ಯಾಳ ಪೋಷಕರು ಹಾಗೂ ಮಹೇಶ್ ಶೆಟ್ಟಿ ತಿಮರೋಡಿರವರು ಸೌಜನ್ಯಾಳ ಅತ್ಯಾಚಾರ ಹಾಗೂ ಕೊಲೆ ಪ್ರಕರಣದಲ್ಲಿ ಈ ಹಿಂದೆ ಹೇಳಿರುವಂತೆಯೇ ಧೀರಜ್ ಕೆಲ್ಲ, ಉದಯ್ ಜೈನ್, ಮಲ್ಲಿಕ್ ಜೈನ್‌ರವರು ಈ ಕೃತ್ಯ ಎಸಗಿದ್ದು ವೀರೇಂದ್ರ ಹೆಗ್ಡೆಯವರ ನೇರ ಕೈವಾಡ ಇದೆ ಎಂದು ಆರೋಪಿಸಿದ್ದು ಹಲವು ವೆಬ್‌ನ್ಯೂಸ್‌ಗಳು ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಹರಿಯ ಬಿಟ್ಟಿದ್ದರು. ಇದರಿಂದಾಗಿ ದಿನಾಂಕ 30-06-2023 ರಂದು ಧೀರಜ್ ಕೆಲ್ಲ, ಉದಯ್ ಜೈನ್, ಮಲ್ಲಿಕ್‌ಜೈನ್ ರವರು ಮಂಗಳೂರಿನ ಪತ್ರಿಕಾ ಭವನದಲ್ಲಿ ಮಾಜಿ ಸಚಿವರಾದ ಅಭಯಚಂದ್ರ ಜೈನ್ ಅವರೊಂದಿಗೆ ಪತ್ರಿಕಾಗೋಷ್ಠಿ ನಡೆಸಿ ನಾವುಗಳು ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ, ನಾವು ಈ ಬಗ್ಗೆ ಕಾರಣಿಕ ಕ್ಷೇತ್ರವಾದ ಕೇರಳದ ಕಾನತ್ತೂರಿನಲ್ಲಿ ಆಣೆ ಪ್ರಮಾಣ ಮಾಡಲು ಸಿದ್ಧ. ನಮ್ಮ ಬಗ್ಗೆ ಆರೋಪ ಮಾಡುವ ಸೌಜನ್ಯಳ ಪೋಷಕರು ಹಾಗೂ ಮಹೇಶ್ ಶೆಟ್ಟಿ ತಿಮರೋಡಿಯವರು ಬರಬೇಕು ಎಂದು ಹೇಳಿದ್ದರು. ಆದರೆ ಆರೋಪ ಮಾಡಿದ್ದ ಸೌಜನ್ಯಾಳ ಪೋಷಕರು ಹಾಗೂ ಮಹೇಶ್ ಶೆಟ್ಟಿ ತಿಮರೋಡಿಯವರು ಆಣೆ ಪ್ರಮಾಣಕ್ಕೆ ಹೋಗದೆ ದಿನಾಂಕ 05-07-2013ರಂದು ಧೀರಜ್ ಕೆಲ್ಲ, ಉದಯ್ ಜೈನ್, ಮಲ್ಲಿಕ್ ಜೈನ್‌ರವರು ಮಾತ್ರ ಕಾರಣಿಕ ಕ್ಷೇತ್ರವಾದ ಕೇರಳದ ಕಾನತ್ತೂರಿನಲ್ಲಿ ಆಣೆ ಪ್ರಮಾಣ ಮಾಡಿ ಬಂದಿದ್ದರು.



ದಿನಾಂಕ 04-07-2023ರಂದು ಮೈಸೂರಿನ ಒಡನಾಡಿ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಸ್ಟ್ಯಾನ್ಲಿ ಮತ್ತು ಪರಶುರಾವ್ ಎಂಬವರು ಉಜಿರೆಯ ಮಹೇಶ್ ಶೆಟ್ಟಿ ತಿಮರೋಡಿರವರ ಮನೆಗೆ ಬಂದು ಸೌಜನ್ಯಾ ಹೋರಾಟದಲ್ಲಿ ನಾವು ಕೂಡ ನಿಮ್ಮೊಂದಿಗಿದ್ದೇವೆ. ಮುಂದಿನ ದಿನಗಳಲ್ಲಿ ಕಾನೂನಾತ್ಮಕವಾಗಿ ಹೋರಾಟ ನಡೆಸಿ ನ್ಯಾಯ ಸಿಗುವ ನಿಟ್ಟಿನಲ್ಲಿ ಪ್ರಕರಣದ ನೈಜ ಆರೋಪಿಗಳನ್ನು ಕಾನೂನಿನ ಮುಂದೆ ತಂದು ಪ್ರಕರಣಕ್ಕೆ ತಾರ್ಕಿಕ ಅಂತ್ಯ ಸಿಗುವವರೆಗೂ ನಿಮ್ಮ ಜೊತೆ ಇದ್ದೇವೆ ಎಂದು ಹೇಳಿದ್ದರು. ದಿನಾಂಕ 17-07-2023ರಂದು ಮೈಸೂರಿನಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟ ಮೈಸೂರು ಇವರ ವತಿಯಿಂದ (ಸುಮಾರು 30 ಸಂಘಟನೆಗಳು) ಮೈಸೂರಿನ ಒಡನಾಡಿ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಸ್ಟ್ಯಾನ್ಲಿ ಇವರ ನೇತೃತ್ವದಲ್ಲಿ ಶ್ರೀ ನಂಜರಾಜ ಬಹದ್ದೂರ್ ಛತ್ರದಿಂದ ಗಾಂಧೀ ಸರ್ಕಲ್‌ವರೆಗೆ ಸೌಜನ್ಯ ಪ್ರಕರಣವನ್ನು ನ್ಯಾಯಬದ್ಧ ಮೂಲ ತನಿಖೆಗೆ ಆಗ್ರಹಿಸಿ ಪ್ರತಿಭಟನಾ ಮೆರವಣಿಗೆ ನಡೆದು ಬಳಿಕ ಪ್ರತಿಭಟನಾ ಸಭೆ ನಡೆದಿದ್ದು ಸದ್ರಿ ಪ್ರತಿಭಟನೆಗೆ ಸೌಜನ್ಯಾ ಪೋಷಕರು, ಉಜಿರೆಯ ಮಹೇಶ್ ಶೆಟ್ಟಿ ತಿಮರೋಡಿ ಹಾಗೂ ಬೆಂಬಲಿಗರು (ಸುಮಾರು 40 ಮಂದಿ ಸೇರಿದಂತೆ ಸುಮಾರು 250 ಮಂದಿ ಸೇರಿದ್ದರು. ಪ್ರತಿಭಟನಾ ಸಭೆಯಲ್ಲಿ ಮುಂದಿನ ದಿನಗಳಲ್ಲಿ ಧರ್ಮಸ್ಥಳ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಬಗ್ಗೆಯೂ ತೀರ್ಮಾನಿಸಲಾಗಿತ್ತು.

ದಿನಾಂಕ 18-07-2023ರಂದು ಮಂಡ್ಯ ಜಿಲ್ಲಾಧಿಕಾರಿಯವರ ಕಚೇರಿ ಮುಂಭಾಗದಲ್ಲಿ ಮಹಿಳಾ ಮುನ್ನಡೆ ಸಂಸ್ಥೆ ಮಂಡ್ಯ ಇವರ ವತಿಯಿಂದ ಪೂರ್ಣಿಮಾ ರಾಜ್ಯ ಕಾರ್ಯದರ್ಶಿ ಇವರ ನೇತೃತ್ವದಲ್ಲಿ ಸುಮಾರು 30 ಮಂದಿ ಸೌಜನ್ಯ ಪ್ರಕರಣವನ್ನು ನ್ಯಾಯ ಬಗ್ಗೆ ಮೂಲ ತನಿಖೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಯವರಿಗೆ ಮನವಿಯನ್ನು ನೀಡಿರುತ್ತಾರೆ. ಸದ್ರಿ ಪ್ರತಿಬಟನೆಯಲ್ಲಿ ಕರ್ನಾಟಕ ಜನಶಕ್ತಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸಿದ್ಧರಾಜು ಹಾಗೂ ರೈತಸಂಘದ ಹೋರಾಟಗಾರ್ತಿ ಸುನಂದ ಜಯರಾಮರವರು ಪಾಲ್ಗೊಂಡಿದ್ದರು.

ದಿನಾಂಕ 23-07-2023ರಂದು ಅಂಬೇಡ್ಕರ್ ಯುವ ಸೇನೆ ಉಡುಪಿ ಜಿಲ್ಲೆಯ ವತಿಯಿಂದ ಉಡುಪಿ ಬೋರ್ಡ್ ಹೈಸ್ಕೂಲ್ ಬಳಿ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಮರು ತನಿಖೆ ಮಾಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆದಿದ್ದು ಸುಮಾರು 100 ಮಂದಿ ಪಾಲ್ಗೊಂಡಿದ್ದರು. ಸದ್ರಿ ಪ್ರತಿಬಟನೆಯಲ್ಲಿ ಪಣಿರಾಜ್ ಪ್ರಗತಿಪರ ಚಿಂತಕರು, ಶ್ರೀ ರಾವ್ ದಿವಾಣ ಪತ್ರಕರ್ತರು ಹಾಗೂ ಪ್ರಗತಿಪರ ಚಿಂತಕರು, ಹೈಕೋರ್ಟ್ ವಕೀಲ ಶ್ರೀನಿವಾಸ್ ಬೆಂಗಳೂರು, ಹಾಗೂ ಜಯನ್ ಮಲ್ಪೆ ಮೊದಲಾದವರು ಪಾಲ್ಗೊಂಡಿದ್ದರು.

ದಿನಾಂಕ 24-07-2023ರಂದು ವಿಚಾರವಾದಿ ವೇದಿಕೆ ಕರ್ನಾಟಕ ಶಿವಮೊಗ್ಗ ಹಾಗೂ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ಶಿವಮೊಗ್ಗ ಇವರ ವತಿಯಿಂದ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಮರು ತನಿಖೆ ಮಾಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆದಿದ್ದು ಸುಮಾರು 50 ಮಂದಿ ಪಾಲ್ಗೊಂಡಿದ್ದರು.

ಕಳೆದ ಕೆಲವು ದಿನಗಳಿಂದ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಮರು ತನಿಖೆ ಮಾಡುವಂತೆ ಆಗ್ರಹಿಸುವ ವಿಷಯವನ್ನು ಮುಂದಿಟ್ಟುಕೊಂಡು ಶ್ರೀ ಕ್ಷೇತ್ರ ಧರ್ಮಸ್ಥಳ ದೇವಸ್ಥಾನದ ಬಗ್ಗೆ, ಡಾ. ಡಿ. ವೀರೇಂದ್ರ ಹೆಗ್ಡೆಯವರ ಹಾಗೂ ಅವರ ಕುಟುಂಬದವರ ಬಗ್ಗೆ ಇಲ್ಲ ಸಲ್ಲದ ಆಧಾರ ರಹಿತ ಆರೋಪಗಳನ್ನು ಹಲವು ವಾಟ್ಸಾಪ್ ಗ್ರೂಪ್‌ಗಳಲ್ಲಿ, ವೆಬ್‌ನ್ಯೂಸ್‌ಗಳಲ್ಲಿ ಬಿತ್ತರಪಡಿಸುತ್ತಿದ್ದು, ಈ ನಿಟ್ಟಿನಲ್ಲಿ ಶೀನಪ್ಪ ಡಿವಿಷನಲ್ ಆಫೀಸರ್ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬೆಂಗಳೂರು ಇವರು ಧರ್ಮಸ್ಥಳ ದೇವಾಲಯ, ದೇವಾಲಯದ ಅಧೀನಕ್ಕೆ ಒಳಪಟ್ಟ ಶಿಕ್ಷಣ ಸಂಸ್ಥೆಗಳು ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಡೆ ಮತ್ತು ಅವರ ಕುಟುಂಬದ ವಿರುದ್ಧ ಆಧಾರ ರಹಿತ ಆರೋಪಗಳನ್ನು ಪ್ರಸಾರ ಮಾಡದಂತೆ ನಿರ್ಬಂಧ ಹೇರಬೇಕು ಎಂದು ಬೆಂಗಳೂರಿನ ಸಿಟಿ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ನ್ಯಾಯಾಲಯವು ವಿಚಾರಣೆ ನಡೆಸಿ ಈ ಸಂಬಂಧ ಮಹೇಶ್ ಶೆಟ್ಟಿ ತಿಮರೋಡಿ ಸೇರಿದಂತೆ 7 ಮಂದಿ ವ್ಯಕ್ತಿಗಳಿಗೆ ಹಾಗೂ ಫೇಸ್‌ಬುಕ್, ವಾಟ್ಸಾಪ್, ಯೂಟ್ಯೂಬ್, ಟ್ವಿಟರ್ ಇನ್‌ಸ್ಟಾಗ್ರಾಮ್, ಟಿವಿ ಚಾನೆಲ್‌ಗಳು ಹಾಗೂ ಇತರೇ ಸಾಮಾಜಿಕ ಜಾಲತಾಣಗಳು ಸೇರಿದಂತೆ 4 ದೃಶ್ಯ ಮಾಧ್ಯಮ ಸಂಸ್ಥೆಗಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ದೇವಾಲಯ, ದೇವಾಲಯದ ಅಧೀನಕ್ಕೆ ಒಳಪಟ್ಟ ಶಿಕ್ಷಣ ಸಂಸ್ಥೆಗಳು ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಡೆ ಮತ್ತು ಅದರ ಕುಟುಂಬದ ವಿರುದ್ಧ ಆಧಾರ ರಹಿತ ಆರೋಪಗಳನ್ನು ಪ್ರಸಾರ ಮಾಡದಂತೆ ದಿನಾಂಕ 18-07-2023 ರಂದು ನಿರ್ಬಂಧಕಾಜ್ಞೆ ನೀಡಿರುತ್ತದೆ.

ದಿನಾಂಕ 22-07-2023ರಂದು ಬೆಳ್ತಂಗಡಿಯ ಬಿಜೆಪಿ ಶಾಸಕರಾದ ಶ್ರೀ ಹರೀಶ್ ಪೂಂಜಾ ಹಾಗೂ ವಿಧಾನ ಪರಿಷತ್ ಸದಸ್ಯರಾದ ಪ್ರತಾಪ್‌ಸಿಂಹ ನಾಯಕ್ ರವರು ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಕುಮಾರಿ ಸೌಜನ್ಯಾ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಮರು ತನಿಖೆಗೆ ಆದೇಶಿಸಬೇಕು ಎಂದು ಮನವಿ ನೀಡಿದ್ದಾರೆ.

ದಿನಾಂಕ 25-07-2023ರಂದು ಬೆಳ್ತಂಗಡಿ ಹಳೆಕೋಟೆಯ ವಾಣಿ ಪದವಿಪೂರ್ವ ಕಾಲೇಜಿನ ಸಭಾಂಗಣದಲ್ಲಿ ಗೌಡರ ಯಾನೆ ಒಕ್ಕಲಿಗರ ಸಂಘದ ವತಿಯಿಂದ ಗೌರವಾಧ್ಯಕ್ಷರಾದ ಪದ್ಮಗೌಡ ಬೆಳಾಲು



ಪತ್ರಿಕಾಗೋಷ್ಠಿ ನಡೆಸಿ ಬೆಳ್ತಂಗಡಿ ತಾಲೂಕಿನ ನಮ್ಮ ಎಲ್ಲ ಸಮಾಜದ ಬಂಧುಗಳ ಪರವಾಗಿ ಸೌಜನ್ಯಾ ಪ್ರಕರಣವನ್ನು ಉನ್ನತ ಮಟ್ಟದಲ್ಲಿ ಮರು ತನಿಖೆಯನ್ನು ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಂಡು ಹೀನಾಯ ರೀತಿಯಿಂದ ಜೀವ ಕಳೆದುಕೊಂಡಿರುವ ಆತ್ಮಕ್ಕೆ, ಹೆತ್ತವರಿಗೆ ಹಾಗೂ ಕುಟುಂಬ ವರ್ಗಕ್ಕೆ ನ್ಯಾಯವನ್ನು ಕೊಡಿಸಲು ಮುಖ್ಯಮಂತ್ರಿಗಳನ್ನು ಆಗ್ರಹಿಸಿರುವುದಲ್ಲದೆ ಖುದ್ದಾಗಿ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಗುವುದು ಎಂದು ಹೇಳಿರುತ್ತಾರೆ.

ಕಳೆದ ಕೆಲವು ದಿನಗಳಿಂದ ಸೌಜನ್ಯಾ ಕಣ್ಣೀರಿನ ನ್ಯಾಯಕ್ಕಾಗಿ ಧ್ವನಿ ಎಂಬ ಹೆಸರಿನಲ್ಲಿ ಸುಮಾರು 10 ಕ್ಕಿಂತಲೂ ಮೇಲ್ಪಟ್ಟು ವಾಟ್ಸಾಪ್ ಗ್ರೂಪ್‌ಗಳು ರಚನೆಯಾಗಿದ್ದು, ಸದ್ರಿ ಗ್ರೂಪ್‌ಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ದೇವಾಲಯದ ಬಗ್ಗೆ, ವೀರೇಂದ್ರ ಹೆಗ್ಡೆ ಮತ್ತು ಅವರ ಕುಟುಂಬದ ಬಗ್ಗೆ ಅವಾಚ್ಯವಾದ ಪದಗಳನ್ನು ಬಳಸಿ ನಿಂದನೆ ಮಾಡುತ್ತಿರುವುದು ಕಂಡು ಬರುತ್ತಿದ್ದು, ಸೌಜನ್ಯ ಪ್ರಕರಣದಲ್ಲಿ ಹಾಗೂ ಇತರೆ ಕೆಲವೊಂದು ಪ್ರಕರಣದಲ್ಲಿ (ದಿ.21.09.2012 ರಂದು ಧರ್ಮಸ್ಥಳದ ಪೂರ್ಜೆಬೈಲು ಎಂಬಲ್ಲಿ ನಡೆದ ಅವಳಿ ಕೊಲೆಯ ಪ್ರಕರಣ) ವೀರೇಂದ್ರ ಹೆಗ್ಗಡೆ ಮತ್ತು ಅವರ ಕುಟುಂಬದ ಸದಸ್ಯರು ಸೇರಿ ನೇರ ಭಾಗಿಯಾಗಿದ್ದಾರೆ ಅಲ್ಲದೇ 2002ನೇ ಇಸವಿಯಿಂದ 2012ರವರೆಗೆ ಉಜಿರೆ ಹಾಗೂ ಧರ್ಮಸ್ಥಳ ಗ್ರಾಮಗಳಲ್ಲಿ ಸುಮಾರು 462 ಅಸಹಜ ಸಾವುಗಳಾಗಿತ್ತು. ಇದು ಸಂಶಯಾಸ್ಪದವಾಗಿದ್ದು, ಇದರ ಬಗ್ಗೆ ಕಾಶ್ಮೀರಿ ಫೈಲ್ಸ್ ಚಲನಚಿತ್ರದಂತೆಯೇ ಧರ್ಮಸ್ಥಳ ಫೈಲ್ಸ್ ಎಂಬ ಚಿತ್ರ ಮಾಡಬಹುದು ಎಂದು ಬಿಂಬಿಸಿ ಶ್ರೀ ಕ್ಷೇತ್ರದ ಹಾಗೂ ಹೆಗ್ಗಡೆಯವರ ವಿರುದ್ಧ ಅವಹೇಳನಕಾರಿಯಾಗಿ ಬರಹಗಳನ್ನು ಪ್ರಕಟಿಸಿ ಜನರನ್ನು ಜನಾಂದೋಲನೆ ಸೃಷ್ಟಿ ಮಾಡಲು ಸಾಮಾಜಿಕ ಜಾಲತಾಣಗಳಲ್ಲಿ ತಯಾರಿ ನಡೆಸುತ್ತಿರುವುದು ಕಂಡು ಬರುತ್ತದೆ.



ಪ್ರಮುಖವಾಗಿ ಸೌಜನ್ಯಾಳ ಮಾವ ವಿಠಲ ಗೌಡ ಎಂಬವರು ಕಳೆದ ಕೆಲವು ದಿನಗಳಿಂದ ಬೇರೆ ಬೇರೆ ಕಡೆಯ ದೃಶ್ಯ ಮಾಧ್ಯಮದವರನ್ನು ಧರ್ಮಸ್ಥಳಕ್ಕೆ ಕರೆಯಿಸಿ ಘಟನಾ ನಡೆದ ಸ್ಥಳ, ಆರೋಪಿ ಸಿಕ್ಕಿದ ಸ್ಥಳದ ಬಳಿ ವೀಡಿಯೋ ಶೂಟಿಂಗ್ ನಡೆಸಿಕೊಂಡು ಘಟನೆಯ ಬಗ್ಗೆ ಸತ್ಯಾಸತ್ಯತೆಯನ್ನು ಮರೆಮಾಚಿ ಕಪೋಲಕಲ್ಪಿತ ಹೇಳಿಕೆಗಳನ್ನು ನೀಡಿ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರ ಮಾಡಿಸಿ ಆ ಪ್ರಕರಣದ ಬಗ್ಗೆ ಜನರಿಗೆ ತಪ್ಪು ಮಾಹಿತಿಗಳನ್ನು ನೀಡುವ ಕಾರ್ಯ ಮಾಡುತ್ತಿರುವುದಲ್ಲದೆ ಸದ್ರಿ ಪ್ರಕರಣದಲ್ಲಿ ಹೋರಾಟಗಾರರೆನಿಸಿಕೊಂಡಿದ್ದ ಹಾಗೂ ಆರೋಪಿ ಸಂತೋಷ್ ರಾವ್‌ನನ್ನು ಜೈಲಿನಿಂದ ಬಿಡುಗಡೆಗೊಳಿಸಲು ಪ್ರಮುಖ ಪಾತ್ರ ವಹಿಸಿದ್ದ ಮಹೇಶ್ ಶೆಟ್ಟಿ ತಿದುರೋಡಿಯವರು ಕೂಡ ವಿವಿಧ ದೃಶ್ಯ ಮಾಧ್ಯಮಗಳ ಮುಂದೆ ಕೂತು ಈ ಪ್ರಕರಣಕ್ಕೆ ಸಂಬಂಧಿಸಿ ನೇರವಾಗಿ ವೀರೇಂದ್ರ ಹೆಗ್ಗಡೆ ಹಾಗೂ ಅವರ ಕುಟುಂಬದವರ ವಿರುದ್ಧ ಆರೋಪ ಮಾಡುತ್ತಿರುವುದಲ್ಲದೆ ಶ್ರೀ ಕ್ಷೇತ್ರದ ಮಂಜುನಾಥ ಸ್ವಾಮಿ ಹಾಗೂ ಅಣ್ಣಪ್ಪ ಸ್ವಾಮಿಯ ಬಗ್ಗೆ ಕೀಳುಮಟ್ಟದಲ್ಲಿ ಮಾತಾಡಿಕೊಂಡು ಸೌಜನ್ಯಾ ಪ್ರಕರಣದ ನೈಜ ವಿಷಯಗಳನ್ನು ಮುಚ್ಚಿಟ್ಟು ಕಪೋಲಕಲ್ಪಿತ ಸುಳ್ಳು ಸುದ್ದಿಗಳನ್ನು ಹೇಳಿಕೊಂಡು ಜನರಲ್ಲಿ ತಪ್ಪು ಸಂದೇಶ ನೀಡುತ್ತಿರುವ ಬೆಳವಣಿಗೆಗಳು ಪ್ರಸ್ತುತ ನಡೆಯುತ್ತಿದ್ದು ಮಹೇಶ ಶೆಟ್ಟಿಯವರ ನಡೆಯನ್ನು ಕ್ಷೇತ್ರದ ಅಸಂಖ್ಯಾತ ಬಕ್ತಾಧಿಗಳು ಖಂಡಿಸುತ್ತಿರುವುದು ಕಂಡು ಬರುತ್ತಿದೆ.

ಸೌಜನ್ಯಾ ಪ್ರಕರಣದಲ್ಲಿ ಶ್ರೀ ಕ್ಷೇತ್ರದ ಹಾಗೂ ಹೆಗ್ಗಡೆಯವರ ಹಾಗೂ ಅವರ ಕುಟುಂಬವನ್ನು ಉಲ್ಲೇಖ ಮಾಡುತ್ತಿರುವ ನಡೆಯನ್ನು ಖಂಡಿಸಿ ವೀರೇಂದ್ರ ಹೆಗ್ಡೆಯವರ ಅಭಿಮಾನಿಗಳ ವತಿಯಿಂದ ಲಯನ್ಸ್ ಕ್ಲಬ್ ಅಧ್ಯಕ್ಷರಾದ ಜಯರಾಜ್ ಎಂಬವರು ದಿನಾಂಕ 23-07-2023 ರಂದು ಬೆಂಗಳೂರಿನ ಹೊಸಕೋಟೆಯಲ್ಲಿ ಪತ್ರಿಕಾ ಗೋಷ್ಠಿ ನಡೆಸಿ ಸೌಜನ್ಯಾ ಪ್ರಕರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಹಾಗೂ ವೀರೇಂದ್ರ ಹೆಗ್ಡೆಯವರ ಹೆಸರನ್ನು ಆಧಾರರಹಿತವಾಗಿ ಎಳೆದು ತಂದಿರುವ ಮಹೇಶ್ ಶೆಟ್ಟಿ ತಿಮರೋಡಿ ವಿರುದ್ಧ ಖಂಡನೆ ಮಾಡುತ್ತೇವೆ ಹೆಗ್ಡೆಯವರ ಜೊತೆ ಅಸಂಖ್ಯಾತ ಭಕ್ತರು ನಾವಿದ್ದೇವೆ. ಆಧಾರ ರಹಿತವಾಗಿ ಆರೋಪ ಮಾಡುವವರಿಗೆ ನೀವು ಹೆಗ್ಗಡೆಯವರೂ ಪತ್ರಿಕಾಗೋಷ್ಠಿ ಮೂಲಕ ಉತ್ತರ ಕೊಡೋಕೆ ಹೋಗಬೇಡಿ. ಅದಕ್ಕೆ ನಾವು ಭಕ್ತ ವೃಂದ ಇದ್ದೇವೆ. ನೀವು ಮಂಜುನಾಥನ ಸೇವೆಯನ್ನು ಮಾಡಿ ಎಂದು ಹೇಳಿರುತ್ತಾರೆ.

ಪ್ರಸ್ತುತ ಸೌಜನ್ಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಮರು ತನಿಖೆಗೆ ಆದೇಶಿಸಬೇಕೆನ್ನುವ ನಿಟ್ಟಿನಲ್ಲಿ ಬೆಳ್ತಂಗಡಿ ಶಾಸಕರು ಸೌಜನ್ಯ ಕುಟುಂಬವನ್ನು ಮಾನ್ಯ ಮುಖ್ಯಮಂತ್ರಿಗಳ ಹಾಗೂ ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿಸಬೇಕೆಂದು ಸೌಜನ್ಯಾ ಕುಟುಂಬಸ್ಥರು ಆಗ್ರಹ ವ್ಯಕ್ತಪಡಿಸುತ್ತಿರುವುದಲ್ಲದೆ, ಪ್ರಕರಣದ ಮರು ತನಿಖೆಯ ಕೂಗು ದಿನದಿಂದ ದಿನಕ್ಕೆ ರಾಜ್ಯಾದ್ಯಂತ ಕಾವೇರುತ್ತಿದ್ದು ದಿನಾಂಕ 28-07-2023 ರಂದು ಪ್ರಗತಿಪರ ಸಂಘಟನೆಗಳ ಹೋರಾಟ ಸಮಿತಿ ಕರ್ನಾಟಕ ಇವರ ವತಿಯಿಂದ ಸುಮಾರು 60 ಸಂಘಟನೆಗಳ ಸಹಭಾಗಿತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಆಯೋಜನೆಗೊಂಡಿದ್ದು ದಿನಾಂಕ 28-08-2023ರಂದು ಪ್ರಗತಿಪರ ಸಂಘಟನೆಗಳ ವತಿಯಿಂದ ಬೆಳ್ತಂಗಡಿಯಲ್ಲಿ ಬೆಳ್ತಂಗಡಿ ಚಲೋ ಕಾರ್ಯಕ್ರಮ ನಡೆಸುವ ಬಗ್ಗೆ ಸಿಪಿಐ(ಎಂ) ಮುಖಂಡರಾದ ಬಿ.ಎಂ.ಭಟ್‌ರವರ ನೇತೃತ್ವದಲ್ಲಿ ರೂಪುರೇಷೆ ಸಿದ್ಧಗೊಳ್ಳುತ್ತಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರತಿಭಟನೆಗಳು ನಡೆಯುವ ಸಾಧ್ಯತೆ ಇರುವುರಲ್ಲದೆ ಕೆಲವೊಂದು ಸ್ಥಾಪಿತ ಹಿತಾಸಕ್ತಿಗಳು ಯಾವುದೋ ದುರುದ್ದೇಶವನ್ನು ಇಟ್ಟುಕೊಂಡು ಸದ್ದಿ ಪ್ರಕರಣದಲ್ಲಿ ವೀರೇಂದ್ರ ಹೆಗ್ಗಡೆ ಹಾಗೂ ಅವರ ಕುಟುಂಬ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳ ದೇವಾಲಯದ ಹೆಸರನ್ನು ತಳುಕುಹಾಕಿಕೊಂಡು ಅಪಪ್ರಚಾರಗಳನ್ನು ಮಾಡಿದ್ದಲ್ಲಿ ಮುಂದಿನ ದಿನಗಳಲ್ಲಿ ಶ್ರೀ ಕ್ಷೇತ್ರದ ಭಕ್ತ ವೃಂದದವರಿಂದಲೂ ರಾಜ್ಯ ವ್ಯಾಪ್ತಿ ಪ್ರತಿಬಟನೆಗಳು ನಡೆಯುವ ಸಾಧ್ಯತೆಗಳು ಕಂಡುಬರುತ್ತದೆ.

ರಾಜ್ಯ ಗುಪ್ತಚರ ಇಲಾಖೆಯು 2023 ಜುಲೈ 25 ರಂದು ನೀಡಿದಂತಹ ವರದಿಯನ್ನು ರಾಜ್ಯಸರಕಾರ ಗಂಭೀರವಾಗಿ ಪರಿಗಣಿಸದೇ ಇದ್ದುದರಿಂದ ಸ್ಥಾಪಿತ ಹಿತಾಸಕ್ತಿಗಳು ಶ್ರೀ ಕ್ಷೇತ್ರದ ವಿರುದ್ಧ ಷಡ್ಯಂತ್ರ ರೂಪಿಸಲು ವಿಪುಲ ಅವಕಾಶ ಸಿಕ್ಕಿದಂತಾಗಿದೆ ಎನ್ನುವುದಂತೂ ಸ್ಪಷ್ಟ.

7

ಸ್ನೇಹಿತರ ಹೆಸರಲ್ಲೂ ಆಸ್ತಿ ಮಾಡಿರುತ್ತಾನೆ. ಅನ್ನೋದು ಗೊತ್ತಾಗಲು ಬಹಳ ಸಮಯವೇ ಬೇಕಾಗಿ ಹೋಯ್ತು ನೋಡಿ. ಈಗ ಆತನೇ ಹೆಣವಾಗಿ ಮಲಗಿದ್ದಾನೆ. ಅಷ್ಟಕ್ಕೂ ಈ ಕೊಲೆ ಯಾಕಾಯ್ತು? ಜೊತೆಗಿದ್ದವರೇ ಈ ಕೊಲೆ ಮಾಡಲು ಕಾರಣ ಏನು? ಇದರ ಹಿಂದಿರುವ ವ್ಯಕ್ತಿಯಾದರು ಯಾರು?

**ಅಕ್ರಂನೇ ಸುಪಾರಿ ಕೊಟ್ಟ**

ಈ ಒಂದು ಕೊಲೆಯ ವಿಚಾರವಾಗಿ ಮೂವರ ಹೆಸರು ಮೇಲ್‌ಪಂಕ್ತಿಗೆ ಬರುತ್ತದೆ. ಮೊದಲನೆಯ ಹೆಸರು ಅಕ್ರಂನದ್ದಾಗಿದ್ದರೆ, ಎರಡನೆಯ ಹೆಸರು ಸೈಬುದ್ದಿನದ್ದು. ಕೊನೆಯದ್ದು ಸಹೋದರ ಅನ್ವರ್ ಹುಸೇನಿ ಆನೆ ಅಂಜುವಿನದ್ದು. ಮತ್ತೊಬ್ಬ ವ್ಯಕ್ತಿಯ ಹೆಸರು ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿ ಆಸುಪಾಸಿನ ಮೂಲದವರಾದ



ವಿವೇಕ್ ಕರ್ಕೇರ. ಈ ಮೂವರ ಹೆಸರು ಈ ಕ್ಷಣ ಸುಪಾರಿ ಕೊಟ್ಟವರ ಲಿಸ್ಟ್‌ನಲ್ಲಿ ಬರುತ್ತದೆ. ಆದರೆ ಇಲ್ಲಿ ಸಹೋದರನ ಕೈವಾಡ ಕೊಲೆಯಲ್ಲಿ ಕಾಣಸಿಗುವುದಿಲ್ಲ. ಯಾಕಂದರೆ ಅವರ ಆರ್ಥಿಕತೆ ಕೊಲೆಗೆ ಸುಪಾರಿ ಕೊಡುವಷ್ಟು ಇಲ್ಲ ಅನ್ನೋದು ಗೊತ್ತಾಗುತ್ತದೆ. ದ್ವೇಷ ಇದ್ದರೆ ಸ್ವತಹ ಆತನೇ ಹೋಗಿ ಕೊಲೆ ಮಾಡುತ್ತಿದ್ದ. ಹಂತಕರ ಪೈಕಿ ಒಬ್ಬನಾಗಿರುತ್ತಿದ್ದ. ಸುಪಾರಿ ಕೊಡುವ ಸ್ಥಿತಿಯಲ್ಲಿ ಆತನಿಲ್ಲ ಅನ್ನೋದು ಗೊತ್ತಾಗುತ್ತದೆ. ಇನ್ನು ವಿವೇಕ್ ಕರ್ಕೇರ ಹೆಸರು ಬರುತ್ತದೆ ನಿಜ. ಆದರೆ ಅದಕ್ಕೆ ಪೂರಕವಾದಂತಹ ಯಾವುದೇ ಬಲವಾದ ಅಂಶಗಳು ಕಂಡು ಬರುವುದಿಲ್ಲ. ಹಾಗಾಗಿ ಅಕ್ರಮ್ ಸುತ್ತಲೇ ಅನುಮಾನಗಳು ದೊಡ್ಡ ಪ್ರಮಾಣದಲ್ಲಿ ಹುಟ್ಟಿಕೊಳ್ಳಲು ಕಾರಣವಾಗುತ್ತದೆ.

ಎನಕ್ಕೆ ಈ ಒಂದು ಕೊಲೆಗೆ ಸುಫಾರಿ ನೀಡಿದ್ದು, ಸೈಫುದ್ದೀನ್ಗೆ ಜೊತೆಯಾಗಿ ನಿಂತಿದ್ದ ಇಂದ್ರಾಳಿ ಪರಿಸರದ ನಿವಾಸಿ ಅಕ್ರಮ್ ಪಾಷಾ. ಈತ ಕಳೆದ ಎರಡು ತಿಂಗಳ ಹಿಂದೆಯೇ ವಿದೇಶಕ್ಕೆ ಹೋಗಿದ್ದಾನೆ. ಈತ ವಿದೇಶಕ್ಕೆ ಹೋದ ಅಂದ್ರೆ ಇಲ್ಲಿ ಏನೋ ಗಡಿಬಿಡಿಯ ಆಗ್ತದೆ ಅಂತಾನೆ ಅರ್ಥ. ಅದರ ಅರ್ಥ ಮುಂದೇನಾಗುತ್ತದೆ ಅನ್ನುವುದರ ವಿಚಾರ ಆತನಿಗೆ ಗೊತ್ತಿರುತ್ತದೆ ಅಂತ ತಾನೇ? ಈ ಅಕ್ರಮ್, ಸೈಫುದ್ದಿನ ಜೊತೆಗೆ ಇರುತ್ತಿದ್ದವ. ಸೈಫುದ್ದೀನ್ ಇವನ ಹೆಸರಿನಲ್ಲಿ ಸಾಕಷ್ಟು ಬೇನಾಮಿ ಆಸ್ತಿ ಮಾಡಿಟ್ಟಿದ್ದಾನೆ. ಅದನ್ನು ಸೈಫುದ್ದೀನ್ ವಾಪಸ್ ಕೊಡಲು ಯಾವಾಗ ಕೇಳಲು ಪ್ರಾರಂಭಿಸುತ್ತಾನೋ ಆಗಲೇ ಅಕ್ರಮ್ ಒಳಗಿಂದೊಳಗೆ ತಂತ್ರಗಾರಿಕೆ ಶುರು ಮಾಡುತ್ತಾನೆ.

ಬಹಳ ಬುದ್ಧಿವಂತ ಈ ಅಕ್ರಂ. ಎಲ್ಲೂ ತನ್ನ ಕೈಗೆ ರಕ್ತವನ್ನು ಅಂಟಿಸಿಕೊಂಡವನಲ್ಲ. ಇವನ ಬಗ್ಗೆ ತೀರಾ ಒಳ್ಳೆಯ ಅಭಿಪ್ರಾಯವೂ ಇಲ್ಲ. ಸೈಫುದ್ದಿನ್ ತನ್ನ ಅಣ್ಣ ತಮ್ಮಂದಿರ ಜೊತೆಗೆ ಆತ್ಮೀಯವಾಗಿ ಇಲ್ಲದಿರುವುದಕ್ಕೆ ಕಾರಣವೇ ಈ ಅಕ್ರಂ ಅನ್ನೋದು ಅಬ್ದುಲ್ ಖಾದರ್ ಅವರ ಉಳಿದ ಮಕ್ಕಳ ಅಭಿಪ್ರಾಯ. ಹಾಗಾಗಿ ಅವರೆಲ್ಲರೂ ಅಕ್ರಂನನ್ನು ದೂರವೇ ಇಟ್ಟಿದ್ದರು. ಆದರೆ ಸೈಫುದ್ದಿನ್ ಮಾತ್ರ ಅಕ್ರಂನ ಜೊತೆಗೇನೆ ಒಡನಾಟ ಇಟ್ಟುಕೊಂಡಿದ್ದ. ಆತನ ಮಾತನ್ನೇ ಕೇಳುತ್ತಿದ್ದ. ಕುಟುಂಬದ ಆಸ್ತಿಯ ಪಾಲುದಾರಿಕೆಯಲ್ಲಿ ಕೊನೆಯ ಸಹೋದರ ಅನ್ವರ್ ಹುಸೇನ್ ಯಾನೆ ಅಂಜುವಿಗೆ, ಸೈಫುದ್ದೀನ್ ಒಂದೂವರೆ ಕೋಟಿ ಹಣ ಕೊಡಬೇಕಿತ್ತು. ಆದರೆ ಆ ಹಣವನ್ನು ಸೈಫುದ್ದಿನ್ ಅಂಜುವಿಗೆ ಕೊಡದೆ ಟೋಪಿ ಹಾಕುತ್ತಾನೆ. ಆತ ಟೋಪಿ ಹಾಕಲು ಕಾರಣ ಇದೆ ಅಕ್ರಂ ಅನ್ನುವುದು ಇಡೀ ಕುಟುಂಬಕ್ಕೆ ಗೊತ್ತಿದೆ.

ಅದೇನೇ ಇರಲಿ, ಸಹೋದರರೆಲ್ಲರಿಗೂ ಅದರಲ್ಲೂ ಅಂಜುಗೆ ಈಗ ಕೊಲೆಯಾಗಿರುವ ಸೈಫುದ್ದಿನ್ ಮೇಲೆ ಮೋಸ ಮಾಡಿದ ಎಂಬುದಕ್ಕೆ ಬೇಸರ ಇತ್ತು, ಆದರೆ ದ್ವೇಷ ಇರಲಿಲ್ಲ ಎಂಬ ಮಾತುಗಳು ಆತನ ಹತ್ತಿರದ ವಲಯದಿಂದ ಕೇಳಿ ಬರುತ್ತದೆ. ಆತ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತಾನೆ. ಹಣಕಾಸಿನ ವಿಚಾರದಲ್ಲೂ ಅಷ್ಟೇನೂ ಸ್ಟ್ರಾಂಗ್ ಆಗಿಲ್ಲ. ಒಂದು ಕಾಲದಲ್ಲಿ ಬೇಕಾದಷ್ಟು ಹಣ ಮಾಡಿದ್ದ, ಎಂಜಾಯ್ ಕೂಡ ಮಾಡಿದ್ದ. ಆದರೆ ಈಗ ಆರ್ಥಿಕ ಸಂಕಷ್ಟದಲ್ಲಿ ಇದ್ದಾನೆ ಅನ್ನೋದು ಆತನ ಹತ್ತಿರದಿಂದ ಬಲ್ಲವರ ಮಾತು.

ಈಗ ವಿದೇಶದಲ್ಲಿ ಕುಳಿತಂತಹ ಅಕ್ರಮ್ ತನ್ನ ಮೊಬೈಲನ್ನು ಸ್ವಿಚ್ ಆಫ್ ಮಾಡಿಕೊಂಡು ಕೂತಿದ್ದಾನೆ. ಸೈಫುದ್ದೀನ್ ಕಾರಣದಿಂದಲೇ ಸಾಕಷ್ಟು ಹಣವಂತನಾಗಿರುವ ಅಕ್ರಮ್ ತತಕ್ಷಣವೇ ಅಲ್ಲಿಂದ ಡೆಡ್‌ಬಾಡಿ ನೋಡಲು ಬರಬೇಕಿತ್ತು. ಆದರೆ ಆತ ಬಂದಿಲ್ಲ. ಬದಲಿಗೆ ಫೋನ್ ಸ್ವಿಚ್ ಆಫ್ ಮಾಡಿಕೊಳ್ಳುತ್ತಾನೆ. ಕೇಳಿದವರ ಬಳಿ ವೀಸಾ ಪ್ರಾಬ್ಲಮ್ ಇದೆ ಅಂತ ಹೇಳುತ್ತಾನೆ. ಆತ ಅಲ್ಲಿಗೆ ಹೋದದ್ದು ಗೆಸ್ಟ್ ವೀಸಾದ ಅಡಿಯಲ್ಲಿ. ಹಾಗಿರುವಾಗ ಯಾವುದೇ ಪ್ರಾಬ್ಲಮ್ ಇರುವುದಿಲ್ಲ. ಆತ ಅಲ್ಲಿ ಕುಳಿತು ಕಿವಿಗೆ ಹೂವು ಇಡುತ್ತಿದ್ದಾನೆ ಅಷ್ಟೇ.. ಅನ್ನುತ್ತಿದ್ದಾರೆ ಆತನ ಹತ್ತಿರದಿಂದ ಬಲ್ಲವರು.

ಈ ಹಿಂದೆ ಗೋಲ್ಡ್‌ಸ್ಮಗ್ಲಿಂಗ್ ವಿಚಾರದಲ್ಲಿ ತಸ್ಲೀಮ್ ಎಂಬ ವ್ಯಕ್ತಿಯನ್ನು ಇದೆ ಸೈಫುದ್ದಿನ್ ಮತ್ತೆ ಕೆಲವರು ಸೇರಿಕೊಂದು ಹಿರಿಯಡ್ಕ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬಿಸಾಡುತ್ತಾರೆ. ಆ ಸಂದರ್ಭದಲ್ಲಿ ಸಹ ಈತ ಬೇಕಂತಾನೆ ಮಲೇಶಿಯಾಗೆ ಹೋಗಿ ಕುಳಿತುಕೊಂಡಿದ್ದ. ಕೈಗೆ ಎಲ್ಲಿ ರಕ್ತ ಅಂಟಿಕೊಂಡು ಬಿಡುತ್ತದೆ ಎಂಬ ಕಾರಣಕ್ಕೆ ಈ ರೀತಿಯ ನಡೆ ತೋರಿಸಿದ್ದ ಅನ್ನುವುದು ಸೈಪುದ್ದೀನ್ ಕುಟುಂಬಸ್ಥರ ಕಡೆಯಿಂದ ಬರುವಂತಹ ಮಾತು.

ನೋ ಡೌಟ್, ಈ ವಿಚಾರದಲ್ಲಿ ಅಕ್ರಮ್ ಪಕ್ಕ ಪ್ಲಾನ್ ಮಾಡಿದ್ದಾನೆ. ಅವನಿಗೆ ಗೊತ್ತು ಸೈಫು ಯಾರನ್ನು ನಂಬುವುದಿಲ್ಲ, ಎಲ್ಲರನ್ನು ಹತ್ತಿರಕ್ಕೆ ಬಿಟ್ಟುಕೊಳ್ಳುವುದಿಲ್ಲ, ಮನೆಯ ಒಳಕ್ಕೂ ತೆಗೆದುಕೊಳ್ಳುವವನಲ್ಲ ಅನ್ನೋದು ಗೊತ್ತಿದೆ ಹಾಗಾಗಿಯೇ ಸೈಪುದ್ದೀನ್ಗೆ ಪರಿಚಯಸ್ತರು ಹಾಗೂ ನಂಬುವಂತವರನ್ನೇ ಆಕ್ರಮ್ ತನ್ನ ಈ ಒಂದು ಪ್ಲಾನಿಗೆ ಬಳಸಿಕೊಳ್ಳುತ್ತಾನೆ. ಎಸ್, ಈಗ ಮೂವರು ಹಂತಕರು ಸರಂಡರ್ ಆಗಿದ್ದಾರೆ. ಶರೀಫ್, ಶುಕುರ್ ಯಾನೆ ಅದ್ದು, ಫಾಜಲ್ ಖಾನ್. ಈ ಮೂವರಲ್ಲಿ ಶರೀಫ್ ಮತ್ತು ಶುಕುರ್ ಇಬ್ಬರೂ ನಟೋರಿಟಿ ಹಿನ್ನೆಲೆಯವರೆ ಆಗಿದ್ದಾರೆ. ಸೈಪುದ್ದೀನ್ ಜೊತೆ ಹಲವು ಪ್ರಕರಣದಲ್ಲಿ ಭಾಗಿಯಾದವರು. ಶುಕೂರ್ ಅಂತೂ ಮರ್ಡರ್ ಕೇಸ್‌ನಲ್ಲಿಯೂ ಭಾಗಿಯಾಗಿದ್ದ. ಈ ಹಿಂದೆ ವಸಿಷ್ಠ ಮರ್ಡರ್ ಕೇಸಿನಲ್ಲಿ ಭಾಗಿಯಾಗಿದ್ದ ಶುಕುರ್, ಬರೋಬ್ಬರಿ ನಾಲ್ಕೂವರೆ ವರ್ಷ ಜೈಲಿನಲ್ಲಿರುತ್ತಾನೆ. ಆ ಪ್ರಕರಣದ ಪ್ರಮುಖ ಆರೋಪಿ ಸೈಪುದಿನ ಮೂರ್ನಾಲ್ಕು ತಿಂಗಳಲ್ಲೇ ಹೊರ ಬಂದರೆ ಶುಕೂರಿಗೆ ಜಾಮೀನು ಕೊಡಿಸಿರಲಿಲ್ಲ ಎಂಬ ನೋವು ಬೇಸರ ಎರಡು ಸೈಫುದ್ದೀನ್ ಮೇಲೆ ಇತ್ತು.

ಈ ಸೈಪುದ್ದಿನ್ ಹಣ ಕೊಡುವುದರಲ್ಲಿ ತುಂಬಾ ಹಿಂದೆ. ಮೊದಲಿಗೆ ಕೊಡುತ್ತೇನೆ ಎಲ್ಲಾ ನೋಡಿಕೊಳ್ಳುತ್ತೇನೆ ಅಂತೆಲ್ಲ ಹೇಳುತ್ತಾನೆ. ಕೆಲಸ ಆದ ಮೇಲೆ ಟೋಪಿ ಇಡುತ್ತಾನೆ. ಆತ ಎಲ್ಲರಿಗೂ ಇದೇ ಮಾಡುವುದು. ಜೊತೆಗಿದ್ದವರಿಗೂ ಹಣ ಕೊಡುತ್ತಿರಲಿಲ್ಲ. ಜೊತೆಗೆ ಕುಡಿದ ಮೇಲೆ ಆತ ರಕ್ಕಸನಂತಾಗುತ್ತಾನೆ. ಜೊತೆಗಿದ್ದವರ ಪರಿಚಯವು ಆತನಿಗೆ ಇರುವುದಿಲ್ಲ. ಬಾಯಿಗೆ ಬಂದಂತೆ ಬಯ್ಯುವ ರಕ್ಕಸ. ಆದರೆ ಮರುದಿನ ಬೆಳಗ್ಗೆ ಆತನಿಗೆ ಅದ್ಯಾವುದು ನೆನಪೇ ಇರುವುದಿಲ್ಲ. ಅವನಾಗೆ ಬಹಳ ಆಪ್ತನಾಗಿ ಮಾತನಾಡುತ್ತಾನೆ. ಆತನ ಈ ರೀತಿಯ ನಡವಳಿಕೆಯ ಬಗ್ಗೆಯೂ ಹಲವರಲ್ಲಿ ಬೇಸರ ಇತ್ತು. ಆದರೆ ಅವನಲ್ಲಿರುವ ಹಣ ಅವರೆಲ್ಲರ ಕೈಕಟ್ಟಿ ಹಾಕಿತ್ತು. ಅಕ್ರಮ್ ಮಾತ್ರ ಬುದ್ಧಿವಂತ. ಆತನ ಎಲ್ಲಾ ಬೈಗುಳ ಸಹಿಸಿಕೊಂಡು ಸೈಪುದ್ದೀನ ಕೃಪೆಗೆ ಪಾತ್ರನಾಗುತ್ತಾನೆ. ಬುದ್ಧಿವಂತಿಕೆಯಿಂದ ಆತನ ಕ್ರಿಮಿನಲ್ ಆಕ್ಟಿವಿಟೀಸ್‌ನಲ್ಲಿ ನೇರವಾಗಿ ಕಾಣಿಸಿಕೊಳ್ಳದೆ ತನ್ನ ಹೆಸರಿನಲ್ಲಿ ಒಂದಿಷ್ಟು ಆಸ್ತಿ ಬರುವಂತೆ ನೋಡಿಕೊಳ್ಳುತ್ತಾನೆ. ಅದರ ಪರಿಣಾಮ ಇವತ್ತು ಅಕ್ರಮ್ ಕೋಟ್ಯಾಧಿಪತಿ. ಏನೇನು ಇಲ್ಲದ ಆಕ್ರಂ, ಸೈಫುದ್ದೀನ್ ಕಾರಣದಿಂದ ಹಣವಂತನಾಗಿದ್ದಾನೆ. ಆದರೆ ಆ ಆಸ್ತಿಯನ್ನು ಕೇಳಲು ಪ್ರಾರಂಭಿಸಿದ ತಕ್ಷಣವೇ ವ್ಯವಹಾರಗಳನ್ನೆಲ್ಲ ಬದಿಗೊತ್ತಿ ವಿದೇಶಕ್ಕೆ ಹಾರುತ್ತಾನೆ. ಅಲ್ಲಿಂದಲೇ ಎಲ್ಲವೂ ಡೀಲ್ ಮಾಡಿದನಾ? ಎಂಬ ಅನುಮಾನವೂ ಈಗ ಬೃಹದಾಕಾರವಾಗಿ ಬೆಳೆಯುತ್ತಿದೆ.

ಹೆಂಡತಿ ಬೇಕು ಅಂದ; ಈಗ ಬಂಧನ ಕೊಳಗಾಗಿರುವ ಪೈಕಿ ಒಬ್ಬ ಫಾಜಲ್ಖಾನ್ ನಟೋರಿಟಿ ವ್ಯಕ್ತಿಯಲ್ಲ. ಆತ ಮತ್ತು ಆತನ ಹೆಂಡತಿ ಇಬ್ಬರು ಸೈಪುದ್ದೀನ್ ಮನೆಯಲ್ಲೇ ಬಹುತೇಕ ಸಮಯ ಕಳೆಯುತ್ತಾರೆ. ಫಾಜಲ್‌ನ ಹೆಂಡತಿ ಸುರಸುಂದರಾಂಗಿ ಅನ್ನುವುದರಲ್ಲಿ ಎರಡು ಮಾತಿಲ್ಲ ಅನ್ನಲಾಗುತ್ತದೆ. ಅವಳ ಮೇಲೆ ಸೈಪುದ್ದಿನ ಕಣ್ಣು ಬಿತ್ತಾ? ಸೈಪುದ್ದಿನ್ ಇಲ್ಲಿಯವರೆಗಿನ ಹಿಸ್ಟರಿ, ಈ ಒಂದು ವಿಚಾರಕ್ಕೆ ವಿರುದ್ಧವಾಗಿದೆ. ಆತ ಹೆಣ್ಣುಬಾಕನಲ್ಲ ಅನ್ನಲಾಗುತ್ತದೆ. ಆ ಒಂದು ವಿಚಾರದಲ್ಲಿ ಆತ ಕಾಣಿಸಿಕೊಳ್ಳುವುದಿಲ್ಲ. ಹಾಗಾಗಿಯೇ ಆತ ವಿರೋಧಿಗಳ ಕೈಗೆ ಎಲ್ಲಿಯೂ ಸಿಕ್ಕಿಲ್ಲ. ಆದರೆ ಹಂತಕರು ಈಗ ಅಲ್ಲಲ್ಲಿ ಹೇಳಿಕೊಳ್ಳುತ್ತಿರುವ ಪ್ರಕಾರ ಸೈಪುದ್ದಿನ್ ತೀರ ಇತ್ತೀಚೆಗೆ ಮುಂಬೈಗೆ ಹೋದಾಗ ಕುಡಿದ ಮತ್ತಿನಲ್ಲಿ ನಿನ್ನ ಹೆಂಡತಿಯನ್ನು ನನಗೆ ಕೊಡು, ನನ್ನ ಹೆಂಡತಿ ನಿನಗೆ ಕೊಡುತ್ತೇನೆ.. ಎಂಬ ಆಫರ್ ಕೊಟ್ಟನಂತೆ. ಇದುವೇ ಕೊಲೆಗೆ ಕಾರಣ ಅಂತ ಹೇಳುತ್ತಾನಂತೆ. ಪೊಲೀಸರ ಮುಂದೆ ತಂದೆ-ತಾಯಿಗೆ ಬೈದ ಎಂಬ ಕಾರಣಕ್ಕೆ


ಸೈಪುದ್ದೀನ್‌ನ ಮೃತದೇಹ


ಕೊಲೆ ಮಾಡಿದ್ದೇವೆ ಅಂತ ಕಥೆಯನ್ನು ಹೇಳಿದ್ದಾರೆ. ಅದೇನೇ ಇರಲಿ, ಅವರ ಈ ಎಲ್ಲಾ ಕಥೆಯು ಟುಸ್ ಪಟಾಕಿಯೇ. ಇದರ ಹಿಂದೆ ಪಕ್ಕ ಸುಪಾರಿ ಕಥೆ ಇದೆ. ಆ ಸುಪಾರಿ ಕಥೆ ಓಪನ್ ಆಗಬೇಕು ಅಷ್ಟೇ. ವಿದೇಶದಲ್ಲಿ ಕುಳಿತ ಅಕ್ರಮ್ ಭಾರತಕ್ಕೆ ಬಂದರೆ ಆತನನ್ನು ಬಿಡಲು ಸೈಪುದ್ದೀನ್ನ ಕುಟುಂಬ ತಯಾರಿಲ್ಲ.. ಎಂಬ ಮಾಹಿತಿಯು ಬರುತ್ತಿದೆ. ಅವರ, ಪ್ರಕಾರ ಅಕ್ರಂನೆ ಈ ಎಲ್ಲಾ ತಂತ್ರಗಾರಿಕೆಯ ರೂವಾರಿ. ಈ ನಿರ್ಧಾರಕ್ಕೆ ಬಂದಾಗಿದೆ ಕೂಡ. ಹಾಗಾಗಿ ಆತನನ್ನು ಅವರು ಸುಮ್ಮನೆ ಬಿಡುತ್ತಾರಾ? ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಂಡರು ನಮ್ಮಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಮೆಸೇಜನ್ನು ಈಗಾಗಲೇ ಅಕ್ರಂಗೆ ತಲುಪಿಸಿಯಾಗಿದೆಯಂತೆ. ಅದರ ಅರ್ಥ ಸೈಪುದ್ದಿನ್ ಹತ್ಯೆಗೆ ರಿವೆಂಜ್ ಖಚಿತ ಎನ್ನಲಾಗುತ್ತದೆ. ಈಗ ಒಳಗೆ ಹೋಗಿರುವಂತಹ ಹಂತಕರಿಗೂ ಜೀವ ಭಯ ಇದ್ದದ್ದೇ ಬಿಡಿ. ಒಂದೊಮ್ಮೆ ರಿವೇಂಜ್ ನಡೆಯಬಾರದು ಎಂದರೆ ಈ ಪ್ರಕರಣದ ಆರೋಪಿಗಳು ಮತ್ತು ಸುಪಾರಿ ನೀಡಿದವರು ಜೀವಾವಧಿ ಶಿಕ್ಷೆಗೆ ಒಳಗಾಗಿ ಜೈಲಿನ ಒಳಗೇನೇ ಇರಬೇಕು ಅಷ್ಟೇ. ಹಾಗಿದ್ದರೆ ಅವರು ಸೇಫ್ ಎಂಬ ವಾತಾವರಣ ಸದ್ಯಕ್ಕೆ ಇದೆ.

ಮಲ್ಪೆ ಪೊಲೀಸ್ ಠಾಣೆಯಲ್ಲಿ ಈ ಹತ್ಯೆಯ ವಿಚಾರವಾಗಿ ಪ್ರಕರಣ ದಾಖಲಾಗಿದೆ. ಮೂವರು ಆರೋಪಿಗಳು ಒಳಗಿದ್ದಾರೆ. ಅವರಿಂದ ನೈಜ ಸತ್ಯವನ್ನು ಹೊರಗೆ ಹಾಕುವ ಕೆಲಸ ಈಗ ಪೊಲೀಸರಿಂದ ಆಗಬೇಕು. ಹಾಗಾದಲ್ಲಿ ಮಾತ್ರ ಉಡುಪಿ ಮತ್ತೆ ಶಾಂತವಾಗಬಹುದು ಇಲ್ಲದಿದ್ದರೆ ಮತ್ತೆ ಸರಪಳಿ ಶುರುವಾಗಬಹುದು.

**ಆಚಂಗಿ ಮಹೇಶನ ಟೀಮ್ ಬಂದು ಫೇಲಾಗಿತ್ತು.**

ಈ ಹಿಂದೆ ಮಣಿಪಾಲಕ್ಕೆ ಇದೆ ಸೈಪುದ್ದಿನನ್ನು ಕೊಲ್ಲಲು ಆಚಂಗಿ ಮಹೇಶ್ ತನ್ನ ಹುಡುಗರನ್ನು ಕಳುಹಿಸಿದ್ದ. ಆವತ್ತು ಸೈಪುದ್ದೀನ್ ಆಯುಷ್ಯ ಮುಗಿದಿರಲಿಲ್ಲ. ಆ ಕಾರಣಕ್ಕಾಗಿಯೇ ಆವತ್ತು ಆಚಂಗಿಯ ಹುಡುಗರ ಕೈಲಿಂದ ಬಚಾವಾಗಿದ್ದ. ಅವತ್ತು ಆ ಹುಡುಗರು ಎಡವಟ್ಟು ಮಾಡಿಕೊಂಡು ಪೊಲೀಸರ ಬಲೆಗೆ ಬಿದ್ದಿದ್ದರು.

ಅಲ್ಲಿಂದ ಈ ಸೈಪುದ್ದಿನ್ ಯಾರನ್ನು ನಂಬುತ್ತಿರಲಿಲ್ಲ. ಯಾರ ಜೊತೆಗೂ ಹೆಚ್ಚು ಹೊತ್ತು ನಿಲ್ಲುತ್ತಿರಲಿಲ್ಲ. ಕೇವಲ ತಾನು ನಂಬಿದ ಆಪ್ತರಿಗೆ ಮಾತ್ರ ತನ್ನ ಕಾರಿನಲ್ಲಿ ಜಾಗ ಹಾಗೂ ಮನೆಗೆ ಪ್ರವೇಶ. ಈ ಕಾರಣದಿಂದಾಗಿ ಸೈಪುದ್ದಿನನ್ನು ಮುಟ್ಟಲು ಆತನ ವಿರೋಧಿಗಳಿಗೆ ಸಾಧ್ಯವಾಗಿರಲಿಲ್ಲ. ಈತ ಹಲವು ಪ್ರಕರಣಗಳಲ್ಲಿ ಆರೋಪಿ. ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್ ಹತ್ತಿರ ಇರುವ ಬಿಲ್ಡಿಂಗ್ ಒಂದರ ಮಾಲೀಕನಿಗೆ ಕೈ ಕಡಿದು ರೌಡಿಸಂ ತೋರಿಸಿದ್ದ. ಹೀಗೆ ಹಲವರ ವಿರುದ್ಧ ಈತ ತನ್ನ ಪ್ರತಾಪ ತೋರಿಸಿದ್ದ. ಆತ ಪ್ರತಾಪ ತೋರಿಸುತ್ತಿದ್ದು ಬಹುತೇಕ ಮುಸ್ಲಿಂ ಸಮಾಜದವರ ಬಳಿಯೇ. ಬಹುಷ್ಯ ಹಿಂದೂ ಸಮುದಾಯದವರ ತಂಟೆಗೆ ಹೋಗಿದ್ದರೆ ಕಷ್ಟವಾಗುತ್ತಿತ್ತೋ ಏನೋ..? ಅವನ ಅದೃಷ್ಟವೂ ಚೆನ್ನಾಗಿತ್ತು. ಅಷ್ಟೆಲ್ಲ ದೌರ್ಜನ್ಯಗಳನ್ನು ಮಾಡಿ ಇಲ್ಲಿಯವರೆಗೆ ಬದುಕುಳಿದಿದ್ದ. ಈತ ದೌರ್ಜನ್ಯ ನಡೆಸಿದವರ ಲಿಸ್ಟ್ ಅಕ್ರಂನ ಬಳಿ ಇತ್ತು. ಹಾಗಾಗಿ ಅಕ್ರಂ ಅವರೆಲ್ಲರ ಸಹಾಯ ಪಡೆದು ಸುಪಾರಿ ನೀಡಿದನಾ ಎಂಬ ಪ್ರಶ್ನೆಯು ಇದೆ. ಈ ಒಂದು ಹತ್ಯೆ ಕಾರಣದಿಂದ ಒಂದಷ್ಟು ಕಾಸು ಮಾಡಿಕೊಳ್ಳುವ ಪ್ಲಾನ್‌ನನ್ನು ಅಕ್ರಮ್ ಮಾಡಿದನಾ?



# ಸಿನಿಮಾ ಪ್ರೇಮಿಗಳೇ ಟಿಕೆಟ್ ಬಿಸಾಡಬೇಡಿ...ಇಟ್ಟ್ರಿ!!

ಒಂದು ತಿಂಗಳ ಹಿಂದೆ ಕರ್ನಾಟಕ ರಾಜ್ಯದಲ್ಲಿ ಸಿನಿಮಾ ವೀಕ್ಷಣೆಗಾಗಿ ಏಕರೂಪ ಟಿಕೆಟ್ ದರ 236/- (ತೆರಿಗೆ ಸೇರಿ)ವಿಧಿಸಿ ಆದೇಶ ಜಾರಿಯಾಗಿತ್ತು. ಆದರೆ, ಇದರ ವಿರುದ್ಧ ಮಲ್ಟಿಪ್ಲೆಕ್ಸ್ ಮಂದಿ ಹಾಗೂ ಕಾಂತಾರ ನಿರ್ಮಾಪಕ ವಿಜಯ್ ಕಿರಗಂದೂರು ಹೈಕೋರ್ಟ್ ಮೆಟ್ಟಿಲೇರಿದ್ದರು. ನಮ್ಮದು ದುಬಾರಿ ಸಿನಿಮಾ, ಟಿಕೆಟ್ ಬೆಲೆ ಹೆಚ್ಚಿಸದಿದ್ದರೆ ನಮಗೆ ಲಾಸ್ ಆಗುತ್ತೆ ಅನ್ನೋದು ಇವರ ವಾದ ವಾಗಿತ್ತು. ಇವರ ಅರ್ಜಿಯನ್ನು ಪುರಸ್ಕರಿಸಿದ್ದ ಹೈಕೋರ್ಟ್, ರಾಜ್ಯ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿತ್ತು.ಮತ್ತು ಈಗಲೂ ತಡೆ ಯಾಜ್ಞೆ ಮುಂದು ವರೆದಿದೆ.

ಈಗ ರಾಜ್ಯಸರ್ಕಾರ ತನ್ನ ಆದೇಶವನ್ನು ಸಮರ್ಥನೆ ಮಾಡಿಕೊಂಡು ಅದೇ ಹೈಕೋರ್ಟ್‌ನಲ್ಲಿ ಇನ್ನೊಂದು ಅರ್ಜಿ ಸಲ್ಲಿಸಿದೆ. ಇದರ ಪರಿಶೀಲನೆ ಮುಗಿದು ಸರ್ಕಾರದ ಆದೇಶಕ್ಕೆ ಗೆಲುವು ಸಿಕ್ಕುವ ಚಾನ್ಸ್ ಹೆಚ್ಚಾಗಿದೆ! ಹಾಗಾದರೆ, ಓ.ಜಿ, ಕಾಂತಾರ, ಇಡ್ಲಿ ಕಡೈ, ಮತ್ತಿತರೇ ಚಿತ್ರಗಳ ವಿತರ ಕರು ಕೊಳ್ಳೆ ಹೊಡೆದಿರೋ ದುಡ್ಡನ್ನು ಪ್ರೇಕ್ಷಕರಿಗೆ ವಾಪಸ್ ಕೊಡಬೇಕಾಗು ತ್ತದೆ! ಕನ್ನಡ ಸಿನಿಮಾ ಕಾಂತಾರಕ್ಕೆ ಈಗ ಮಲ್ಟಿಪ್ಲೆಕ್ಸ್‌ಗಳಲ್ಲಿ ರೂ. 1000, 550, ಸಿಂಗಲ್ ಸ್ಕ್ರೀನ್‌ಗಳಲ್ಲಿ 300, 200 ದರ ವಸೂಲಿ ನಡೆದಿದೆ.



ಕೆಲವು ಜಿಲ್ಲೆಗಳಲ್ಲಿ ತಾಲೂಕು ಗಳಲ್ಲಿ ಮಾತ್ರ ರೂ. 200, 150 ದರವಿದೆ. ಇವರಿಗೇನು ಸಮಸ್ಯೆ ಇಲ್ಲಾ. ಆದರೆ, 200 ಮೇಲ್ಪಟ್ಟುದರ ವಸೂಲಿ ಮಾಡಿದವರೆಲ್ಲ ಹೆಚ್ಚುವರಿ ಹಣವನ್ನ ವಾಪಸ್ ನೀಡಬೇಕಾಗುತ್ತದೆ. ಹೀಗಾಗಿ, ಈಗ ಸಿನಿಮಾ ನೋಡಿರೋ, ನೋಡ್ತಿರೋ ಪ್ರೇಕ್ಷಕರು ದಯ ವಿಟ್ಟು ಅರ್ಧ ಟಿಕೆಟ್ ಅನ್ನು ಬಿಸಾಡದೇ ಹಾಗೇ ಇಟ್ಟ್ರಿ. ಆನ್‌ಲೈನ್ ಬುಕಿಂಗ್ ಆಗಿದ್ರೆ ಇನ್ನೂ ಒಳ್ಳೇದು. ಡಿಜಿಟಲ್ ಸಾಕ್ಷಿ ಇರುತ್ತದೆ. ಈ ಪ್ರಕರಣದ ಬಗ್ಗೆ ಇದೀಗ ಇನ್ನೊಂದು ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ.

ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಧಾನ ಪೀಠದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ: 1623/ 2025ರ (ಕರ್ನಾಟಕ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿ ವಿರುದ್ಧ, ಮಲ್ಟಿಪ್ಲೆಕ್ಸ್ ಅಸೋಸಿಯೇಷನ್ ಇಂಡಿಯಾ) ಪ್ರಕರಣದಲ್ಲಿ ದಿನಾಂಕ:30.09.2025ರಂದು ಮಾನ್ಯ ನ್ಯಾಯಾಲಯವು ಸಿನಿಮಾ ಟಿಕೆಟ್‌ಗಳ ಮೇಲೆ ವಿಧಿಸಿದ್ದ 200 ರೂ. ಗಳ ಮಿತಿಗೆ ದಿನಾಂಕ: 23.09.2025 ರಂದು ನೀಡಿದ ತಡೆಯಾಜ್ಞೆಯನ್ನು ಮುಂದುವರೆಸುವ ಜೊತೆಗೆ, ಈ ಕೆಳಕಂಡಂತೆ ಆದೇಶಿಸಿರುತ್ತದೆ.

ಪ್ರತಿವಾದಿ ಸಂಖ್ಯೆ 1 ಮತ್ತು ಅದರ ಅಡಿಯಲ್ಲಿ ಕಾರ್ಯನಿರ್ವಹಿ ಸುವ ಎಲ್ಲಾ ಮಲ್ಟಿಪ್ಲೆಕ್ಸ್‌ಗಳು, ಮಾರಾಟವಾದ ಪ್ರತಿಯೊಂದು ಟಿಕೆಟ್‌ಗೆ ಸಮಗ್ರ ಮತ್ತು ಲೆಕ್ಕ ಪರಿಶೋಧಿ ಸಬಹುದಾದ ದಾಖಲೆಗಳನ್ನು ನಿರ್ವಹಿಸಲು ನಿರ್ದೇಶಿಸಲಾಗಿದ್ದು, ದಾಖಲೆಗಳು ಈ ಕೆಳಗಿನವುಗಳನ್ನು ಒಳಗೊಂಡಿರಬೇಕು.

ಮಾರಾಟದ ದಿನಾಂಕ ಮತ್ತು ಸಮಯ, ಆನ್‌ಲೈನ್ ಅಥವಾ ಭೌತಿಕ ಕೌಂಟರ್‌ಗಳಲ್ಲಿ ಬುಕಿಂಗ್ ಮಾಡಿರುವ ವಿವರ, ಕ್ರೆಡಿಟ್/ಡೆಬಿಟ್ ಕಾರ್ಡ್, ಯುಪಿಐ ನೆಟ್ ಬ್ಯಾಂಕಿಂಗ್ ಅಥವಾ ನಗದು ಪಾವತಿ ಮಾಡಿರುವ ವಿವರ, ಸಂಗ್ರಹಿಸಿದ ಮೊತ್ತ, ಜಿಎಸ್‌ಟಿ ಘಟಕ. ಎಲ್ಲಾ ನಗದು ವಹಿವಾಟುಗಳಿಗೆ ಡಿಜಿಟಲ್ ಆಗಿ ಪತ್ತೆಹಚ್ಚಬಹುದಾದ ರಶೀದಿಗಳನ್ನು ನೀಡಬೇಕು ಮತ್ತು ಪ್ರತಿದಿನ ಕ್ಯಾಶ್ ರಿಜಿಸ್ಟರ್‌ಗಳನ್ನು ಮಲ್ಟಿಪ್ಲೆಕ್ಸ್‌ನ ವ್ಯವಸ್ಥಾಪಕರು ಪ್ರತಿ ಸಹಿ ಮಾಡಬೇಕು.

ಅರ್ಜಿದಾರರು ಈ ಮೇಲ್ಮನವಿ/ಅರ್ಜಿಯ ಅಂತಿಮ ತೀರ್ಪಿನಲ್ಲಿ ಸಿಲುಕಿದರೆ, ಈ ನಿರ್ಬಂಧದ ಬಾಕಿ ಇರುವ ಸಮಯದಲ್ಲಿ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ (ಅನ್ವಯವಾಗುವ ಜಿಎಸ್‌ಟಿ ಹೊರತುಪಡಿಸಿ) ಸಂಗ್ರಹಿಸಿದ ಎಲ್ಲಾ ಮೊತ್ತವನ್ನು ಟಿಕೆಟ್‌ಗಳನ್ನು ಬುಕ್ ಮಾಡಿದ ವೈಯಕ್ತಿಕ ಗ್ರಾಹಕರಿಗೆ ಬುಕಿಂಗ್‌ಗೆ ಬಳಸುವ ಅದೇ ಪಾವತಿ ವಿಧಾನದ ಮೂಲಕ ಮರುಪಾವತಿಸ ಬೇಕು.

ಪ್ರತಿವಾದಿ ಸಂಖ್ಯೆ 1 ಇಂದಿನಿಂದ 45 ದಿನಗಳಲ್ಲಿ ಪರವಾನಗಿ ಪ್ರಾಧಿಕಾರಕ್ಕೆ ಮರುಪಾವತಿ ಪ್ರಕ್ರಿಯೆ ಯೋಜನೆಯನ್ನು ಅನುಮೋದನೆಗಾಗಿ ಸಲ್ಲಿಸಬೇಕು, ಇದು ಗ್ರಾಹಕರಿಗೆ ಮರುಪಾವತಿ ಮಾಡುವ ಕಾರ್ಯ ವಿಧಾನವನ್ನು ವಿವರಿಸುತ್ತದೆ. ಪರವಾನಗಿ ಪ್ರಾಧಿಕಾರದಿಂದ ಅನುಮೋದನೆಯ ನಂತರ ಅದನ್ನು ಅಂತಿಮ ಅನು ಮೋದನೆಗಾಗಿ ಈ ನ್ಯಾಯಾಲಯದ ಮುಂದೆ ಇಡ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ, ಸಾರ್ವಜನಿಕರು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ತೀರ್ಪಿನನ್ವಯ, ಹಾಲಿ ಚಲನಚಿತ್ರ ಪ್ರದರ್ಶನಕ್ಕೆ ನೀಡಿರುವ ದರಕ್ಕೆ ಸಂಬಂಧಿಸಿ




ದಂತೆ ಭೌತಿಕವಾಗಿ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಪಡೆದ ಟಿಕೆಟ್‌ಗಳನ್ನು ಭದ್ರವಾಗಿ ಕಾಯ್ದಿರಿಸಿಕೊಳ್ಳತಕ್ಕದ್ದು, ಹಾಗೆಯೇ, ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳ ಮಾಲೀಕರು ಎಲ್ಲಾ ರೀತಿಯಾ ಸಿನಿಮಾ ಟಿಕೆಟ್‌ಗಳ ಮಾರಾಟದ ಸಂಪೂರ್ಣ ದಾಖಲೆಗಳನ್ನು ನಿರ್ವಹಿಸಬೇಕಾಗಿರುತ್ತದೆ.

ಈ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ / ಅಪೀಲು ಸಂಬಂಧದಲ್ಲಿ ನೀಡುವ ಅಂತಿಮ ಆದೇಶದಲ್ಲಿ ಅರ್ಜಿದಾರರಿಗೆ ಹಿನ್ನಡೆಯಾದಲ್ಲಿ ಗ್ರಾಹಕರಿಂದ ಸಂಗ್ರಹವಾದ ಹೆಚ್ಚುವರಿ ಮೊಬಲಗನ್ನು ಅವರುಗಳು ಪಾವತಿಸಿದ ವಿಧಾನದಲ್ಲಿಯೇ ಹಿಂದಿರುಗಿ ಸಲು ಅನುಕೂಲವಾಗುವಂತೆ ಅರ್ಜಿದಾರರು, ರಾಜ್ಯ ಹಾಗೂ ಗ್ರಾಹಕರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಮೇಲಿನ ನಿರ್ದೇಶನಗಳನ್ನು ನೀಡಿರುತ್ತದೆ ಎಂದು ಒಳಾಡ ಳಿತ ಇಲಾಖೆಯ (ಸೆರೆಮನೆ ಮತ್ತು ಸಿನಿಮಾ) ಸಾರ್ವ ಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ☯

# ಆಂಧ್ರ ತೆಲಂಗಾಣದಲ್ಲಿ 'ಕಾಂತಾರ'ಗೆ ಬಹಿಷ್ಕಾರ?!



ಸಿನಿಮಾ, ಸಂಗೀತ, ಕ್ರೀಡೆ ಮತ್ತು ಸಾಂಸ್ಕೃತಿಕ ಕಲೆಗಳಿಗೆ ಭಾಷೆ, ಪ್ರದೇಶ, ಜಾತಿ ಅಥವಾ ಧರ್ಮದ ಮಿತಿಗಳಿಲ್ಲ, ಎಲ್ಲವರ್ಗದ ಜನರನ್ನು ರಂಜಿಸುವುದು ಮತ್ತು ಎಲ್ಲರಿಗೂ ಕನೆಕ್ಟ್ ಆಗುವುದು ಸಿನಿಮಾನೆ. ಸೋ, ಯಾರೇ ಆದರೂ ಸಿನಿಮಾ ವಿಚಾರದಲ್ಲಿ ರಾಜಕೀಯ ಮಾಡಬಾರದು.

ಕಳೆದ ಸೆಪ್ಟೆಂಬರ್ 25ರಂದು ಬಿಡುಗಡೆಯಾದ ಪವನ್ ಕಲ್ಯಾಣ್ ಅವರ 'ಓ.ಜಿ' ಚಿತ್ರವು ಕರ್ನಾಟಕದಲ್ಲಿ ಟಿಕೆಟ್ ಬೆಲೆ ಏರಿಕೆ ಮಾಡಿದ್ದನ್ನ ಹಾಗೂ ಮಡಿವಾಳ ಸಂಧ್ಯಾ ಟಾಕೀಸ್ ಮುಂಭಾಗ ಡಿಜೆ ಹಾಕೊಂಡು ಗಲಭೆ ಎಬ್ಬಿಸಿದ್ದಕ್ಕೆ ಇಲ್ಲಿನ ಕನ್ನಡಿಗರು ವಿರೋಧಿಸಿದ್ದರು. ಇದಕ್ಕೆ ಕೆಲ ಪವನ್ ಕಲ್ಯಾಣ್ ಅಭಿಮಾನಿಗಳು ಈಗ ಆಂಧ್ರ ಪ್ರದೇಶದಲ್ಲಿ ರಿಲೀಸ್ ಆಗಿರೋ ಕನ್ನಡ ಚಿತ್ರ 'ಕಾಂತಾರ: ಚಾಪ್ಟರ್ 1' ಅನ್ನು ನೋಡೋದು ಬೇಡ ಎಂದು ಕಿರಿಕ್ ಮಾಡ್ತಿದ್ದಾರೆ! ಆದರೆ ಸೂಪರ್‌ಸ್ಟಾರ್ ಪವನ್ ಕಲ್ಯಾಣ್ ಮಾತ್ರ ತಾವು ಸೇಡಿನ ಹಾದಿಯಲ್ಲಿ ನಡೆಯಲು ಬಯಸುವು ದಿಲ್ಲ ಎಂದಿದ್ದಾರೆ.



ಕಲೆ ಮತ್ತು ಸಿನಿಮಾ ಸಂತೋಷ ವನ್ನು ಹರಡಬೇಕು, ಸಂಸ್ಕೃತಿಗಳನ್ನು ಸೇತುವೆ ಮಾಡಬೇಕು ಮತ್ತು ಜನರನ್ನು ಬೇರ್ಪಡಿಸ ಬಾರದು, ಒಟ್ಟಿಗೆ ತರಬೇಕು. ಪ್ರತಿಯೊಬ್ಬ ವ್ಯಕ್ತಿಗೂ ತಾವು ಇಷ್ಟಪಡುವ ಸಿನಿಮಾ ನೋಡುವ ಹಕ್ಕಿದೆ. ನಿಮಗೆ ಒಂದು ಸಿನಿಮಾ ಇಷ್ಟವಾಗದಿದ್ದರೆ, ನೀವು ಅದನ್ನು ನೋಡದಿರಲು ಆಯ್ಕೆ ಮಾಡಬಹುದು. ಆದರೆ, ವೈಯಕ್ತಿಕ ದ್ವೇಷ ಅಥವಾ ಅಜೆಂಡಾಗಳನ್ನು ಬಳಸಿಕೊಂಡು ಸಿನಿಮಾಗಳನ್ನು ಗುರಿಯಾಗಿಸಿಕೊಳ್ಳುವುದು ಯಾರೇ ಆದರೂ ಒಪ್ಪುವಂತದ್ದಲ್ಲ.

ಇಂದು, ಭಾರತೀಯ ಸಿನಿಮಾವನ್ನು ಪ್ರಪಂಚದಾದ್ಯಂತ ಎಲ್ಲ ಭಾಷೆಗಳಲ್ಲಿ ಬಿಡುಗಡೆಗೊಳಿಸಿ ಸಂಭ್ರಮ ಪಡಲಾಗುತ್ತಿದೆ. ಇಂತಹ ಸಮಯದಲ್ಲಿ, ಕಲೆಯನ್ನು ಪ್ರಾದೇಶಿಕ ಮಿತಿಯೊಳಗೆ ಸೀಮಿತಗೊಳಿಸುವ ಯಾವುದೇ ಪ್ರಯತ್ನವನ್ನು ನಾವು ಬಲವಾಗಿ ತಿರಸ್ಕರಿಸಬೇಕು. ಒಳ್ಳೆಯ ಸಿನಿಮಾಗಳು ಎಲ್ಲಿಂದ ಬಂದರೂ, ಅವುಗಳನ್ನು ಬೆಂಬಲಿಸೋಣ ಅಲ್ಲವೇ. ಮೊನ್ನೆ ಇದನ್ನೇ ಡಿಸಿಎಂ ಪವನ್ ಕಲ್ಯಾಣ್ ಹೇಳಿದ್ದು... ಅವರು ನಿಜವಾಗಿಯೂ ಓ.ಜಿ. ☯

# ರಮ್ಯಾಗೆ ಅಶ್ಲೀಲ ಕಾಮೆಂಟ್ ಮಾಡಿದ್ದ ದರ್ಶನ್ ಫ್ಯಾನ್ಸ್‌ಗೆ ನೋ ಬೇಲ್!

ನಟಿ ರಮ್ಯಾಗೆ ಅಶ್ಲೀಲ ಕಾಮೆಂಟ್ ಮಾಡಿದ್ದ ಪ್ರಕರಣದಲ್ಲಿ ಅರೆಸ್ಟ್ ಆಗಿ ಎರಡು ತಿಂಗಳಿಂದ ಜೈಲ್‌ನಲ್ಲಿರುವ ಹನ್ನೆರಡು ಜನ ಆರೋಪಿಗಳಿಗೆ ಇನ್ನೂ ಜಾಮೀನು ಸಿಕ್ಕಿಲ್ಲ! ಕಳೆದ ಎರಡು ತಿಂಗಳಿನಿಂದ ಪರಪ್ಪನ ಅಗ್ರಹಾರ ಜೈಲಿನಲ್ಲೇ ಆರೋಪಿಗಳು ಕೊಳೆಯುತ್ತಿದ್ದಾರೆ. ಇತ್ತ ಸಿಸಿಬಿ ಪೊಲೀಸರು ರಮ್ಯಾ ವಿರುದ್ಧ ಅಶ್ಲೀಲ ಪ್ರಚಾರ ಮಾಡಿದ್ದ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಿದ ಬಳಿಕ, ತನಿಖೆ ಪೂರ್ಣಗೊಳಿಸಿ ಇನ್ನೊಂದು ವಾರದಲ್ಲಿ ಚಾರ್ಜ್‌ಶೀಟ್ ಹಾಕಲು ಸಿದ್ಧತೆ ನಡೆಸಿದ್ದಾರೆ.



ಕಳೆದ ಜುಲೈನಲ್ಲಿ ನಟಿ ರಮ್ಯಾ, ರೇಣುಕಾಸ್ವಾಮಿ ಕೊಲೆ ಕೇಸಲ್ಲಿ ನ್ಯಾಯ ಸಿಗಬೇಕು ಅಂತಾ ಕಾಮೆಂಟ್ ಮಾಡಿದ್ರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಹಲವರು ರಮ್ಯಾಗೆ ಅಶ್ಲೀಲ ಮೆಸೇಜ್ ಮಾಡಿದ್ದರು. ಈ ಸಂಬಂಧ 43 ಅಕೌಂಟ್‌ಗಳ ವಿರುದ್ಧ ಸೈಬರ್ ಕ್ರೈಂ ಪೊಲೀಸರು ಪ್ರಕರಣ ದಾಖಲು ಮಾಡಿ ದ್ದರು.

ಈ ಹಿನ್ನಲೆಯಲ್ಲಿ ಸಿಪಿ ಸೀಮಂತ್ ಕುಮಾರ್ ಸಿಂಗ್ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸಲು ಅಧಿಕಾರಿ ವರ್ಗಕ್ಕೆ ಸೂಚಿಸಿದ್ದರು. ಕೊಲೆ ಆರೋಪಿ ದರ್ಶನ್ ಮೇಲಿನ ದುರಭಿ ಮಾನದಲ್ಲಿ ಜೆಂಟ್ಲ್‌ವುಮೆನ್ ರಮ್ಯಾ ವಿರುದ್ಧ ಅಶ್ಲೀಲ ಕಾಮೆಂಟ್ ಮಾಡಿದ್ದ ಆರೋಪಿಗಳ ಪತ್ತೆ, ಅರೆಸ್ಟ್ ಆಯಿತು. ಎಲ್ಲರೂ ಇಂದಿಗೂ ಜೈಲ್ ಒಳಗಿದ್ದಾರೆ. ನೋ ಬೇಲ್... ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 5.10.2025

# ಕನ್ನಡಿಗರ ಮತ್ತೊಂದು ಹೆಮ್ಮೆ ಕಾಂತಾರ......(ಅಧ್ಯಾಯ-1)



ದಕ್ಷಿಣ ಮಾತ್ರವಲ್ಲದೆ ಉತ್ತರ ಭಾರತೀಯರನ್ನು ಕಾತರದಿಂದ ಕಾಯುವಂತೆ ಮಾಡಿದ್ದ ಕಾಂತಾರ ಅಧ್ಯಾಯ-1 ಕಳೆದ ಗುರುವಾರ ದೇಶ ವಿದೇಶದಾದ್ಯಂತ ಅದ್ದೂರಿಯಾಗಿ ಬಿಡುಗಡೆ ಆಗಿದ್ದು ನಿಮಗೆ ಗೊತ್ತೇ ಇದೆ. ರಿಷಬ್ ಶೆಟ್ಟಿ ನಟನೆ ಮತ್ತು ನಿರ್ದೇಶನದ ಈ ಚಿತ್ರವು ತುಳುನಾಡು ಸಂಸ್ಕೃತಿಯ ವೈಭವವನ್ನು ತೆರೆಮೇಲೆ ತೋರಿಸುತ್ತದೆ. ಚಿತ್ರದಲ್ಲಿ ರಿಷಬ್ ಶೆಟ್ಟಿ ಅಭಿನಯದ 'ಬೆರ್ಮೆ' ಪಾತ್ರವು ದೈವದ ರಕ್ಷಣೆಗೆ ನಿಂತು, ಪ್ರೇಕ್ಷಕರನ್ನು ರೋಮಾಂಚನಗೊಳಿಸುತ್ತದೆ. ಅದ್ದೂರಿ ಮೇಕಿಂಗ್ ಮತ್ತು ವೈಭವದ ದೃಶ್ಯಕಾವ್ಯವು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಮೂರು ವರ್ಷಗಳ ಹಿಂದೆ ತೆರೆಕಂಡಿದ್ದ 'ಕಾಂತಾರ' ಸಿನಿಮಾ ದೇಶಾದ್ಯಂತ ಮಾಡಿದ ಮೋಡಿ ಸಾಮಾನ್ಯದ್ದಲ್ಲ.



ಕರಾವಳಿ, ಮಲೆನಾಡು ಭಾಗಗಳಲ್ಲಿ ದೈವ, ಭೂತ, ಪಂಜುರ್ಲಿ...ಹೀಗೆ ನೂರಾರು ದೈವಗಳನ್ನು ಆರಾಧಿಸುತ್ತಾರೆ. ರಕ್ತ, ಮಾಂಸ ಬೇಡುವ ಈ ದೈವಗಳನ್ನು ದೇವರ ಸ್ಥಾನದಲ್ಲಿ ಕೂರಿಸುವುದಿಲ್ಲ, ಬದಲಿಗೆ ಶಿವಗಣಗಳೆಂದು ನಂಬುತ್ತಾರೆ! ಅಂಥದ್ದೇ ಶಿವಗಣಗಳ ಸಾಮ್ರಾಜ್ಯ ಕಾಂತಾರದ ಕಾಡು. ಆ ಕಾಡಿನಲ್ಲಿ ವಿರೋಧಿಗಳಿಂದ ದೈವವನ್ನು ಕಾಯುವವನು ಕಥಾನಾಯಕ ಬೆರ್ಮೆ(ರಿಷಬ್ ಶೆಟ್ಟಿ).

ಒಂದು ಕಾಲದಲ್ಲಿ, ರಾಜಶೇಖರ (ಜಯರಾಮ್) ಎಂಬ ರಾಜನಿದ್ದ, ಅವನು ಕಾಂತಾರ ಭೂಮಿಯನ್ನು ಬ್ರಹ್ಮ ರಾಕ್ಷಸನ ಕೋಪದಿಂದ ಕಾಡುತ್ತಿದ್ದ. ಆತನ ಮಗ ಕುಲಶೇಖರ (ಗುಲ್ಶನ್ ದೇವಯ್ಯ) ತನ್ನ ತಂದೆಯ ಸಿಂಹಾಸನವನ್ನು ಆನುವಂಶಿಕವಾಗಿ ಪಡೆಯುತ್ತಾನೆ. ಆದರೆ ಆತನಿಗೆ ತನ್ನ ತಂದೆಯಷ್ಟು ಬುದ್ಧಿವಂತಿಕೆ ಇರುವುದಿಲ್ಲ, ಮಹಾ ದುಷ್ಟ. ಹೀಗಾಗಿ ಆತ ತೊಂದರೆಗೆ ಸಿಲುಕುತ್ತಾನೆ.

ರಾಜಶೇಖರನ ಮಗಳು ಕನಕಾವತಿ (ರುಕ್ಮಿಣಿ ವಸಂತ್) ಶಕ್ತಿಯಾಗಿ ಬೆಳೆಯುತ್ತಾಳೆ. ಕಥೆಗೆ ದೊಡ್ಡ ತಿರುವು ಕೊಡುವುದೇ ಈ ಕನಕಾವತಿ!

ಕ್ರಿ.ಶ.4-5 ಶತಮಾನದ ಕದಂಬರ ಆಳ್ವಿಕೆಯ ಸಮಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಸೃಷ್ಟಿಯಾದ ಮಾಯಾವಿಲೋಕವಿದು. ಕಾಡಿನಿಂದ ಹೊರಬಂದು ಸರಿಯಾಗಿ ಊರನ್ನೇ ನೋಡದ, ಮನುಕುಲದ ಸಂಪರ್ಕವೇ ಇಲ್ಲದ ಬೆರ್ಮೆ ಮತ್ತವನ ಸಂಗಡಿಗರು ಬಾಂಗ್ರಾ ಎಂಬ ರಾಜ್ಯಕ್ಕೆ ಕಾಲಿಡುತ್ತಾರೆ. ಬಾಂಗ್ರಾ ರಾಜ ಮನೆತನದ ಅರಸ ರಾಜಶೇಖರ ಮತ್ತು ಆತನ ಮಗ ಕುಲಶೇಖರನಿಗೂ ಹಾಗೂ ಈ ಕಾಂತಾರದ ಕಾಡಿಗೂ ಒಂದು ನಂಟಿರುತ್ತದೆ. ಅವರ ಅಜ್ಜನ ಕಾಲದಿಂದಲೂ ದ್ವೇಷವಿರುತ್ತದೆ. ಈಶ್ವರನ ಹೂದೋಟದ ಮೇಲೆ ಕಣ್ಣಿಟ್ಟವರ್‍ಯಾರು ಉಳಿಯುವುದಿಲ್ಲ, ಅದೇ ಹೂದೋಟದ ಕಾವಲುಗಾರ ಬೆರ್ಮೆ. ಬೆರ್ಮೆ ಮತ್ತು ರಾಜನ ನಡುವಿನ ಸಮರದಲ್ಲಿ ದೈವದ ಪಾತ್ರವೇನು? ದೈವಕ್ಕೂ ಹೂದೋಟಕ್ಕೂ ಯಾವ ನಂಟು? ಎಂಬುದನ್ನು ತೆರೆಮೇಲೆಯೇ ನೋಡಬೇಕು!

2022ರಲ್ಲಿ ಬಂದಿದ್ದ ಕಾಂತಾರ ಸಿನಿಮಾವು ಸಾಮಾನ್ಯ ಮೇಕಿಂಗ್‌ನಿಂದ ಕೂಡಿತ್ತು. ಕಥೆಗೆ ಎಷ್ಟು ಬೇಕೋ ಅಷ್ಟನ್ನು ಖರ್ಚು ಮಾಡಲಾಗಿತ್ತು. ಆದರೆ ಈ ಪ್ರೀಕ್ವೆಲ್‌ನಲ್ಲಿ ಅದ್ದೂರಿ ಮೇಕಿಂಗ್ ಇದೆ. ಒಂದಿಡೀ ಊರನ್ನೇ ಸೃಷ್ಟಿ ಮಾಡಲಾಗಿದೆ. ಜೊತೆಗೆ, ದೇವಸ್ಥಾನ, ಅರಮನೆ, ದರ್ಬಾರ್ ಮುಂತಾದ ಸೆಟ್‌ಗಳು ಗಮನ ಸೆಳೆಯುತ್ತವೆ. ಈಶ್ವರನ ಹೂದೋಟ ಎಂಬ ಕಾಡಿನೊಳಗಿನ ಜಗತ್ತು ಮತ್ತೊಂದು ಮಾಯಾ ಲೋಕವನ್ನೆ ತೆರೆದಿಡುತ್ತದೆ! ಸಿನಿಮಾದ ಅದ್ದೂರಿತನಕ್ಕೆ ವಿಎಫ್‌ಎಕ್ಸ್ ಮತ್ತಷ್ಟು ಮೆರಗು ನೀಡಿದೆ.



ರಾಕೇಶ್ ಪೂಜಾರಿ



ಸಿನಿಮಾದಲ್ಲಿ ಅದ್ದೂರಿತನಕ್ಕೆ ಎಲ್ಲಿಯೂ ಕೊರತೆ ಆಗದಂತೆ ಹೊಂಬಾಳೆ ಫಿಲ್ಮ್ಸ್ ನೋಡಿಕೊಂಡಿದೆ. ರಿಷಬ್ ಶೆಟ್ಟಿ ಅವರು ಸಿನಿಮಾವನ್ನ ತಾಂತ್ರಿಕವಾಗಿ ಅತ್ಯಂತ ಶ್ರೀಮಂತವಾಗಿ ಕಟ್ಟಿಕೊಟ್ಟಿದ್ದಾರೆ.

ಫಸ್ಟ್ ಹಾಫ್‌ನಲ್ಲಿ ಸಿನಿಮಾದ ಕಥಾ ವಿಸ್ತರಣೆ, ಪಾತ್ರ ಪರಿಚಯಗಳಿಂದ ಕೂಡಿದೆ. ಇಂಟರ್‌ವಲ್‌ಗೂ ಮುನ್ನ ಬರುವ ಒಂದು ದೃಶ್ಯ ರೋಮಾಂಚಕಾರಿಯಾಗಿದೆ. ಆದರೆ ಸೆಕೆಂಡ್ ಹಾಫ್‌ನಲ್ಲಿ ಆಕ್ಷನ್‌ಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ದೈವಗಳ 'ಅಬ್ಬರ' ಜೋರಾಗಿಯೇ ಇದೆ. ಯುದ್ಧದ ಸೀನ್‌ಗಳಲ್ಲಿ 'ಬಾಹುಬಲ' ಪ್ರದರ್ಶನ ಮಾಡಲಾಗಿದೆ. ಕ್ಲೈಮ್ಯಾಕ್ಸ್‌ನಲ್ಲಿ ಮತ್ತೊಂದು ರಣಭಯಂಕರ ಆಕ್ಷನ್ ಸೀನ್ ಅನ್ನು ಸಂಯೋಜಿಸಿಟ್ಟಿದ್ದಾರೆ ರಿಷಬ್ ಶೆಟ್ಟಿ. ಅವರು ಸಾಕಷ್ಟು ಕಡೆ ರಿಸ್ಕ್ ತೆಗೆದುಕೊಂಡು ತಾವು ಯಾವ ಆ್ಯಕ್ಷನ್ ಹೀರೋಗೂ ಕಮ್ಮಿಯಿಲ್ಲ ಎಂಬುದನ್ನು ನಿರೂಪಿಸಿದ್ದಾರೆ! ಕ್ಲೈಮ್ಯಾಕ್ಸ್‌ನಲ್ಲಿ ಬರುವ ಬ್ರಹ್ಮರಾಕ್ಷಸನ ಪಾತ್ರವಂತೂ ಹಾಲಿವುಡ್ ಸಿನಿಮಾದಂತೆ ಭಾಸವಾಗುತ್ತದೆ!

ಅರಸನ ಮಗಳು ಕನಕವತಿಯಾಗಿ ರುಕ್ಮಿಣಿ ವಸಂತ್ ಇಷ್ಟವಾಗುತ್ತಾರೆ. ಬಾಂಗ್ರಾ ರಾಜ ಮನೆತನದ ಅರಸರಾಗಿ ಜಯರಾಮ್ ಮತ್ತು ಅವರ ಮಗ ಕುಲಶೇಖರನಾಗಿ ಗುಲ್ಶನ್ ದೇವಯ್ಯ ಹಾಗೂ ಯಡಬಿಡಂಗಿ ಸೈನಿಕನಾಗಿ ಕಾಮಿಡಿ ಕಿಲಾಡಿ ರಾಕೇಶ್ ಪೂಜಾರಿ ಸಖತ್ ಮಿಂಚಿದ್ದಾರೆ. ಅಜನೀಶ್ ಲೋಕನಾಥ್ ಅವರ ಹಿನ್ನೆಲೆ ಸಂಗೀತ ಮೈನವಿರೇಳಿಸುವಂತಿದ್ದು ದೃಶ್ಯಗಳ ಮೆರುಗನ್ನು ಮತ್ತಷ್ಟು ಹೆಚ್ಚಿಸಿದೆ ಎಂದರೆ ತಪ್ಪಾಗಲಾರದು....

☯

# 'ಚಾರ್ಲಿ 777' ಸಿನಿಮಾಗೆ ನಾಲ್ಕು ರಾಜ್ಯ ಪ್ರಶಸ್ತಿ...







ಬೇರೆಲ್ಲ ರಾಜ್ಯಗಳಲ್ಲಿ ಆಯಾ ವರ್ಷದಲ್ಲಿ ಬಿಡುಗಡೆಯಾದ ಸಿನಿಮಾಗಳಿಗೆ ಮರು ವರ್ಷದಲ್ಲಿ ಪ್ರಶಸ್ತಿ ಘೋಷಣೆ ಆಗುತ್ತದೆ. ಆದರೆ ಕರ್ನಾಟಕ ರಾಜ್ಯದಲ್ಲಿ ನಾಲ್ಕು ವರ್ಷ ಬಿಟ್ಟು...ಆಗುತ್ತದೆ! ಸಮಾಧಾನ ಅಂದ್ರೆ ತಡವಾಗಿ ಯಾದ್ರೂ ಪ್ರಶಸ್ತಿ ಪುನಸ್ಕಾರ ಸಮಾರಂಭ ನಡೆಯುತ್ತದೆ ಅನ್ನೋದು!

ಪ್ರಸ್ತುತ 2021ನೇ ಸಾಲಿನ ಕನ್ನಡ ಸಿನಿಮಾಗಳಿಗೆ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರಕಟವಾಗಿದೆ. ರಕ್ಷಿತ್ ಶೆಟ್ಟಿ ಅಮೋಘ ಅಭಿನಯದ ಚಾರ್ಲಿ 777 ಚಿತ್ರಕ್ಕೆ 2ನೇ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಸಿಕ್ಕಿದೆ. ಅಲ್ಲದೆ ಅತ್ಯುತ್ತಮ ನಟನೆಗಾಗಿ ರಕ್ಷಿತ್ ಶೆಟ್ಟಿಗೆ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ಸಿಕ್ಕಿದೆ. ಜೊತೆಗೆ, ಅತ್ಯುತ್ತಮ ಸಂಕಲನ (ಪ್ರತೀಕ್ ಶೆಟ್ಟಿ), ಅತ್ಯುತ್ತಮ ಗೀತರಚನೆ (ನಾಗಾರ್ಜುನ) ಪಡೆದುಕೊಂಡಿದ್ದಾರೆ. ಒಟ್ಟಾರೆ, ಈ ಸಿನಿಮಾ ನಾಲ್ಕು ಪ್ರಶಸ್ತಿ ಗಳನ್ನು ಬಾಚಿಕೊಂಡಿದೆ. ಉಳಿದಂತೆ, ಅತ್ಯುತ್ತಮ ಸಿನಿಮಾ ದೊಡ್ಡಹಟ್ಟಿ ಬೋರೇಗೌಡ, ಮೂರನೇ ಅತ್ಯುತ್ತಮ ಚಿತ್ರವಾಗಿ ಬಗರ್‌ಹುಕುಂ ಭೂಮಿ ಹಿನ್ನೆಲೆಯ ಕಥೆಯುಳ್ಳ ಹಾಗೂ ಪತ್ರಕರ್ತ, ಕವಿ ಹೃದಯ ಶಿವ ಚಿತ್ರಿಸಿರುವ 'ಬಿಸಿಲುಕುದುರೆ' ಹಾಗೂ ಅತ್ಯುತ್ತಮ ಸಾಮಾಜಿಕ ಕಳಕಳಿ ಚಿತ್ರವಾಗಿ 'ಭಾರತದ ಪ್ರಜೆಗಳಾದ ನಾವು...' ಪ್ರಶಸ್ತಿ ಗಿಟ್ಟಿಸಿಕೊಂಡಿದೆ. ಅತ್ಯುತ್ತಮ ಮನರಂಜನ ವಿಭಾಗದಲ್ಲಿ ಪುನೀತ್ ರಾಜ್‌ಕುಮಾರ್ ಅಭಿನಯದ 'ಯುವರತ್ನ' ಪ್ರಶಸ್ತಿ ಪಡೆದುಕೊಂಡಿದೆ.



ಅತ್ಯುತ್ತಮ ನಟಿ ಪ್ರಶಸ್ತಿ 'ಮ್ಯೂಟ್' ಚಿತ್ರದ ನಟನೆಗಾಗಿ ಅರ್ಚನಾ ಜೋಯಿಸ್ ಅವರಿಗೆ ಸಿಕ್ಕಿದೆ. ಕೇಕ್ ಅತ್ಯುತ್ತಮ ಮಕ್ಕಳ ಚಿತ್ರ. ಅತ್ಯುತ್ತಮ ಪೋಷಕ ನಟ ಪ್ರಮೋದ್ (ರತ್ನನ್ ಪರ್ಪಂಚ) ಅತ್ಯುತ್ತಮ ಪೋಷಕ ನಟಿ ಉಮಾಶ್ರೀ (ರತ್ನನ್....) ಅತ್ಯುತ್ತಮ ಪ್ರಾದೇಶಿಕ ಚಿತ್ರ ನಾಡ ಪೆದ ಆಶಾ (ಕೊಡವ) ಅತ್ಯುತ್ತಮ ಪ್ರಥಮ ನಿರ್ದೇಶಕ 'ಬಡವ ರಾಸ್ಕಲ್' ಶಂಕರ್ ಗುರು... ☯






Vol. 41 No. 18 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com